
Swabhimani Sahakari
Pages : 36 / 12₹
Volume - 16
Issue - 11
November - 2019

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ




## ರಾಜ್ಯದ ಸೌಹಾರ್ದ ಸಹಕಾರಿಗಳಿಂದ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ರೂ 50 ಲಕ್ಷ ದೇಣಿಗೆ

## ಸೌಹಾರ್ದ ಸಹಕಾರಿಗಳನ್ನು ಸಹಕಾರಿ ಸಂಘಗಳಾಗಿ ಪರಿಗಣಿಸುವ ತಿದ್ದುಪಡಿಗೆ ಶ್ರೀಘ್ರದಲ್ಲಿಯೇ ಸುಗ್ರೀವಾಜ್ಞೆ : ಶ್ರೀ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವರು





ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ, ಮಾಜಿ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕರರಾದ ಶ್ರೀ ಹೆಚ್.ವಿ.ರಾಜೀವ, ಶ್ರೀ ಬಿ.ಎಸ್.ಗುಂಡೂರಾವ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರ ನಿಯೋಗದಿಂದ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸುತ್ತಿರುವ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿ



64ನೇ ಕರ್ನಾಟಕ ರಾಜ್ಯೋತ್ಸವ ಹಾಗೂ 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಶುಭಾಶಯಗಳು

ಸೌಹಾರ್ದ ಸಹಕಾರಿಗಳ ಸಂಖ್ಯೆ : 4826

ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 1291

# ಸೌಹಾರ್ದ ಸಹಕಾರಿ ಕಾಯ್ದೆಗೆ ಶೀಘ್ರದಲ್ಲಿ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿಗೆ ಹಾಗೂ ಬೆಂಗಳೂರು ಮತ್ತು ಬೆಳಗಾವಿ ದಾವಾಪಂಚಾಯಿತಿ ನ್ಯಾಯಾಲಯಗಳಿಗೆ ಪೀಠಾಧಿಕಾರಿ ಹಾಗೂ ವಸೂಲಾಧಿಕಾರಿ ವ್ಯವಸ್ಥೆ ಸರಿಪಡಿಸಿಕೊಡಲು ಸಹಕಾರ ಸಚಿವರ ಸಮ್ಮತಿ



ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ

“ ಕರ್ನಾಟಕ ಸರಕಾರದ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸೌಹಾರ್ದ ಸಹಕಾರಿ ಸಂಘ ಎಂಬ ಹೆಸರು ಇಲ್ಲದೆ ಸೌಹಾರ್ದ ಸಹಕಾರಿ ಎಂದು ಇರುವುದನ್ನು ಆದಾಯ ತೆರಿಗೆ ಇಲಾಖೆಯವರು ಸೌಹಾರ್ದ ಸಹಕಾರಿ ಸಂಸ್ಥೆಗಳು ಸಹಕಾರಿ ಸಂಸ್ಥೆಗಳೇ ಅಲ್ಲ ಎಂದು ವ್ಯಾಖ್ಯಾನಿಸಿ ಸೌಹಾರ್ದ ಸಹಕಾರಿಗಳು ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಆದಾಯ ತೆರಿಗೆ ಇಲಾಖೆಯವರು ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡುತ್ತಿರುವುದು ಸಹಕಾರಿಗಳ ಆರ್ಥಿಕ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ”

**ಆತ್ಮೀಯ ಸಹಕಾರಿ ಬಂಧುಗಳೇ**

ರಾಜ್ಯದ ಸಮಸ್ತ ಸೌಹಾರ್ದ ಸಹಕಾರಿಗಳಿಗೆ ಕನ್ನಡ ರಾಜ್ಯೋತ್ಸವ ಹಾಗೂ ಕನಕದಾಸ ಜಯಂತಿಯ ಹಾರ್ದಿಕ ಶುಭಾಶಯಗಳು. ಕನ್ನಡ ತಾಯಿ ಭುವನೇಶ್ವರಿ ಸಮಸ್ತ ಕನ್ನಡಿಗರಿಗೆ ಸುಖ ಶಾಂತಿ ನೆಮ್ಮದಿ ಹಾಗೂ ಉತ್ತರೋತ್ತರ ಅಭಿವೃದ್ಧಿಯನ್ನು ಮಾಡಿ ಹರಸಲಿ ಎಂದು ಪ್ರಾರ್ಥಿಸುತ್ತೇನೆ.

ಕರ್ನಾಟಕ ಸರಕಾರದ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿಯವರನ್ನು ಸಂಯುಕ್ತ ಸಹಕಾರಿಯ ನಿಯೋಗವು ಭೇಟಿ ಮಾಡಿ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸೌಹಾರ್ದ ಸಹಕಾರಿ ಸಂಘ ಎಂಬ ಹೆಸರು ಇಲ್ಲದೆ ಸೌಹಾರ್ದ ಸಹಕಾರಿ ಎಂದು ಇರುವುದನ್ನು ಆದಾಯ ತೆರಿಗೆ ಇಲಾಖೆಯವರು ಸೌಹಾರ್ದ ಸಹಕಾರಿ ಸಂಸ್ಥೆಗಳು ಸಹಕಾರಿ ಸಂಸ್ಥೆಗಳೇ ಅಲ್ಲ ಎಂದು ವ್ಯಾಖ್ಯಾನಿಸಿ ಸೌಹಾರ್ದ ಸಹಕಾರಿಗಳು ತೆರಿಗೆ ಪಾವತಿಸಬೇಕಾಗುತ್ತದೆ ಎಂದು ಆದಾಯ ತೆರಿಗೆ ಇಲಾಖೆಯವರು ಸೌಹಾರ್ದ ಸಹಕಾರಿಗಳಿಗೆ ನೋಟೀಸು ನೀಡುತ್ತಿರುವುದು ಸಹಕಾರಿಗಳ ಆರ್ಥಿಕ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಸೌಹಾರ್ದ ಸಹಕಾರಿಗಳು ಸಂಕಷ್ಟದಲ್ಲಿ ಸಿಲುಕಿವೆ. ಇದಕ್ಕಾಗಿ ಹಿಂದಿನ ಸರಕಾರದ ಗಮನಕ್ಕೆ ತರಲಾಗಿತ್ತು. ಕಾರಣಾಂತರಗಳಿಂದ ತಿದ್ದುಪಡಿಯಾಗದೆ ಉಳಿದಿದೆ. ಇದಕ್ಕಾಗಿ ತುರ್ತು ಸುಗ್ರೀವಾಜ್ಞೆಯ ಮೂಲಕ ತಿದ್ದುಪಡಿ ಮಾಡುವ ಅಗತ್ಯತೆ ವಿವರಿಸಲಾಗಿ ಸಚಿವರು ಶೀಘ್ರದಲ್ಲಿಯೇ ಸುಗ್ರೀವಾಜ್ಞೆಯ ಮೂಲಕ ತಿದ್ದುಪಡಿಗೆ ಕ್ರಮವಿಡಲಾಗುವುದೆಂದು ಭರವಸೆ ನೀಡಿರುವುದು ಸೌಹಾರ್ದ ಸಹಕಾರಿಗಳಿಗೆ ಸಂತೋಷವನ್ನು ತಂದಿದೆ.

ಇದರ ಜೊತೆಗೆ ರಾಜ್ಯದ ಸೌಹಾರ್ದ ಸಹಕಾರಿಗಳ ದಾವಾ ಪಂಚಾಯಿತಿ ನ್ಯಾಯಾಲಯದಲ್ಲಿ ಪ್ರಕರಣಗಳ ವಿಲೇವಾರಿ ವಿಳಂಬ ಹಾಗೂ ವಸೂಲಾಧಿಕಾರಿಗಳ ಕಾಯಂ ವ್ಯವಸ್ಥೆ ಇಲ್ಲದಿರುವುದು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಇದರಿಂದಾಗಿ ಹಿನ್ನಡೆಯಾಗುತ್ತಿದೆ. ಆದ್ದರಿಂದ ಬೆಳಗಾವಿ ವಿಭಾಗಕ್ಕೆ ಪ್ರತ್ಯೇಕ ಪ್ರಭಾರಿ ಆಧಾರದ ಮೇಲೆ ಬೆಳಗಾವಿಯ ಉಪನಿಬಂಧಕರನ್ನು ಪೀಠಾಧಿಕಾರಿಯನ್ನಾಗಿ, ಬೆಂಗಳೂರು ವಿಭಾಗದಲ್ಲಿ ಕಾಯಂ ಆಗಿ ಸಹಾಯಕ ನಿಬಂಧಕರನ್ನು ವಸೂಲಿ ಅಧಿಕಾರಿಯನ್ನಾಗಿ ಬೆಳಗಾವಿ ವಿಭಾಗಕ್ಕೆ ಒಬ್ಬ ಸಹಾಯಕ ನಿಬಂಧಕರನ್ನು ಪ್ರಭಾರಿಯಾಗಿ ನೇಮಕ ಮಾಡಿಕೊಡಲು ವಿನಂತಿಸಿರುವುದನ್ನು ಮಾನ್ಯ ಸಹಕಾರ ಸಚಿವರು ಒಪ್ಪಿ ಕೊಡಲೇ ಕ್ರಮವಿಡುವುದಾಗಿ ತಿಳಿಸಿರುವುದು ಸಹ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಚುರುಕುಮಾಡುವುದರಲ್ಲಿ ಸಹಕಾರಿಯಾಗುತ್ತದೆ.

ಈ ಎರಡು ಕ್ರಮಗಳು ಶೀಘ್ರದಲ್ಲಿ ಜಾರಿಯಾಗಿ ಸಹಕಾರ ಸಚಿವರ ಭರವಸೆಯಿಂದಾಗಿ ಸೌಹಾರ್ದ ಸಹಕಾರಿಗಳ ತೊಂದರೆಗಳು ನಿವಾರಣೆಯಾಗಲಿವೆ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಅಪೇಕ್ಷಿಸಿದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

**ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ**
ಗೌರವ ಅಧ್ಯಕ್ಷರು

**ಶ್ರೀ ಜಗದೀಶ ಕವಟಗಿಮಠ**
ಗೌರವ ಸದಸ್ಯರು

**ಶ್ರೀ ಶರಣಗೌಡ ಜಿ ಪಾಟೀಲ**
ಸಂಪಾದಕರು

**ಶ್ರೀ ವಿ.ಜೆ. ಕಾರಕೂನ**
ಸಂಚಾಲಕರು

**ಶ್ರೀ ರಘುನಂದನ ಕೆ.**
ಸದಸ್ಯರು

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
"ನಿರ್ಮಾನ ಭವನ", ಡಾ. ರಾಜಕುಮಾರ ರಸ್ತೆ,
1ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560010.
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್: souharda@souharda.coop
swabhimani@souharda.coop
ವೆಬ್‌ಸೈಟ್: www.souharda.coop

### ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 5–18
ಸಹಕಾರ ಚುನಾವಣಾ ಪ್ರಾಧಿಕಾರದ ಸುತ್ತೋಲೆ ........................................ 19–21
ಸೌಹಾರ್ದ ಸಹಕಾರಿಗಳ ಸಮಾಚಾರಗಳು ... ........................................ 22–25
ಲೇಖನ........................................ 26–36

# ಸಂಪಾದಕೀಯ

## ಸಹಕಾರ ರಂಗ ಡಿಫೆನ್ಸಲೆಸ್ ಆಗಿದೆ ಎಂಬ ಸಹಕಾರ ಸಚಿವರ ವಿಶ್ಲೇಷಣೆ. ಸಹಕಾರಿಗಳಿಗೆ ಎಚ್ಚರಿಕೆಯ ಗಂಟೆ.

66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವ ಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾನ್ಯ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಬಸವರಾಜ ಬೊಮ್ಮಯಿಯವರು ಸಹಕಾರಿ ಕ್ಷೇತ್ರ ಡಿಫೆನ್ಸಲೆಸ್ (ರಕ್ಷಣೆ ಇಲ್ಲದ ಕ್ಷೇತ್ರ) ಎಂದು ವಿಶ್ಲೇಷಿಸಿರುವುದು ಕಟು ಸತ್ಯ ಆದರೆ ಅರಗಿಸಿಕೊಳ್ಳುವುದು ಬಲು ಕಷ್ಟ. ಸತ್ಯ ಅಪ್ರೀಯವಾದರೂ ಸಹಕಾರಿಗಳಿಗೆ ಇದು ಎಚ್ಚರಿಕೆಯ ಮಾತು. ಈ ಕ್ಷೇತ್ರದ ಬಗ್ಗೆ ಇನ್ನಾದರೂ ಎಚ್ಚೆತ್ತುಕೊಂಡು ಪ್ರಾಮಾಣಿಕವಾಗಿ ಸಹಕಾರ ತತ್ವಗಳಡಿಯಲ್ಲಿ ಕ್ರಿಯಾಶೀಲರಾಗಿ ಕಾರ್ಯನಿರ್ವಹಿಸಿ ಸಹಕಾರ ಕ್ಷೇತ್ರ ಅಭಿವೃದ್ಧಿಗೆ ಶ್ರಮಿಸುವಂತಾಗಬೇಕು.

115 ವರ್ಷಗಳ ಸಹಕಾರ ಚಳುವಳಿ, ಗ್ರಾಮೀಣ ಪ್ರದೇಶಗಳಿಂದ ರಾಷ್ಟ್ರಮಟ್ಟದ ವರೆಗೂ ಅಂತರ ರಾಷ್ಟ್ರ ಗೌರವಕ್ಕೆ ಪಾತ್ರರಾದ ಅನೇಕ ಉತ್ತಮ ಸಹಕಾರ ಸಂಸ್ಥೆಗಳು, ದೇಶಾದ್ಯಂತ ಈ ಕ್ಷೇತ್ರದ ಅಭಿವೃದ್ಧಿಗಾಗಿ ದುಡಿದ ಸಹಕಾರಿ ಗಣ್ಯಾತಿ ಗಣ್ಯರು, ಈ ಕ್ಷೇತ್ರದ ಮೂಲಕ ತಮ್ಮ ನಾಯಕತ್ವವನ್ನು ರೂಪಿಸಿಕೊಂಡು ರಾಜಕೀಯ ಭವಿಷ್ಯವನ್ನು ಅರಸಿ ಶಾಸಕರಾಗಿ, ಸಂಸದರಾಗಿ, ಸಚಿವರುಗಳಾಗಿ ಹೀಗೆ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಮಟ್ಟದ ಅನೇಕ ಹುದ್ದೆಗಳನ್ನು ಅಲಂಕರಿಸಿದವರು. ಕೇಂದ್ರ ಸೇರಿದಂತೆ ಎಲ್ಲ ರಾಜ್ಯಗಳಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿರುವ ಸಹಕಾರ ಇಲಾಖೆ ಅಧಿಕಾರಿಗಳು, ದೇಶದ 8 ಲಕ್ಷಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳ ಅಧ್ಯಕ್ಷರುಗಳು, ಪದಾಧಿಕಾರಿಗಳು ಎಲ್ಲಕ್ಕೂ ಪ್ರಮುಖವಾಗಿ 30 ಕೋಟಿಗೂ ಮೀರಿದ ಸದಸ್ಯರು ಇದ್ದು ಇಂದು ಈ ಸಹಕಾರಿ ಕ್ಷೇತ್ರ ಡಿಫೆನ್ಸಲೆಸ್ ರಕ್ಷಣೆ ಇಲ್ಲದ ಕ್ಷೇತ್ರ ಎಂದು ಮಾನ್ಯ ಸಚಿವರು ವಿಶ್ಲೇಷಿಸಬೇಕಾದರೆ ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡವರು ತಮ್ಮ ಕಾರ್ಯಶೈಲಿಯನ್ನು ಬದಲಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಈಗ ನಿರ್ಮಾಣವಾಗಿದೆ.

ಸಹಕಾರ ಕ್ಷೇತ್ರದ ಸಮಸ್ಯೆಗಳಿಗೆ ಸರಕಾರಗಳು ಸ್ಪಂದಿಸುವಂತೆ ಸಹಕಾರಿ ನಾಯಕರು ಕಾರ್ಯನಿರ್ವಹಿಸಬೇಕು. ಆಡಳಿತ ಮಂಡಳಿ ಸಭೆಗಳಲ್ಲಿ ಎಲ್ಲ ನಿರ್ದೇಶಕರುಗಳು ಸ್ವಾರ್ಥರಹಿತವಾಗಿ ಪಾಲ್ಗೊಂಡು ಅಭಿವೃದ್ಧಿ ಕಾರ್ಯಗಳಿಗೆ ತುಕೊಡಬೇಕು. ಸದಸ್ಯರಲ್ಲಿ ಜಾಗೃತಿಯನ್ನು ಮೂಡಿಸಿ ಸದಸ್ಯರು ಹಾಗೂ ಸಹಕಾರ ಸಂಸ್ಥೆಗಳ ನಡುವೆ ಉತ್ತಮ ಬಾಂಧವ್ಯವನ್ನು ಬೆಳೆಸಬೇಕು. ಸಹಕಾರ ಇಲಾಖೆಯ ಅಧಿಕಾರಿಗಳು ಸಹಕಾರಿ ಕ್ಷೇತ್ರ ಬೆಳವಣಿಗೆಯಲ್ಲಿ ಉತ್ತಮ ಸ್ನೇಹಿತ, ತತ್ವಜ್ಞಾನಿ ಹಾಗೂ ಮಾರ್ಗದರ್ಶಿಯಂತೆ ಕಾರ್ಯನಿರ್ವಹಿಸುವುದು ಮತ್ತು ಈ ಕ್ಷೇತ್ರದಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿಯವರು ತಮ್ಮ ತಮ್ಮ ಸಂಸ್ಥೆಗಳಿಗೆ ನಿಷ್ಠೆಯಿಂದ ಕಾರ್ಯನಿರ್ವಹಿಸಿದಲ್ಲಿ ಈ ಡಿಫೆನ್ಸಲೆಸ್ (ರಕ್ಷಣೆ ಇಲ್ಲದ ಕ್ಷೇತ್ರ) ಎಂಬ ಹಣೆಪಟ್ಟಿಯಿಂದ ಹೊರಗೆ ಬರಬಹುದಾಗಿದೆ.

ಈ ನಿಟ್ಟಿನಲ್ಲಿ ಸಹಕಾರಿಗಳಿಗೆ ಮಾನ್ಯ ಸಹಕಾರ ಸಚಿವರು ಎಚ್ಚರಿಸಿದ್ದಾರೆ. 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ 7 ದಿನಗಳಲ್ಲಿ ರಾಜ್ಯದಾದ್ಯಂತ ಲಕ್ಷಾಂತರ ಸಹಕಾರಿಗಳು ಭಾಗವಹಿಸಿ ಸಹಕಾರ ಕ್ಷೇತ್ರದ ಅಭಿವೃದ್ಧಿ ಕುರಿತು ಸಮಾಲೋಚಿಸಿ ಕ್ರೀಯಾಯೋಜನೆ ಸಿದ್ಧಪಡಿಸುವುದರ ಜೊತೆಗೆ ಈ ಕ್ಷೇತ್ರ ನಮ್ಮದು. ಇದನ್ನು ಬಲಪಡಿಸುವದಕ್ಕೆ ನಾವು ಬದ್ಧರಾಗಿದ್ದೇವೆ ಎಂದು ಪ್ರಮಾಣಿಸಬಹುದೇ. ?

# "ಬದುಕಿನ ಶ್ರೇಷ್ಠತೆಗೆ ಪರಮಾತ್ಮನ ನೆನಪು ಅತ್ಯಗತ್ಯ"



## ಜ್ಞಾನ ಜ್ಯೋತಿ

ಎಂ .ಬಸಪ್ಪ, ಸಹಕಾರ ಸಂಘಗಳ
ನಿವೃತ್ತ ಉಪನಿಬಂಧಕರು, ಬೆಂಗಳೂರು.

"ಪರಮಾತ್ಮನನ್ನು ಪರಮಾಪ್ತನನ್ನಾಗಿಸಿಕೋ, ನಿನ್ನ ಕಷ್ಟ ಕಾರ್ಪಣ್ಯಗಳು ನಾಶವಾಗಿ, ಸುಖ ಶಾಂತಿ, ನೆಮ್ಮದಿಗಳ ಬದುಕು ದತ್ತವಾಗುತ್ತದೆ"ಂಬುದು ಹಿರಿಯರ, ಚಿಂತನಶೀಲರ ಸಧ್ಭೋದನೆ. ಇದಕ್ಕೆ ತದ್ವಿರುದ್ಧವಾಗಿ ನಮ್ಮ ಬದುಕು ಸಾಗಿದೆ. ಬಾಲ್ಯದಲ್ಲಿ ಆಟಪಾಠ, ಯೌವನದಲ್ಲಿ ವಿವಾಹ, ಐಶ್ವರ್ಯ ಸಂಗ್ರಹಣಾ ಕಾಳಜಿ, ವೃದ್ಧಾಪ್ಯದಲ್ಲಿ ಚಿಂತೆಯ ಸಂತೆ. ಒಟ್ಟಾರೆ ನಮ್ಮನ್ನು ಸೃಷ್ಟಿಸಿದ ಪಿತನಾದ ಭಗವಂತನ ಆರಾಧನೆಗೆ ಸಮಯ ನೀಡದಿರುವ ಇಂದಿನ ಜನರ ನಡೆನುಡಿಗಳ ಬಗ್ಗೆ ಕೆಳಗಿನ ಪದ್ಯವನ್ನು ಕವಿ ಡಿ.ವಿ.ಜಿ.ಯವರು ರಚಿಸಿದ್ದಾರೆ. ಪ್ರತಿಯೊಬ್ಬನ ಬದುಕು ಆಶೆ, ಆಕಾಂಕ್ಷೆ, ನಿರಾಸೆ, ಸೋಲು, ಸಂಶಯ, ಸೇಡು, ಸಂಗ್ರಹಣೆ ಇತ್ಯಾದಿ ಭಾವಗಳ ಸುಳಿಯಲ್ಲಿ ಸಾಗುತ್ತಿದ್ದು, ಮೂಲತಃ ನಮ್ಮನ್ನೆಲ್ಲಾ ಸೃಷ್ಟಿಸಿದಾತನ ನೆನಪು ಮರೆಯಾಗಿ ಬಿಟ್ಟಿರುತ್ತದೆ. ಹಬ್ಬ, ಹರಿದಿನಗಳಲ್ಲಿಯೋ, ಮನೆದೇವರುಗಳ ವಾರಗಳ ದಿನಗಳಲ್ಲಿಯೋ ಬಲವಂತನಾಗಿ ನೆನಪು ಬಂದಾಗ ದೇವಸ್ಥಾನಕ್ಕೆ ಹೋಗುವವರನ್ನು ಕುರಿತು ಕಣ್ಮುಂದೆ ಚಿತ್ರಿತವಾಗಿರುವ ರೀತಿಯಲ್ಲಿ ಪದ್ಯ ರಚಿತವಾಗಿದೆ.

"ಮನೆಯ ಸಂಸಾರದಲಿ ವಾಸವಿರುತಾಗಾಗ ।
ನೆನೆದು ನೀಂ ದೇಗುಲಕೆ ಪೋಗಿ ಬರುವಂತೆ ॥
ದಿನವೆಲ್ಲ ದೇವ ಸನ್ನಿಧಿಯೊಳಿರುತಾಗಾಗ ।
ಮನೆಗೆ ಬರುವನವೊಲಿರು" ॥ಮಂಕುತಿಮ್ಮ॥

ಕ್ರಿಕೆಟ್ ಆಟದಲ್ಲಿ ಬ್ಯಾಟ್ ಮಾಡುವ ಪಡೆಯ ಬ್ಯಾಟ್ಸ್‌ಮ್ಯಾನ್ ಚೆಂಡುಗಳನ್ನು ವ್ಯರ್ಥ ಮಾಡಿ, ಇನ್ನೇನು ಪಂದ್ಯ ಗೆಲ್ಲಲು 20 ರನ್ ಬೇಕು ಒಂದೇ ಒಂದು ಓವರ್ ಬಾಕಿಯಿದ್ದು, ಆ ಆರು ಚೆಂಡೆಸೆತಗಳನ್ನು ಅತಿ ಎಚ್ಚರದಿಂದ ಎದುರಿಸಿ 20 ರನ್‌ಗಳ ಗುರಿಯನ್ನು ದಾಟುವ ಆಟಗಾರನ ಸ್ಪರ್ಧಾ ಮನೋಭಾವವನ್ನು ಗಮನದಲ್ಲಿರಿಸಿಕೊಂಡು, ಜೀವನವನ್ನು ಎದುರಿಸಿ ಎಂಬರ್ಥ ಬರುವ ಈ ಪದ್ಯ ತುಂಬಾ ಸ್ವಾರಸ್ಯಕರವಾಗಿದೆ. ಜೀವನದುದ್ದಕ್ಕೂ ಹಣ ಪೋಲು ಮಾಡಿ ಜೀವನ ಸಂಜೆಯಲ್ಲಿ ದುಡ್ಡಿನ ಉಳಿತಾಯದ ಬೆಲೆಯನ್ನು ಅರಿಯುವವನ ಜೀವನದಂತೆ ನಾವೆಲ್ಲರೂ ಈ ಪದ್ಯದಿಂದ ಪ್ರೇರಿತರಾಗಿ ಐಹಿಕ ಹಾಗೂ ಆಧ್ಯಾತ್ಮಿಕ ಜೀವನಕ್ಕೆ ಸಮಾನ ಮುಖ್ಯತೆಯನ್ನು ನೀಡಿ ಬದುಕನ್ನು ಅರ್ಥಪೂರ್ಣಗೊಳಿಸೋಣ ಹಾಗೂ 'ಜನಸೇವೆಯೇ ಜನಾರ್ಧನ ಸೇವೆ' ಎಂಬ ಸದುದ್ದೇಶದ, ಸಹಕಾರ ಜೀವನ ಶೈಲಿಯನ್ನು ಅನುಷ್ಠಾನಗೊಳಿಸೋಣ. ತನ್ಮೂಕ ಉತ್ತಮ ಗುಣಮಟ್ಟದ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗೋಣ ಎಂಬುದೇ ಈ ಪದ್ಯದ ಸಾರಾಂಶವಾಗಿದೆ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಬೆಳಗಾವಿ:–6,979, ಬೆಂಗಳೂರು:– 1,555, ಮೈಸೂರು:– 807 ಹಾಗೂ ಕಲಬುರಗಿ:– 1850 ವಿಭಾಗಗಳಿಂದ ದಾಖಲಾದ ದಾವಾ ಪ್ರಕರಣಗಳ ಒಟ್ಟು 11,186 ಆಗಿರುತ್ತದೆ. ಇವುಗಳ ಪೈಕಿ 5,392 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 5,799.

**ಅಮಲ್ಜಾರಿ ಪ್ರಕರಣಗಳು :** ಒಟ್ಟು 2,082 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 210 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 145 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 1727 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 977 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 80 ಪ್ರಕರಣಗಳು ಇತ್ಯರ್ಥಗೊಂಡಿದೆ ಮತ್ತು 82 ಪ್ರಕರಣಗಳನ್ನು ಸಿವಿಲ್ ಕೋರ್ಟ್‌ಗೆ ಅನುಮತಿ ನೀಡಲಾಗಿ 815 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ.

# 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ

## ಸಹಕಾರ ರಂಗಕ್ಕೆ ಭದ್ರ ಕವಚ ಅಗತ್ಯ, ಸರಕಾರದ ಸಂಪೂರ್ಣ ಸಹಕಾರ – ಶ್ರೀ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವರು



**ಬೆಂಗಳೂರು :** 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಹಕಾರ ಸಚಿವ ಶ್ರೀ ಬಸವರಾಜ ಬೊಮ್ಮಾಯಿಯವರು ಸಹಕಾರ ಕ್ಷೇತ್ರ ಸಾರ್ವಜನಿಕರ ಸೇವೆಗೆ ಅತ್ಯಂತ ಉತ್ತಮವಾದ ಕ್ಷೇತ್ರ. ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನು ಮುಟ್ಟಬಲ್ಲ ಏಕೈಕ ವ್ಯವಸ್ಥೆ ಇದಾಗಿದೆ. ಸಾಕಷ್ಟು ಸಾಧನೆಗಳಿವೆ. ಅನೇಕ ಹಿರಿಯರು ಈ ಕ್ಷೇತ್ರದಲ್ಲಿ ನಿಶ್ವಾರ್ಥತೆಯಿಂದ ದುಡಿದು ಸಂಘ ಸಂಸ್ಥೆಗಳನ್ನು ಕಟ್ಟಿದ್ದಾರೆ ಬೆಳೆಸಿದ್ದಾರೆ. ಆದರೆ ಇತ್ತಿಚಿನ ದಿನಗಳಲ್ಲಿ ಈ ಸಹಕಾರ ಕ್ಷೇತ್ರ ಕ್ಷೀಣಿಸ್ತಾ ಇದೆ. ಸಹಕಾರ ರಂಗ ಡಿಫೆನ್ಸಲೆಸ್ಸ್ ಆಗಿದೆ. ಇದಕ್ಕೆ ಭದ್ರ ಕವಚ ಇಲ್ಲದಂತಾಗಿದೆ. ಮೌಲ್ಯಗಳು ಕಡಿಮೆಯಾಗುತ್ತಿವೆ. ಸಹಕಾರಿಗಳು ಸ್ಥಾನಮಾನಗಳ ಆಸಕ್ತಿಯಿರದೆ ಸಹಕಾರ ಕ್ಷೇತ್ರವನ್ನು ಬೆಳೆಸಬೇಕಾಗಿದೆ. ಆದ್ದರಿಂದ ಸಹಕಾರ ಸಪ್ತಾಹದ ಅವಧಿಯಲ್ಲಿ ಸಹಕಾರ ರಂಗದ ಬಲಸಂವರ್ಧನೆ ಬಗ್ಗೆ ಹೆಚ್ಚಿನ ಚಿಂತನೆಗಳು ನಡೆಸುವುದು ಅಗತ್ಯ ಎಂದರು. ಮುಂದುವರೆದು ಮಾತನಾಡಿದ ಶ್ರೀಯುತರು ವಿಶ್ವದಲ್ಲಿ ಅಮೇರಿಕಾ ಯುರೋಪನಂತಹ ಮುಂದುವರೆದ ರಾಷ್ಟ್ರಗಳಲ್ಲಿ ಹಾಗೂ ಭಾರತ ಮತ್ತು ಚೈನಾದಂತೆ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಆರ್ಥಿಕ ಹಿಂಜರಿತ ಕಾಣುತ್ತಿದೆ. ವಿಶೇಷವಾಗಿ ಉದಾರೀಕರಣ ಖಾಸಗೀಕರಣ ಮತ್ತು ಜಾಗತೀಕರಣ (ಎಲ್.ಪಿ.ಜಿ). ದ ಅರ್ಥ ವ್ಯವಸ್ಥೆಯ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಿ ನಿಲ್ಲಬೇಕಾದ ಅವಶ್ಯಕತೆ ಇದೆ ಭಾರತ ಕೃಷಿ ಪ್ರಧಾನ ದೇಶ. ಕೃಷಿಗೆ ಬಂಡವಾಳದ ಹೂಡಿಕೆ ಬರುತ್ತಿಲ್ಲ. ಈ ಬಗ್ಗೆ ಹೆಚ್ಚಿನ ಚಿಂತನೆ ನಡೆಯಬೇಕಾಗಿದೆ. ಹೀಗಾಗಿ ಈ ಸಹಕಾರ ಸಪ್ತಾಹವು ಹೆಚ್ಚಿನ ಮಹತ್ವವನ್ನು ಪಡೆಯುತ್ತದೆ ಎಂದರು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯದಲ್ಲಿ ಹಲವಾರು ಜಿಲ್ಲೆಗಳು ನೆರೆಹಾವಳಿಯಿಂದ ಪೀಡಿತರಾಗಿದ್ದು ಸದರಿಯವರ ಪುನಃಶ್ಚೇತನದ ಬಗ್ಗೆಹೆಚ್ಚು ಗಮನವಿಟ್ಟು ಆಯಾ ಜಿಲ್ಲೆಗಳನ್ನು ಮತ್ತು ಕೆಲವು ಜಿಲ್ಲೆಗಳಲ್ಲಿ ಚುನಾವಣೆಗಳು ನಡೆಯುವುದಿದೆ. ಅಂತಹ ಜಿಲ್ಲೆಗಳನ್ನು ಹೊರತುಪಡಿಸಿ ಸಹಕಾರ ಸಪ್ತಾಹದ 7 ದಿನಗಳನ್ನು ಆಚರಿಸಲು ತಿಳಿಸಿದರು. ಸರಕಾರದ ಕಡೆಯಿಂದ ಸಂಪೂರ್ಣ ಸಹಕಾರವನ್ನು ನೀಡಲಾಗುವುದು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷ ಶ್ರೀ ಎನ್. ಗಂಗಣ್ಣನವರು ಸ್ವಾಗತಿಸಿ ಸಪ್ತಾಹದ ಪ್ರಾಸ್ತಾವಿಕ ಮಾತುಗಳನ್ನು ಹೇಳಿದರು. ಕೊನೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿಯವರು ಕರ್ನಾಟಕ ಸರಕಾರ ಸಹಕಾರ ಸಪ್ತಾಹದ ಅಚರಣೆಯ ಸಂದರ್ಭದಲ್ಲಿ ನೀಡುತ್ತಿರುವ ಸಹಕಾರ ರತ್ನ ಪ್ರಶಸ್ತಿಗಳಲ್ಲಿ ಒಂದನ್ನು ಸೌಹಾರ್ದ ಸಹಕಾರಿ ಕ್ಷೇತ್ರಕ್ಕೂ ನೀಡುವಂತೆ ಕ್ರಮವಿಡುವಂತೆ ವಿನಂತಿಸಿ ವಂದನಾರ್ಪಣೆಯನ್ನು ಮಾಡಿದರು.

## ಸೌಹಾರ್ದ ಸಹಕಾರಿಗಳು ಸಹ ಸಹಕಾರ ಸಂಘಗಳೇ ಆಗಿದೆ ಎಂದು ಸುಗ್ರೀವಾಜ್ಞೆ ಹೊರಡಿಸುವ ಮೂಲಕ ಸೌಹಾರ್ದ ಸಹಕಾರ ಕಾಯ್ದೆ ತಿದ್ದುಪಡಿ – ಸಹಕಾರ ಸಚಿವ ಶ್ರೀ ಬಸವರಾಜ ಬೊಮ್ಮಾಯಿ.

ಕರ್ನಾಟಕ ರಾಜ್ಯದ ಸೌಹಾರ್ದ ಸಹಕಾರಿ ಕಾಯ್ದೆಯಲ್ಲಿ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳಲ್ಲ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವ್ಯಾಖ್ಯಾನಿಸುತ್ತ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ನೋಟೀಸು ನೀಡುತ್ತಿರುವುದು ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ತೊಂದರೆಯಾಗುತ್ತಿರುವುದನ್ನು ಮಾನ್ಯ ಗೃಹ ಹಾಗು ಸಹಕಾರ ಸಚಿವ ಶ್ರೀ ಬಸವರಾಜ ಬೊಮ್ಮಯಿಯವರ ಗಮನಕ್ಕೆ ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಉಪಾಧ್ಯಕ್ಷ ಶ್ರೀ ಜಗದೀಶ ಕವಟಗಿಮಠ, ಮಾಜಿ ಅಧ್ಯಕ್ಷ ಶ್ರೀ ಗುರುನಾಥ ಜಾಂತಿಕರ, ನಿರ್ದೇಶಕ ಶ್ರೀ ಹೆಚ್.ವಿ. ರಾಜೀವ, ಶ್ರೀ ವೈ.ವಿ. ಗುಂಡೂರಾವ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲರವರ ನಿಯೋಗದ ಮನವಿಯನ್ನು ಪರಿಶೀಲಿಸಿದ ಸಹಕಾರ ಸಚಿವರು ಅದಕ್ಕೆ ಒಪ್ಪಿ ಶ್ರೀಘ್ರದಲ್ಲಿ ಸೌಹಾರ್ದ ಸಹಕಾರಿಗಳು ಸಹಕಾರಿ ಸಂಘಗಳು ಎಂದು ಪರಿಗಣಿಸುವ ತಿದ್ದುಪಡಿಯನ್ನು ಸುಗ್ರೀವಾಜ್ಞೆಯನ್ನು ಹೊರಡಿಸಲು ಕ್ರಮವಿಡುವುದಾಗಿ ತಿಳಿಸಿದರು.

### ರಾಜ್ಯದ ಸೌಹಾರ್ದ ಸಹಕಾರಿಗಳಿಂದ ನೆರೆ ಸಂತ್ರಸ್ತರ ಪರಿಹಾರ ನಿಧಿಗೆ ರೂ 50 ಲಕ್ಷ ಕೊಡುಗೆ

ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಮಾಜಿ ಅಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಮಾಜಿ ಉಪಾಧ್ಯಕ್ಷರಾದ ಹಾಗೂ ಹಾಲಿ ನಿರ್ದೇಶಕರಾದ ಶ್ರೀ ಹೆಚ್.ವಿ.ರಾಜೀವ ಹಾಗೂ ಶ್ರೀ ಯು.ರಾಮಪ್ಪ, ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ.ಪಾಟೀಲ್ ಇವರು ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳಿಂದ ಸಂಗ್ರಹಿಸಿದ ಮೊತ್ತವು ಸೇರಿದಂತೆ ಒಟ್ಟು 50 ಲಕ್ಷ ರೂಗಳ ದೇಣಿಗೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಿದರು.

# ಶ್ರೀ ಪ್ರಸನ್ನಕುಮಾರ ಐ.ಎ.ಎಸ್. ಸಹಕಾರ ಸಂಘಗಳ ನಿಬಂಧಕರು ಇವರ ಅಧ್ಯಕ್ಷತೆಯಲ್ಲಿ 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆ



**ಬೆಂಗಳೂರು :** ಶ್ರೀ ಕೆ.ಎನ್. ರಾಜಣ್ಣ, ಅಧ್ಯಕ್ಷರು, ಅಪೆಕ್ಸ್ ಬ್ಯಾಂಕ್, ಶ್ರೀ ಎಮ್.ಎನ್. ರಾಜೇಂದ್ರಕುಮಾರ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ., ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಶ್ರೀ ಗಂಗಣ್ಣ, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಅನೇಕ ಸಹಕಾರಿ ಗಣ್ಯರ ಹಾಗೂ ಸಹಕಾರ ಇಲಾಖಾಧಿಕಾರಿಗಳ ಉಪಸ್ಥಿತರಿದ್ದರು.

66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆ ಕುರಿತಂತೆ ದಿನಾಂಕ 02–11–2019 ರಂದು ಮಾನ್ಯ ಸಹಕಾರ ಸಂಘಗಳ ನಿಬಂಧಕರ ಕಚೇರಿಯಲ್ಲಿ ನಿಬಂಧಕರಾದ ಶ್ರೀ ಎಸ್.ಎನ್.ಪ್ರಸನ್ನಕುಮಾರ ಐ.ಎ.ಎಸ್. ಇವರ ಅಧ್ಯಕ್ಷತೆಯಲ್ಲಿ ನಡೆದು ಸಪ್ತಾಹದ 7 ದಿನಗಳ ಆಚರಣೆಯ ಬಗ್ಗೆ ವಿವರವಾಗಿ ಚರ್ಚಿಸಿ ಸಪ್ತಾಹವನ್ನು ಅರ್ಥಪೂರ್ಣವಾಗಿ ಆಚರಿಸಲು ತೀರ್ಮಾನಿಸಲಾಯಿತು. ನಿಬಂಧಕರಾದ ಶ್ರೀ ಪ್ರಸನ್ನಕುಮಾರರವರು ಮಾತನಾಡಿ ಸಹಕಾರ ಸಪ್ತಾಹದ ಆಚರಣೆ ಅರ್ಥಪೂರ್ಣವಾಗಿರಬೇಕು. ಯಾವುದೇ ವಿವಾದಗಳಿಗೆ ಆಸೊವಿಲ್ಲದಂತೆ ಎಲ್ಲ ದಿನಗಳಲ್ಲೂ ಸ್ಥಳೀಯ ಸಹಕಾರಿಗಳನ್ನು ಹಾಗೂ ರಾಜಕೀಯ ಧುರೀಣರನ್ನು ಆಮಂತ್ರಿಸಿ ಮುದ್ರಿಸುವಾಗ ಜೇಷ್ಠತೆ (ಪ್ರೋಟೋಕೋಲು) ಯನ್ನು ಸಹಕಾರಿ ಕ್ಷೇತ್ರದಲ್ಲಿನ ಅನುಭವವನ್ನು ಕಡ್ಡಾಯವಾಗಿ ಪಾಲಿಸುವಂತೆ ಕ್ರಮವಿಡಬೇಕೆಂದು ಸೂಚಿಸಿದರು.

ಸಭೆಯಲ್ಲಿ 7 ದಿನಗಳೂ ಸಪ್ತಾಹದ ಆಚರಣೆಯ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಚರ್ಚಿಸಲಾಯಿತು. ಮತ್ತು ಎಲ್ಲ 7 ದಿನಗಳಿಗೆ ಸಹಕಾರಿ ಇಲಾಖೆಯ ಒಬ್ಬ ಹಿರಿಯ ಅಧಿಕಾರಿಯನ್ನು ಸಮನ್ವಯಾಧಿಕಾರಿಯಾಗಿ ನೇಮಿಸಲಾಯಿತು. ಇವರ ಉಪಸ್ಥಿತಿ ಹಾಗು ಮಾರ್ಗದರ್ಶನದಲ್ಲಿ ನೇತೃತ್ವ ವಹಿಸುವ ಸಹಕಾರಿ ಮಹಾಮಂಡಳ ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳು ಪೂರ್ವಭಾವಿ ಸಿದ್ಧತಾ ಸಭೆ ನಡೆಸಿ ನಿಬಂಧಕರಿಗೆ ದಿನಾಂಕ 07.11.2019 ರೊಳಗಾಗಿ ವರದಿ ತಿಳಿಸಿ ಮುಂದಿನ ಕ್ರಮಗಳನ್ನು ಅತ್ಯಂತ ಶಿಸ್ತು ಹಾಗೂ ಕ್ರಮಬದ್ಧವಾಗಿ ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.

**ಸದ್ಯಕ್ಕೆ ತೀರ್ಮಾನಿಸಿದಂತೆ : ದಿನಾಂಕ 14.11.2019 – ತುಮಕೂರು, ದಿನಾಂಕ 15.11.2019 – ಕೊಪ್ಪಳ, ದಿನಾಂಕ 16.11.2019 – ಯಾದಗಿರಿ, ದಿನಾಂಕ 17.11.2019 – ಶಿರಸಿ, ದಿನಾಂಕ 18.11.2019 – ಉಡುಪಿ, ದಿನಾಂಕ 19.11.2019 – ಹಾಸನ, ದಿನಾಂಕ 20.11.2019 – ಮೈಸೂರು**

ವಿವಿಧ ಸಹಕಾರ ಮಂಡಳಗಳು ಹಾಗೂ ಸ್ಥಳೀಯ ಸಹಕಾರ ಸಂಸ್ಥೆಗಳ ಹಾಗೂ ಸಹಕಾರ ಇಲಾಖೆಯ ಸಹಯೋಗದೊಂದಿಗೆ ಆಚರಿಸಲು ತೀರ್ಮಾನಿಸಲಾಗಿದೆ.

# ಹಿರಿಯ ಸಹಕಾರಿ ಶ್ರೀ ರಮೇಶ ವೈದ್ಯ ರವರಿಗೆ ರಾಜ್ಯೋತ್ಸವ ಪ್ರಶಸ್ತಿ



ರಾಷ್ಟ್ರದ ಹಿರಿಯ ಸಹಕಾರಿ ಕರ್ನಾಟಕ ರಾಜ್ಯ ಸರಕಾರದ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತರಾದ ಶ್ರೀ ರಮೇಶ ವೈದ್ಯರವರಿಗೆ 64ನೇ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ನವೆಂಬರ 1 ರಂದು ಬೆಂಗಳೂರಿನಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ರಾಜ್ಯೋತ್ಸವ ಪ್ರಶಸ್ತಿ ಪ್ರಧಾನಮಾಡಿ ಗೌರವಿಸಿದರು. ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶ್ರೀ ಸಿ.ಟಿ. ರವಿಯವರು ಉಪಸ್ಥಿತರಿದ್ದು ರಾಜ್ಯದ ವಿವಿಧ ಕ್ಷೇತ್ರದ ಗಣ್ಯರಿಗೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಆಡಳಿತ ಮಂಡಳಿ ಸದಸ್ಯರು ಎಲ್ಲ ಅಧಿಕಾರಿಗಳು ಶ್ರೀಯುತರನ್ನು ಅಭಿನಂದಿಸಿದ್ದಾರೆ.

# ಸಂಯುಕ್ತ ಸಹಕಾರಿಯ ಸಿಬ್ಬಂದಿಯವರಿಗೆ ಕಾರ್ಯಕ್ಷಮತೆ ಅಭಿವೃದ್ಧಿ ಶಿಬಿರ

## ಸಹಕಾರದ ಅಗತ್ಯತೆ ಸರ್ವಕಾಲಿಕ ಸತ್ಯ ಅಗತ್ಯ. ಶ್ರೀ ಸಾಮಾನ್ಯನ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಪ್ರಕ್ರೀಯೆಗೆ ಸಹಕಾರ ಚಳುವಳಿ : ಡಾ. ಸಂಗನಬಸವ ಸ್ವಾಮೀಜಿ, ಶಿವಯೋಗಿ ಮಂದಿರ, ಬಾದಾಮಿ.



**ಬಾದಾಮಿ** : ಸಂಯುಕ್ತ ಸಹಕಾರಿಯ ಎಲ್ಲ ಸಿಬ್ಬಂದಿಯವರಿಗೆ ಬಾಗಲಕೋಟ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರದಲ್ಲಿ ದಿನಾಂಕ 01.11.2019 ರಿಂದ 03.11.2019 ರವರೆಗೆ 3 ದಿನಗಳ ಕಾಲ ತರಬೇತಿ ಹಾಗೂ ಅಧ್ಯಯನ ಪ್ರವಾಸವನ್ನು ಶಿವಯೋಗಿ ಮಂದಿರದ ಅಧ್ಯಕ್ಷರೂ ಆಗಿರುವ ಜಗದ್ಗುರು ಶ್ರೀ ಶ್ರೀ ಡಾ. ಸಂಗನಬಸವ ಸ್ವಾಮೀಜಿ ಯವರು ಉದ್ಘಾಟಿಸಿ ಆಶೀರ್ವಚನವನ್ನು ಮಾಡುತ್ತ ಜೀವನದಲ್ಲಿ ಸಾಫಲ್ಯತೆಗೆ ಯಾವಾಗಲೂ ಸಹಕಾರವೇ ಪ್ರಾಮುಖ್ಯವಾಗಿರುತ್ತದೆ. ಮನುಷ್ಯನ ಉತ್ತಮ ಅಸ್ತಿತ್ವಕ್ಕೆ ಸಹಕಾರ ಸರ್ವಕಾಲಕ್ಕೂ ಅಗತ್ಯ. ಇಂತಹ ಸಹಕಾರವನ್ನು ಸಹಕಾರಿ ಸಂಘಗಳ ಮೂಲಕ ಆರ್ಥಿಕ ಅಭಿವೃದ್ಧಿಗಾಗಿ ಉಪಯೋಗಪಡಿಸಿಕೊಳ್ಳುವ ಪ್ರಕ್ರೀಯೆಯೇ ಸಹಕಾರ ಚಳುವಳಿ. ಈ ಸಹಕಾರ ಚಳುವಳಿ ಬಲವಾಗಿರಬೇಕು. ಇದರ ಚಟುವಟಿಕೆಗಳು ಆರೋಗ್ಯಕರವಾಗಿ ಉತ್ತಮ ಗುಣಮಟ್ಟದಲ್ಲಿ ನಡೆಯಬೇಕಾದರೆ ಈ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯವರಿಗೆ ಅವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವಂತಹ ತರಬೇತಿಗಳು ಆಗಿಂದ್ದಾಗ್ಗೆ ನಡೆಯುತ್ತಿರಬೇಕು. ಅದರಲ್ಲೂ ಶಿವಯೋಗಿ ಮಂದಿರದಂತಹ ಅಧ್ಯಾತ್ಮ ಕೇಂದ್ರಗಳಲ್ಲಿ ಹಮ್ಮಿಕೊಳ್ಳುವುದು ಉತ್ತಮ ಕಾರ್ಯಗಳ ಪ್ರೇರಕ ಹಾಗೂ ಸ್ಪಂದನಾ ಶಕ್ತಿವರ್ಧನೆಗೆ ಪೂರಕ ಎಂದು ತಿಳಿಸಿದರು.

ಪ್ರಾರಂಭದಲ್ಲಿ ಬೆಳಗಾವಿ ವಿಭಾಗದ ಮಹಿಳಾ ಸಿಬ್ಬಂದಿಯವರಿಂದ ಪ್ರಾರ್ಥನೆಯಾದ ನಂತರ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲ್ ರವರು ಸ್ವಾಮೀಜಿಯವರಿಗೆ ಹಾಗೂ ಅತಿಥಿ ಗಣ್ಯರಿಗೆ ಸ್ವಾಗತ ಹಾಗೂ ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಗುರನಗೌಡ ಪಾಟೀಲ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಅಪರ ನಿಬಂಧಕರಾದ ಹಾಗೂ ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಶ್ರೀ ಐ.ಎಸ್.ಗಿರಡ್ಡಿಯವರು ಹಾಗೂ ಬಾದಾಮಿಯ ನ್ಯಾಮಿತ್ರ ಸೌಹಾರ್ದ ಸಹಕಾರಿಯ ಅಧ್ಯಕ್ಷ ಹಾಗೂ ವಕೀಲ ಶ್ರೀ ಮಿತ್ತಲಕೋಡ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬೆಳಗಾವಿ ವಿಭಾಗದ ಪ್ರಾಂತೀಯ ಅಧಿಕಾರಿ ಶ್ರೀ ಶ್ರೀಕಾಂತ ಬರುವೆಯವರು ವಂದನಾರ್ಪಣೆ ಸಲ್ಲಿಸಿದರು.

3 ದಿನಗಳ ಅವಧಿಯಲ್ಲಿ ಶ್ರೀ ಐ.ಎಸ್.ಗಿರಡ್ಡಿಯವರಿಂದ ಕಛೇರಿ ಆಡಳಿತ ವಿವಿಧ ಹಂತಗಳು, ಆಡಳಿತ ವ್ಯವಸ್ಥೆ, ಕಡತಗಳ ನಿರ್ವಹಣೆ, ಶಿಸ್ತು ಹಾಗೂ ಸಮಯ ಪಾಲನೆಗಳ ಬಗ್ಗೆ ಶ್ರೀ ಶ್ರೀವತ್ಸ ಗುಡಿಯವರು ವೃತ್ತಿ ಸಂಸ್ಕೃತಿ ಬಗ್ಗೆ ಡಾ ಹನುಮಂತಪ್ಪ ರವರು ಆರೋಗ್ಯದ ಬಗ್ಗೆ ಹಾಗೂ ಶ್ರೀ ಕೆ.ಸುಬ್ರಮಣ್ಯ ಇವರು ಉಪನ್ಯಾಸಗಳನ್ನು ನೀಡಿದರು.

ಸಂಯುಕ್ತ ಸಹಕಾರಿಯ ಅಧಿಕಾರಿಗಳಾದ ಶ್ರೀ ನಾರಾಯಣ ಹೆಗಡೆಯವರು, ಶ್ರೀ ಶ್ರೀಕಾಂತರವರು, ಶ್ರೀ ರಘುನಂದನ್ ಇವರುಗಳು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು ಶಾಸನ ಬದ್ಧ ಕಾರ್ಯಗಳು ಪರಿಶೀಲನೆ ಸೌಹಾರ್ದ ಸಹಕಾರಿಗಳ ಸಮಾಪನ ಪ್ರಕ್ರೀಯೆ ಮುಂತಾದ ವಿಷಯಗಳ ಬಗ್ಗೆ ವಿವರಗಳನ್ನು ನೀಡಿದರು. ಈ ಎಲ್ಲ ಸಭೆಗಳ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ ಪಾಟೀಲ್ ರವರು ವಹಿಸಿದ್ದರು. ಇದೇ ಸಂದರ್ಭದಲ್ಲಿ ಬಾದಾಮಿಯ ನ್ಯಾಯಮಿತ್ರ ಸೌಹಾರ್ದ ಸಹಕಾರಿಗೆ ಭೇಟಿ ಮಾಡಿ ಅಧ್ಯಯನ ಮಾಡಲಾಯಿತು.



ಗಣ್ಯರೊಂದಿಗೆ ಸಂಯುಕ್ತ ಸಹಕಾರಿಯ ಸಿಬ್ಬಂದಿಗಳು



ಡಾ. ಸಂಗನಬಸವ ಸ್ವಾಮೀಜಿಯವರಿಗೆ ಸನ್ಮಾನ



ಸಮಾರೋಪ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಜಿ.ಎನ್. ಪಾಟೀಲ, ಶ್ರೀ ಮಂಜುನಾಥ ಎಸ್.ಕೆ

# 66ನೇ ಅಖಿಲ ಭಾರತ ಸಹಕಾರ ಸಪ್ತಾಹ 2019

ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯವರು 66ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ವಿವರಗಳನ್ನು ಸಿದ್ದಪಡಿಸಿದ್ದು ವಿವರಗಳು ಈ ಕೆಳಕಂಡಂತೆ ಇದೆ. ರಾಜ್ಯದ ಎಲ್ಲಾ ಸೌಹಾರ್ದ ಸಹಕಾರಿಗಳ ಅವಗಾಹನೆಗಾಗಿ ವಿವರ ಪ್ರಕಟಿಸಲಾಗಿದೆ.

## ಧ್ಯೇಯ : "ನವಭಾರತ ನಿರ್ಮಾಣದಲ್ಲಿ ಸಹಕಾರಿಗಳ ಪಾತ್ರ"

## Theme : "Role of Cooperatives in New India"

ಸಪ್ತಾಹದ 7 ದಿನಗಳ ವಿವರಗಳು :

| | |
|---|---|
| 14.11.2019 | ಗ್ರಾಮೀಣ ಸಹಕಾರಿಗಳಿಂದ ಸಹಕಾರ ಕ್ಷೇತ್ರದಲ್ಲಿ ಆವಿಷ್ಕಾರ / Innovation Through Rural Cooperatives |
| 15.11.2019 | ಸಹಕಾರಿಗಳಿಗೆ ಸದೃಡ ಕಾನೂನು/ Enabling Legislation for Cooperatives. |
| 16.11.2019 | ಸಹಕಾರ ಶಿಕ್ಷಣ ತರಬೇತಿಗಳನ್ನು ಯಶೋಗಾಥೆಗಳ ಮೂಲಕ ಪುನರ್ ಸಂಘಟಿಸುವುದು/ Re-orienting Training and Education Through Success Stories |
| 17.11.2019 | ಸಹಕಾರಿಗಳ ಮಧ್ಯ ಪರಸ್ಪರ ಸಹಕಾರವನ್ನು ಬಲಪಡಿಸುವುದು/ Strengthening Cooperation among Cooperatives. |
| 18.11.2019 | ಸಹಕಾರ ಕ್ಷೇತ್ರದ ಬಲಸಂವರ್ಧನೆಗೆ ಸಹಕಾರಿಗಳ ನೂತನ ಕ್ರಮಗಳು / New Initiatives of Government Through Cooperatives. |
| 19.11.2019 | ಯುವಜನ, ಅಬಲ ಹಾಗೂ ಮಹಿಳಾ ಸಹಕಾರಿಗಳಿಗಾಗಿ ಸಹಕಾರಿ ಸಂಸ್ಥೆಗಳು / Cooperatives for Youth, Women and Weaker Sections. |
| 20.11.2019 | ಸಹಕಾರಿ ಸಂಸ್ಥೆಗಳಲ್ಲಿ ಆರ್ಥಿಕ ಸೇರ್ಪಡೆ, ತಂತ್ರಜ್ಞಾನ ಹಾಗೂ ಡಿಜಿಟಲೈಜೇಷನ್ ಅಳವಡಿಸುವುದು /Financial Inclusion, Technology Adoption and Digitalisation Through Cooperatives. |

## ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳದ ಷೇರು ಖರೀದಿಸಲು ಮನವಿ

ದೇಶದಲ್ಲಿಯೇ ಪ್ರಥಮ ಎನಿಸಿಕೊಂಡಿರುವ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ಧಿ ಮಾಧ್ಯಮ ಸಹಕಾರ ಮಹಾಮಂಡಳ 3ನೇ ವಾರ್ಷಿಕ ಸಾಮಾನ್ಯ ಸಭೆಯ ಸಂದರ್ಭದಲ್ಲಿ ತನ್ನದೇ ಆದ ಸಹಕಾರ ಟಿ.ವಿ.ಯನ್ನು ಪ್ರಾರಂಭಿಸಲು ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಸಹಕಾರಿಗಳಿಗೆ, ಸಾರ್ವಜನಿಕರಿಗೆ ಸಹಕಾರ ಕ್ಷೇತ್ರದ ವಿವಿಧ ಆಯಾಮಗಳನ್ನು ಪರಿಚಯಿಸುವ ಅಗತ್ಯತೆ ಇದೆ. ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಸಾಧನೆಗಳನ್ನು, ಶಕ್ತಿ ಸಾಮರ್ಥ್ಯವನ್ನು ಅವಕಾಶಗಳ ಹಾಗೂ ವಿರಾಟ ಸ್ವರೂಪದ ಬಗ್ಗೆ ಮಾಹಿತಿ ನೀಡುವುದು ಅಗತ್ಯವಾಗಿದೆ.

ಸಹಕಾರ ಕ್ಷೇತ್ರದ ಗುಣಾತ್ಮಕ ಬೆಳವಣಿಗೆಗಾಗಿ ಪರಿಣಾಮಕಾರಿ ಪ್ರಚಾರಕ್ಕಾಗಿ ಸಹಕಾರಿ ಟಿ.ವಿ. ಆಶಯ, ಅಗತ್ಯತೆ

## ಸಮಾಲೋಚನಾ ಸಭೆ

ಹೊಸದುರ್ಗ: ದಿನಾಂಕ 02.10.2019 ರಂದು ಹೊಸದುರ್ಗ ಸೌಹಾರ್ದ ಸಹಕಾರಿಯಲ್ಲಿ ನಡೆದ ಸಮಾಲೋಚನಾ ಸಭೆ ಹಾಗೂ ಷೇರು ಪ್ರಮಾಣ ಪತ್ರ ವಿತರಣೆ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿ ಸದಸ್ಯರಿಗೆ ಸಿಬ್ಬಂದಿ ವರ್ಗದವರಿಗೆ ಹಾಗೂ ಆಡಳಿತ ಮಂಡಳಿ ಸದಸ್ಯರಿಗೆ ಅಗತ್ಯ ಮಾಹಿತಿ ನೀಡಿದರು, ಕಾರ್ಯಕ್ರಮದಲ್ಲಿ ಶ್ರೀ ಮಂಜುನಾಥ್ ರವರು ಉಪಾಧ್ಯಕ್ಷರು, ಚಿತ್ರದುರ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಉಪಸ್ಥಿತರಿದ್ದರು.

## ವಿಷಯಾಧಾರಿತ ತರಬೇತಿ




**ಬೆಳಗಾವಿ:** ಬೆಳಗಾವಿ ಜಿಲ್ಲೆಯ ಗೋಕಾಕ ಹಾಗೂ ಮೂಡಲಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳು, ಮೂಡಲಗಿ ತಾಲ್ಲೂಕಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸಹಕಾರ ಸಂಘಗಳಿಗೆ ಒಂದು ದಿನದ ವಿಷಯಾಧಾರಿತ ತರಬೇತಿಯನ್ನು ದಿನಾಂಕ 27.09.2019 ರಂದು ಕುರುಹಿನಶೆಟ್ಟಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ., ಮೂಡಲಗಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಕುರುಹಿನಶೆಟ್ಟಿ ಅರ್ಬನ್ ಕೋ-ಆಪ್ ಕ್ರೆಡಿಟ್ ಸೊಸೈಟಿ ಲಿ., ಇದರ ಅಧ್ಯಕ್ಷರಾದ ಶ್ರೀ ಎಸ್.ಜಿ.ಬೆಳಕೊಡ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀ ಟಿ.ಬಿ.ಕೆಂಚಾರೆಡ್ಡಿ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು ಇದರ ನಿರ್ದೇಶಕರಾದ ಡಾ॥ ಎಸ್.ಬಿ.ಹೊಸಮಠ, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್ ನಿ., ಇದರ ನಿರ್ದೇಶಕರಾದ ಶ್ರೀ ವಿ.ಜಿ.ಬೋಳಿ, ಹಿರಿಯ ನಿರೀಕ್ಷಕರಾದ, ಬೈಲಹೊಂಗಲ ಶ್ರೀ ಎಸ್.ಬಿ.ಬಿರಾದಾರ, ಸಹಕಾರಿಗಳ ಸಹಾಯಕ ನಿಬಂಧಕರು (ನಿವೃತ್ತ) ಶ್ರೀ ಎ.ಬಿ.ಬಂಕಾಪುರೆ ಇವರುಗಳು ಭಾಗವಹಿಸಿದ್ದರು. ತರಬೇತಿಯಲ್ಲಿ 111 ಸಹಕಾರಿಗಳಿಂದ 120 ಪ್ರತಿನಿಧಿಗಳು ಭಾಗವಹಿಸಿದ್ದರು.

ಸಹಕಾರಿಗಳ ಚುನಾವಣೆ ಪ್ರಕ್ರಿಯೆ ವಿಷಯದ ಕುರಿತು ಶ್ರೀ ಎ.ಬಿ.ಬಂಕಾಪುರೆ ಇವರು ಹಾಗೂ ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ವಿಷಯದ ಕುರಿತು ಶ್ರೀ ಸತೀಶ ನಾಡಗೌಡ, ಸನ್ನದು ಲೆಕ್ಕಪರಿಶೋಧಕರು, ಗೋಕಾಕ ಇವರು ಉಪನ್ಯಾಸ ನೀಡಿದರು.

## ಸಮಾಲೋಚನಾ ಸಭೆ



**ಮೈಸೂರು:** ಮೈಸೂರು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರಿಗಾಗಿ ಸಮಾಲೋಚನಾ ಸಭೆಯನ್ನು ದಿನಾಂಕ 12 ಅಕ್ಟೋಬರ್ 2019 ಶನಿವಾರದಂದು ಸಪ್ತರ್ಷಿ ಪತ್ತಿನ ಸೌಹಾರ್ದ ಸಹಕಾರಿ ನಿ., ಜಯನಗರ, ಮೈಸೂರಿನಲ್ಲಿ ಉದ್ದೇಶಿತ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ವತಿಯಿಂದ ಆಯೋಜಿಸಲಾಗಿತ್ತು.

ಸದರಿ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್ ಕೃಷ್ಣಾರೆಡ್ಡಿಯವರು ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರೊಂದಿಗೆ ಸೌಹಾರ್ದ ಸಹಕಾರಿಗಳು ಎದುರಿಸುವ ಸಮಸ್ಯೆಗಳಾದ ಆದಾಯ ತೆರಿಗೆ ಮತ್ತು ಸಂಚಾರಿ ನ್ಯಾಯಾಲಯದ ಕುರಿತು ಚರ್ಚಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್, ಶ್ರೀ ಮಂಜುನಾಥರವರು, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಮತ್ತು ಶ್ರೀ ವಾಗ್ದೇವಿ ಸೌಹಾರ್ದ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನವೀನ್‌ರವರು ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 15 ಸೌಹಾರ್ದ ಸಹಕಾರಿಗಳಿಂದ 27 ಪ್ರತಿನಿಧಿಗಳು ಭಾಗವಹಿಸಿದ್ದರು.

**ಮಂಡ್ಯ :** ಮೈಸೂರು ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್. ಕೆ ಮಂಜುನಾಥರವರು ಚಾಮರಾಜನಗರ ಜಿಲ್ಲೆ ಮತ್ತು ಮಂಡ್ಯ ಜಿಲ್ಲಾ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ನೂತನ ಸೌಹಾರ್ದ ಸಹಕಾರಿಗಳ ಮುಖ್ಯ ಪ್ರವರ್ತಕರ "ಸಮಾಲೋಚನಾ ಸಭೆ"ಗಳನ್ನು ಉದ್ಘಾಟನೆ ಮಾಡಿ, ಸದರಿ ಸಭೆಗಳಲ್ಲಿ ಹಾಜರಿದ್ದ ಸದಸ್ಯರಿಗೆ ಮಾಹಿತಿ ನೀಡಿದರು. ಈ ಎರಡು ಸಭೆಗಳಲ್ಲಿ ಒಟ್ಟು 35 ಸದಸ್ಯರು ಭಾಗವಹಿಸಿದ್ದರು.





## ಅಧಿಪ್ರೇರಣಾ ಸಭೆ

**ಚಾಮರಾಜನಗರ:** ಮೈಸೂರು ಪ್ರಾಂತೀಯ ನಿರ್ದೇಶಕರಾದ ಶ್ರೀ ಎಸ್.ಕೆ ಮಂಜುನಾಥರವರು ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ಕಛೇರಿಯಲ್ಲಿ ಹಾಗೂ ಮಂಡ್ಯ ಜಿಲ್ಲಾ ವಕೀಲರ ಸಂಘದ ಕಛೇರಿಯಲ್ಲಿ ನಡೆದ "ಅಧಿಪ್ರೇರಣಾ ಸಭೆ" ಯನ್ನು ಉದ್ಘಾಟನೆ ಮಾಡಿ ಸದರಿ ಸಭೆಗಳಲ್ಲಿ ಹಾಜರಿದ್ದ ವಕೀಲರುಗಳಿಗೆ ಸೌಹಾರ್ದ ಸಹಕಾರಿ ಕಾಯ್ದೆ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಎರಡು ಸಭೆಗಳಲ್ಲಿ ಒಟ್ಟು 85 ವಕೀಲರುಗಳು ಭಾಗವಹಿಸಿದ್ದರು.

## ಕ್ಲಸ್ಟರ್ ತರಬೇತಿ ಕಾರ್ಯಕ್ರಮಗಳು

**ತುಮಕೂರು:** ದಿನಾಂಕ 21.10.2019 ರಂದು ತುಮಕೂರು ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಉದಯರವಿ ಸೌಹಾರ್ದ ಸಹಕಾರಿ ತಿಪಟೂರು, ಇಲ್ಲಿ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಭೇತಿಯನ್ನು ಆಯೋಜಿಸಲಾಗಿತ್ತು, ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಉಪಯುಕ್ತ ಮಾಹಿತಿ ನೀಡಿದರು ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, ತರಬೇತಿಯಲ್ಲಿ 07 ಸೌಹಾರ್ದ ಸಹಕಾರಿಗಳಿಂದ ಒಟ್ಟು 07 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.10.2019 ರಂದು ಬೆಳಗ್ಗೆ 10:30ಕ್ಕೆ ಸೇಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿ ತುಮಕೂರು ಇಲ್ಲಿ ತುಮಕೂರು ನಗರದ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಗಳ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, 16 ಸೌಹಾರ್ದ ಸಹಕಾರಿಗಳಿಂದ 18 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.10.2019 ರಂದು ಮಧ್ಯಾಹ್ನ 2:30ಕ್ಕೆ ಸೇಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿ ತುಮಕೂರು ಇಲ್ಲಿ ತುಮಕೂರು ನಗರದ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಗಳ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, 13 ಸೌಹಾರ್ದ ಸಹಕಾರಿಗಳಿಂದ 15 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 23.10.2019 ರಂದು ಸೇಕ್ರೆಡ್ ಹಾರ್ಟ್ ಸೌಹಾರ್ದ ಸಹಕಾರಿ ತುಮಕೂರು ಇಲ್ಲಿ ತುಮಕೂರು ನಗರದ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಗಳ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, 06 ಸೌಹಾರ್ದ ಸಹಕಾರಿಗಳಿಂದ 08 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.10.2019 ರಂದು ಜಿಎಸ್‌ಪಿ ಸೌಹಾರ್ದ ಸಹಕಾರಿ,. ಗುಬ್ಬಿ ಇಲ್ಲಿ ಗುಬ್ಬಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಗಳ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, 07 ಸೌಹಾರ್ದ ಸಹಕಾರಿಗಳಿಂದ 09 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.10.2019 ರಂದು ವೀರಶೈವ ಸೌಹಾರ್ದ ಸಹಕಾರಿ ನಿ, ಕುಣಿಗಲ್ ಸಹಕಾರಿಯಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕ ಕರ್ತವ್ಯಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ರವರು ಉಪಯುಕ್ತ ಮಾಹಿತಿ ನೀಡಿದರು ಜಿಲ್ಲಾ ಸಂಯೋಜಕರಾದ ಶ್ರೀ ಕುಶಾಲ್ ಹೆಚ್.ಎಂ ರವರು ಉಪಸ್ಥಿತರಿದ್ದರು, ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ ಒಟ್ಟು 05 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಯಚೂರು:** ದಿನಾಂಕ 17.10.2019 ರಂದು ಸಿಂಧನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮೂರು ಬೇರೆ ಬೇರೆ ಸ್ಥಳಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿ ಕಾರ್ಯಕ್ರಮದಲ್ಲಿ ಶಾಸನಾತ್ಮಕ ಮಾಹಿತಿಗಳ ಕುರಿತು ಮತ್ತು ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ವಾರ್ಷಿಕ ಶುಲ್ಕ ಹಾಗೂ ಶಿಕ್ಷಣ ನಿಧಿ ಪಾವತಿಯ ಆನ್ಲೈನ್ ಕುರಿತು ಮಾಹಿತಿಯನ್ನು ನೀಡಲಾಯಿತು. ಒಟ್ಟು 46 ಸೌಹಾರ್ದ ಸಹಕಾರಿಗಳಿಂದ 49 ಪ್ರತಿನಿಧಿಗಳು ಭಾಗವಹಿಸಿದರು.

**ಶಿವಮೊಗ್ಗ:** ದಿನಾಂಕ 04.10.2019 ರಂದು ಶಿವಮೊಗ್ಗ ತಾಲ್ಲೂಕಿನ ಮುತ್ತೂರು ಹೊಸಹಳ್ಳಿ ವ್ಯಾಪ್ತಿಯ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಸುದರ್ಶನ ಸೌಹಾರ್ದ ಸಹಕಾರಿ ಮತ್ತೂರು ಇಲ್ಲಿ ನಡೆಯಿತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 06 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 05.10.2019 ರಂದು ಹೊಸನಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಕೊಡಚಾದ್ರಿ ಅಡಿಕೆ ಸೌಹಾರ್ದ ಸಹಕಾರಿ ನಿ,. ಸಹಕಾರಿಯಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 08 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 11.10.2019 ರಂದು ಭದ್ರಾವತಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಭೇತಿಯನ್ನು ಸುಭಾಷ್ ಸೌಹಾರ್ದ ಸಹಕಾರಿ ನಿ,. ಭದ್ರಾವತಿ ಇಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 05 ಸೌಹಾರ್ದ ಸಹಕಾರಿಗಳಿಂದ 07 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 16.10.2019 ರಂದು ತೀರ್ಥಹಳ್ಳಿ ನಗರದ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಶ್ರೀ ರಾಮೇಶ್ವರ ಬಹುಉದ್ದೇಶಿತ ಸೌಹಾರ್ದ ಸಹಕಾರಿಯಲ್ಲಿ ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 10 ಸೌಹಾರ್ದ ಸಹಕಾರಿಗಳಿಂದ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 18.10.2019ರಂದು ಸಾಗರ ತಾಲ್ಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕೃಷಿಕ್ ಸೌಹಾರ್ದ ಸಹಕಾರಿ ನಿ,. ಸಾಗರ ಇಲ್ಲಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 21.10.2019 ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ಹಾಗೂ ಸೊರಬ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಭ್ರಾಂತೇಶ ವಿವಿದೋದ್ದೇಶ ಸೌಹಾರ್ದ ಸಹಕಾರಿ ಶಿಕಾರಿಪುರದಲ್ಲಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 08 ಸೌಹಾರ್ದ ಸಹಕಾರಿಗಳಿಂದ 09 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.10.2019 ರಂದು ವಿಪ್ರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ,. ಶಿವಮೊಗ್ಗ ಇಲ್ಲಿ ಶಿವಮೊಗ್ಗ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಾತ್ಮಕವಾಗಿ ಕಲಂ34 ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಶಶಿಕುಮಾರ್ ರವರು ಉಪಯುಕ್ತ ಮಾಹಿತಿ ನೀಡಿದರು, 24 ಸೌಹಾರ್ದ ಸಹಕಾರಿಗಳಿಂದ 27 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ರಾಮನಗರ:** ದಿನಾಂಕ 18.10.2019 ರಂದು ಪಾವಗಡ ಸೌಹಾರ್ದ ಸಹಕಾರಿ ಶಾಖೆ,. ರಾಮನಗರ ಇಲ್ಲಿ ರಾಮನಗರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಬದ್ಧ ಕಾರ್ಯಚಟುವಟಿಕೆಗಳ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 07 ಸೌಹಾರ್ದ ಸಹಕಾರಿಗಳಿಂದ 09 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ವಾರ್ಷಿಕ ಶುಲ್ಕ, ಶಿಕ್ಷಣ ನಿಧಿ, ಹಾಗೂ ಲೆಕ್ಕಪರಿಶೋಧನಾ ವರದಿಗಳನ್ನು ಸ್ವೀಕರಿಸಲಾಯಿತು.

**ಕೋಲಾರ:** ದಿನಾಂಕ 22.10.2019 ರಂದು ಕೋಲಾರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಸೌಖ್ಯ ಸಮೃದ್ಧಿ ಸೌಹಾರ್ದ ಸಹಕಾರಿ ನಿ,. ಕೊಲಾರ ಇಲ್ಲಿ ಶಾಸನಾತ್ಮಕವಾಗಿ ಕಲಂ 34ರ ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ,ಎಸ್ ರವರು ಉಪಸ್ಥಿತರಿದ್ದರು, 14 ಸೌಹಾರ್ದ ಸಹಕಾರಿಗಳಿಂದ 18 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬೆಂಗಳೂರು:** ದಿನಾಂಕ 14.10.2019 ರಂದು ಯಶಸ್ವಿನಿ ಮಹಿಳಾ ಸೌಹಾರ್ದ ಸಹಕಾರಿ ನಿ,. ಜಾಲಹಳ್ಳಿ ಕ್ರಾಸ್ ಬೆಂಗಳೂರು ಇಲ್ಲಿ ಆಯೋಜಿಸಿದ್ದ ಶಾಸನಾತ್ಮಕ ಜವಬ್ದಾರಿಗಳು ಹಾಗೂ ಉಪವಿಧಿ ತಿದ್ದುಪಡಿ ಮತ್ತು ಚುನಾವಣೆಯ ವಿಷಯದ ಕುರಿತಂತೆ ಟಿ, ದಾಸರಹಳ್ಳಿ ಮತ್ತು ಯಶವಂತಪುರ ಭಾಗದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಭೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 11 ಸೌಹಾರ್ದ ಸಹಕಾರಿಗಳಿಂದ ಒಟ್ಟು 17 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 19.10.2019 ರಂದು ಶ್ರೀ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ,. ಬೆಂಗಳೂರು ಇಲ್ಲಿ ಶಾಸನಾತ್ಮಕ ಜವಬ್ದಾರಿಗಳು ಹಾಗೂ ಉಪವಿಧಿ ತಿದ್ದುಪಡಿ ಮತ್ತು ಚುನಾವಣೆಯ ವಿಷಯದ ಕುರಿತಂತೆ ಯಲಹಂಕ ಮತ್ತು ಬ್ಯಾಟರಾಯನಪುರ ಭಾಗದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 13 ಸೌಹಾರ್ದ ಸಹಕಾರಿಗಳಿಂದ ಒಟ್ಟು 25 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 17.10.2019 ರಂದು ನಗರೇಶ್ವರ ಸೌಹಾರ್ದ ಸಹಕಾರಿ ಬೆಂಗಳೂರು ಇಲ್ಲಿ ಶಾಸನಾತ್ಮಕ ಜವಬ್ದಾರಿಗಳು ಹಾಗೂ ಉಪವಿಧಿ ತಿದ್ದುಪಡಿ ಮತ್ತು ಚುನಾವಣೆಯ ವಿಷಯದ ಕುರಿತಂತೆ ಗಾಂಧಿನಗರ ಮತ್ತು ಮಲ್ಲೇಶ್ವರಂ ಭಾಗದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ ಒಟ್ಟು 15 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 21.10.2019 ರಂದು ಸ್ಪಂದನ ಸೌಹಾರ್ದ ಸಹಕಾರಿ,.ಬೆಂಗಳೂರು ಇಲ್ಲಿ ಶಾಸನಾತ್ಮಕ ಜವಬ್ದಾರಿಗಳು ಹಾಗೂ ಉಪವಿಧಿ ತಿದ್ದುಪಡಿ ಮತ್ತು ಚುನಾವಣೆಯ ವಿಷಯದ ಕುರಿತಂತೆ ವಿಜಯನಗರ ಮತ್ತು ಗೋವಿಂದರಾಜನಗರ ಭಾಗದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ ಒಟ್ಟು 18 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.10.2019 ರಂದು ಶ್ರೀ ಬೆನಕ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇಲ್ಲಿ ಶಾಸನಾತ್ಮಕ ಜವಬ್ದಾರಿಗಳು ಹಾಗೂ ಉಪವಿಧಿ ತಿದ್ದುಪಡಿ ಮತ್ತು ಚುನಾವಣೆಯ ವಿಷಯದ ಕುರಿತಂತೆ ರಾಜಾಜಿನಗರ ಭಾಗದಲ್ಲಿರುವ ಸೌಹಾರ್ದ ಸಹಕಾರಿಗಳಿಗೆ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ಅನಿಲ್ ಕುಮಾರ್ ಎಂ, ರವರು ಉಪಯುಕ್ತ ಮಾಹಿತಿ ನೀಡಿದರು, ತರಬೇತಿಯಲ್ಲಿ 09 ಸೌಹಾರ್ದ ಸಹಕಾರಿಗಳಿಂದ ಒಟ್ಟು 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 19.10.2019 ರಂದು ಜೀವನ್ ಸಾಗರ್ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇಲ್ಲಿ ಕೆ.ಆರ್ ಪುರಂ ವಿಧಾನಸಭಾ ಕ್ಷೇತ್ರದ ಸಹಕಾರಿಗಳಿಗಾಗಿ ಸೌಹಾರ್ದ ಸಹಕಾರಿಗಳಿಗಾಗಿ ಶಾಸನಬದ್ಧ ಕಾರ್ಯಚಟುವಟಿಕೆಗಳ ಕುರಿತು ಕ್ಲಸ್ಟರ್ ತರಭೇತಿಯನ್ನು ಆಯೋಜಿಸಲಾಗಿತ್ತು, ತರಬೇತಿಯಲ್ಲಿ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 07 ಸೌಹಾರ್ದ ಸಹಕಾರಿಗಳಿಂದ 08 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 22.10.2019 ರಂದು ಬಸವನಗುಡಿ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗಾಗಿ ಉದಯ ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇಲ್ಲಿ ಸಹಕಾರಿಗಳ ಶಾಸನಬದ್ಧ ಕಾರ್ಯಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಬಿ,ಎಸ್ ಗುಂಡೂರಾವ್ ರವರು ಉಪಸ್ಥಿತರಿದ್ದರು, ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 16 ಸೌಹಾರ್ದ ಸಹಕಾರಿಗಳಿಂದ 18 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.10.2019 ರಂದು ಬಿಟಿಎಂ ಹಾಗೂ ಜಯನಗರ ವಿಧಾನಸಭಾ ಕ್ಷೇತ್ರದ ಸೌಹಾರ್ದ ಸಹಕಾರಿಗಳಿಗೆ ಅಡಿಕೆನಾಡು ಸೌಹಾರ್ದ ಸಹಕಾರಿ ನಿ,. ಬೆಂಗಳೂರು ಇಲ್ಲಿ ಸಹಕಾರಿಗಳ ಶಾಸನಬದ್ಧ ಕಾರ್ಯಗಳು ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ನಗರದ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ,ಎಂ ರವರು ಉಪಯುಕ್ತ ಮಾಹಿತಿ ನೀಡಿದರು, 08 ಸೌಹಾರ್ದ ಸಹಕಾರಿಗಳಿಂದ 10ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ :** ದಿನಾಂಕ 16.10.2019 ರಂದು ಬಾಗಲಕೋಟ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರಿಗೆ ದಾವಾ ದಾಖಲಾತಿ ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿಯಲ್ಲಿ 04 ಸೌಹಾರ್ದ ಸಹಕಾರಿಗಳಿಂದ 04 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿಕ್ಕಬಳ್ಳಾಪುರ:** ದಿನಾಂಕ 24.10.2019 ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿ ಪಾವಗಡ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ,. ಚಿಕ್ಕಬಳ್ಳಾಪುರ ಇಲ್ಲಿ ಶಾಸನಾತ್ಮಕ ಕಲಂ 34 ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಸುವಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ನಾರಾಯಣ ಹೆಗಡೆ ರವರು ಉಪಯುಕ್ತ ಮಾಹಿತಿ ನೀಡಿದರು, ಜಿಲ್ಲಾ ಸಂಯೋಜಕರಾದ ಶ್ರೀ ಉಮೇಶ್ ಎ.ಎಸ್ ರವರು ಉಪಸ್ಥಿತರಿದ್ದರು, 07 ಸೌಹಾರ್ದ ಸಹಕಾರಿಗಳಿಂದ 08 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಗೌರಿಬಿದನೂರು ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ದಿನಾಂಕ 18-10-2019 ರಂದು ಶಾಸನಾತ್ಮಕವಾಗಿ ಕಲಂ 34 ಮಾಹಿತಿ ಸಲ್ಲಿಸುವಿಕೆ ಹಾಗೂ ಇತರೆ ಮಾಹಿತಿ ಸಲ್ಲಿಕೆಯ ಕುರಿತು ಕ್ಲಸ್ಟರ್ ತರಬೇತಿಯನ್ನು ಅಕ್ಷಯ ಸೌಹಾರ್ದ ಸಹಕಾರಿ ನಿ., ಗೌರಿಬಿದನೂರಿನಲ್ಲಿ ನಡೆಸಲಾಯಿತು. ಪ್ರಾಂತೀಯ ಕಾನೂನು ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಇವರು ಮಾಹಿತಿ ನೀಡಿದರು. 09 ಸೌಹಾರ್ದ ಸಹಕಾರಿಗಳಿಂದ 16 ಪ್ರತಿನಿಧಿಗಳು ಭಾಗವಹಿಸಿದ್ದರು.

**ಚಿತ್ರದುರ್ಗ:** ದಿನಾಂಕ 23.10.2019 ರಂದು ಚಳ್ಳಕೆರೆ ನಗರದ ಅನಂತ ಸೌಹಾರ್ದ ಸಹಕಾರಿಯ ಆವರಣದಲ್ಲಿ ಚಳ್ಳಕೆರೆ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಯುಕ್ತ ಮಾಹಿತಿ ನೀಡಿದರು, 10 ಸೌಹಾರ್ದ ಸಹಕಾರಿಗಳಿಂದ 14 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.10.2019 ರಂದು ಹಿರಿಯೂರು ನಗರದ ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿಯ ಆವರಣದಲ್ಲಿ ಹಿರಿಯೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಯ ಶಾಸನಬದ್ಧ ಜವಬ್ದಾರಿಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಯುಕ್ತ ಮಾಹಿತಿ ನೀಡಿದರು, 05 ಸೌಹಾರ್ದ ಸಹಕಾರಿಗಳಿಂದ 06 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 24.10.2019 ರಂದು ಮೊಳಕಾಲ್ಮೂರು ಪತ್ತಿನ ಸೌಹಾರ್ದ ಸಹಕಾರಿಯ ಆವರಣದಲ್ಲಿ ಮೊಳಕಾಲ್ಮೂರು ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಯ ಶಾಸನಬದ್ಧ ಜವಬ್ದಾರಿಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು, ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಯುಕ್ತ ಮಾಹಿತಿ ನೀಡಿದರು, 06 ಸೌಹಾರ್ದ ಸಹಕಾರಿಗಳಿಂದ 11 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 25.10.2019 ರಂದು ಚನ್ನಗಿರಿ ನಗರದ ಎಂ.ವಿ ಸೌಹಾರ್ದ ಸಹಕಾರಿ ನಿ,. ಇಲ್ಲಿ ಚನ್ನಗಿರಿ ತಾಲೂಕಿನ ಸೌಹಾರ್ದ ಸಹಕಾರಿಗಳಿಗಾಗಿ ಸಹಕಾರಿಯ ಶಾಸನಬದ್ಧ ಜವಬ್ದಾರಿಗಳು ವಿಷಯದ ಕುರಿತು ಕ್ಲಸ್ಟರ್ ತರಬೇತಿಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಉಪಯುಕ್ತ ಮಾಹಿತಿ ನೀಡಿದರು, 04 ಸೌಹಾರ್ದ ಸಹಕಾರಿಗಳಿಂದ 13 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

---

**ಬಳ್ಳಾರಿ:** ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ದಿನಾಂಕ 12.10.2019 ರಂದು ಬೆಳಗ್ಗೆ 10.30 ಗಂಟೆಗೆ ಶ್ರೀ ನಂದೀಶ್ವರ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ಆಯೋಜಿಸಿದ್ದ 'ಶಾಸನಾತ್ಮಕ ಜವಾಬ್ದಾರಿ' ಕುರಿತಂತೆ ಹಗರಿಬೊಮ್ಮನಹಳ್ಳಿ ಹಾಗೂ ಕೂಡ್ಲಿಗಿ ತಾಲ್ಲೂಕಿನ ಸೌಹಾರ್ದ ಸಹಕಾರಿಗಳ ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 10 ಸೌಹಾರ್ದ ಸಹಕಾರಿಗಳಿಂದ 15 ಪ್ರತಿನಿಧಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಕೊಟ್ಟೂರಿನ ವಿಕಾಸ್ ಬ್ಯಾಂಕಿನ ಸಭಾಂಗಣದಲ್ಲಿ ಆಯೋಜಿಸಿದ್ದ 'ಶಾಸನಾತ್ಮಕ ಜವಾಬ್ದಾರಿ ಹಾಗೂ ಲೆಕ್ಕಪರಿಶೋಧನೆಗೆ ಬೇಕಿರುವ ಅಗತ್ಯ ಲೆಕ್ಕಪತ್ರಗಳ ನಿರ್ವಹಣೆ' ಕುರಿತಂತೆ ದಿನಾಂಕ 22.10.2019 ರಂದು ಬೆಳಗ್ಗೆ 10.30 ಗಂಟೆಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಲೆಕ್ಕಪರಿಶೋಧನೆಗೆ ಬೇಕಿರುವ ಅಗತ್ಯ ಲೆಕ್ಕಪತ್ರಗಳ ನಿರ್ವಹಣೆ' ವಿಷಯದ ಕುರಿತು ಲೆಕ್ಕಪರಿಶೋಧಕರಾದ ಶ್ರೀ ಪ್ರವೀಣ್ ರವರು ಮಾಹಿತಿಯನ್ನು ನೀಡಿದರು. ಈ ಕಾರ್ಯಾಗಾರದಲ್ಲಿ ಕೊಟ್ಟೂರಿನ 13 ಸೌಹಾರ್ದ ಸಹಕಾರಿಗಳಿಂದ 21 ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಎರಡು ಕ್ಲಸ್ಟರ್ ತರಬೇತಿ ಕಾರ್ಯಕ್ರಮದಲ್ಲಿ ಸೌಹಾರ್ದ ಸಹಕಾರಿಗಳ ಶಾಸನಾತ್ಮಕ ಜವಾಬ್ದಾರಿಗಳ ಬಗ್ಗೆ ಬಳ್ಳಾರಿ ಜಿಲ್ಲಾ ಸಂಯೋಜಕರಾದ ಶ್ರೀ ರವಿಕುಮಾರ್.ಕೆ. ಆರ್. ಇವರು ಸಹಕಾರಿಗಳಿಗೆ ಮಾಹಿತಿ ನೀಡಿದರು.

---

**ಬೆಳಗಾವಿ:** ದಿನಾಂಕ 03.10.2019ರಂದು ಬೆಳಗಾವಿ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳಿಗಾಗಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಇವರು ಲೆಕ್ಕಪರಿಶೋಧನಾ ವರದಿಯ ಅವಲೋಕನ ಮಾಡುವುದರ ಕುರಿತು ತರಬೇತಿ ನೀಡಿದರು.

# ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿ



**ವಿಜಯಪುರ:** ಬೆಳಗಾವಿ ಪ್ರಾಂತದ ವಿಜಯಪುರ ಹಾಗೂ ಬಾಗಲಕೋಟ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ಎರಡು ದಿನಗಳ ಆಡಳಿತ ಪರಿಣಿತಿ ಅಭಿವೃದ್ಧಿ ತರಬೇತಿಯನ್ನು ದಿನಾಂಕ 24 ಮತ್ತು 25 ಅಕ್ಟೋಬರ್ 2019 ರಂದು ಅಖಿಲ ಭಾರತ ವೀರಶೈವ ಮಹಾಸಭಾ ಭವನ, ಬಂಜಾರ ಕ್ರಾಸ್ ಹತ್ತಿರ ಬಂಜಾರ ಶಾಲೆ ಎದುರಿಗೆ ವಿಜಯಪುರದಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಎನ್.ಪಾಟೀಲ ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿದ್ರಾಮಪ್ಪಾ ಉಪ್ಪಿನ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ, ಸಂಯುಕ್ತ ಸಹಕಾರಿಯ ಮಾನ್ಯ ವೃತ್ತಿಪರ ನಿರ್ದೇಶಕರಾದ ಶ್ರೀ ಎಂ.ಜಿ.ಪಾಟೀಲ, ಮಾನ್ಯ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಶ್ರೀ ಅಮೃತ ಜೋಷಿ ಮಾನ್ಯ ನಿರ್ದೇಶಕರು ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಹೊಸಪೇಟೆ ಇವರುಗಳು ಭಾಗವಹಿಸಿದ್ದರು. ತರಬೇತಿಯಲ್ಲಿ 50 ಸಹಕಾರಿಗಳಿಂದ 70 ಪ್ರತಿನಿಧಿಗಳು ಭಾಗವಹಿಸಿದ್ದರು.

ತರಬೇತಿಯ ಮೊದಲನೇಯ ದಿನ ಅಂದರೆ ದಿನಾಂಕ 24.10.2019 ರಂದು ಮಾನವ ಸಂಪನ್ಮೂಲ ಅಭಿವೃದ್ಧಿ (ಉತ್ತಮ ತಂಡದ ನಿರ್ವಹಣೆಗಾಗಿ ವೈಯಕ್ತಿಕ ಮತ್ತು ತಂಡದ ಕೌಶಲ್ಯಗಳ ಅಗತ್ಯತೆ) ವಿಷಯದ ಕುರಿತು ಶ್ರೀ ಅಮೃತ ಜೋಷಿ ಮಾನ್ಯ ನಿರ್ದೇಶಕರು ವಿಕಾಸ ಸೌಹಾರ್ದ ಕೋ–ಆಪರೇಟಿವ್ ಬ್ಯಾಂಕ್ ಹೊಸಪೇಟೆ ಇವರು ಹಾಗೂ ಸಹಕಾರ ಕ್ಷೇತ್ರಕ್ಕೆ ಸಂಬಂಧಿಸಿದ ಕಾನೂನಾತ್ಮಕ ವಿಷಯಗಳು ಕುರಿತು ಶ್ರೀ ಎಂ.ಜಿ. ಪಾಟೀಲ ಮಾನ್ಯ ವೃತ್ತಿಪರ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಉಪನ್ಯಾಸ ನೀಡಿದರು.

ತರಬೇತಿಯ ಎರಡನೇಯ ದಿನ ಅಂದರೆ ದಿನಾಂಕ 25.10.2019 ರಂದು ಸಹಕಾರಿ ಸಂಸ್ಥೆಗಳಲ್ಲಿ ವ್ಯಾಪಾರ ಅಭಿವೃದ್ಧಿ ಯೋಜನೆ ಮತ್ತು ಸಹಕಾರಿ ನಾಯಕತ್ವ, ಸವಾಲುಗಳು, ಅವಕಾಶಗಳು ಮತ್ತು ಉತ್ತರದಾಯಿತ್ವ ಸಹಕಾರಿ ಸಂಸ್ಥೆಗಳಲ್ಲಿ ಗುಣಮಟ್ಟ ನಿರ್ವಹಣೆ ವಿಷಯದ ಕುರಿತು, ಶ್ರೀ ಸುನೀಲ ಪತ್ತಾರ, ಮಾನ್ಯ ಸಹಾಯಕ ನಿರ್ದೇಶಕರು, ಸಹಕಾರಿ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಮುಧೋಳ ಇವರು ಹಾಗೂ ಗ್ರಾಹಕರ ಸೇವೆಗಳ ನಿರ್ವಹಣೆ ಮತ್ತು ಆಡಳಿತ ಮಂಡಳಿ ಜವಾಬ್ದಾರಿಗಳು ವಿಷಯದ ಕುರಿತು ಶ್ರೀ ಶ್ರೀವತ್ಸ ಗುಡಿ, ಮಾನ್ಯ ಸಹಾಯಕ ಪ್ರಾಧ್ಯಾಪಕರು ಡಾ.ವೀರೇಂದ್ರ ಹೆಗಡೆ ಇನಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ರಿಸರ್ಚ್ ಧಾರವಾಡ ಇವರು ಹಾಗೂ ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು ಹಾಗೂ ನಿರ್ದೇಶಕರ ಜವಾಬ್ದಾರಿ ಮತ್ತು ಕರ್ತವ್ಯಗಳು ವಿಷಯದ ಕುರಿತು ಶ್ರೀ ಆರ್ ಎಂ.ಬಣಗಾರ, ಮಾನ್ಯ ಪ್ರಧಾನ ವ್ಯವಸ್ಥಾಪಕರು(ನಿವೃತ್ತ) ಬಿ.ಡಿ.ಸಿ.ಸಿ. ಬ್ಯಾಂಕ್ ವಿಜಯಪುರ ಇವರು ಉಪನ್ಯಾಸ ನೀಡಿದರು.

# ಪ್ರವೇಶ ತರಬೇತಿ



**ಬೆಳಗಾವಿ :** ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ 25.10.2019ರಂದು ಕನ್ನಡ ಸಾಹಿತ್ಯ ಭವನ, ಬೆಳಗಾವಿಯಲ್ಲಿ ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠ ಇವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಮಾನ್ಯ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ್ ಬರುವೆ ಹಾಗೂ ಮಾನ್ಯ ಉಪಪ್ರಧಾನ ವ್ಯವಸ್ಥಾಪಕಾರದ ಶ್ರೀ ರಘುನಂದನ ಕೆ. ಇವರು ಉಪಸ್ಥಿತರಿದ್ದರು. ತರಬೇತಿಯಲ್ಲಿ 32 ಸೌಹಾರ್ದ ಸಹಕಾರಿಗಳಿಂದ 52 ಪ್ರತಿನಿಧಿಗಳು ಭಾಗವಹಿಸಿದ್ದರು.

## "ವಿಷಯಾಧಾರಿತ ತರಬೇತಿ"




**ಮಂಗಳೂರು:** ದಿನಾಂಕ: 30.10.2019 ರಂದು ಮಂಗಳೂರಿನ ಕ್ಯಾಂಪ್ಕೋ ಸಭಾಂಗಣದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದ ಸಹಕಾರಿಗಳಿಗಾಗಿ 01 ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ದಕ್ಷಣ ಕನ್ನಡ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ನೆರವೇರಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕ್ಯಾಂಪ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ. ಸುರೇಶ್ ಭಂಡಾರಿ ಇವರು ವಹಿಸಿದ್ದರು.

ಉದ್ಘಾಟನೆಯನ್ನು ನೇರವೇರಿಸಿ ಮಾತನಾಡಿದ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಪ್ರವೀಣ್ ನಾಯಕ್ ಇವರು ಇತ್ತೀಚಿನ ದಿನಗಳಲ್ಲಿ ಸಹಕಾರಿ ಸಂಸ್ಥೆಗಳಿಗೆ ತರಬೇತಿ ಕಾರ್ಯಾಗಾರದ ಅಗತ್ಯತೆ ಇದೆ. ಸಾಲ ನೀಡುವ ಸಂದರ್ಭದಲ್ಲಿ ಸರಿಯಾದ ಕ್ರಮಗಳನ್ನು ಅನುಸರಿಸಿದಲ್ಲಿ ಸಾಲ ವಸೂಲಾತಿಗೆ ಕಷ್ಟಪಡುವ ಅಗತ್ಯವಿಲ್ಲ. ಈ ಹಿನ್ನೆಲೆಯಲ್ಲಿ ಸಾಲ ಮಂಜೂರು ಸಂದರ್ಭದಲ್ಲಿ ಸರಿಯಾದ ಕ್ರಮ ವಹಿಸಬೇಕೆಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಕ್ಯಾಂಪ್ಕೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಎಂ. ಸುರೇಶ್ ಭಂಡಾರಿ ಇವರು ಸಹಕಾರಿ ಸಂಸ್ಥೆಗಳು ತಾವು ಮಾಡುವ ಸಮಾಜಮುಖಿ ಕೆಲಸಗಳ ಕುರಿತು ಪ್ರಚಾರ ಪಡೆಯುವ ಅವಶ್ಯಕತೆ ಇದೆ. ಅವಿಭಜಿತ ದಕ್ಷಣ ಕನ್ನಡ ಜಿಲ್ಲೆಯಲ್ಲಿ ಸಹಕಾರಿ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ಆದರೆ ಸಹಕಾರಿ ಸಂಸ್ಥೆಗಳು ಮಾಡುವ ಉತ್ತಮ ಕೆಲಸಗಳ ಕುರಿತು ಪ್ರಚಾರ ಪಡೆಯಬೇಕೆಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ದಕ್ಷಣ ಕನ್ನಡ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಎ. ಸುರೇಶ್ ರೈ ಇವರು ಪ್ರಸ್ತುತ ಪರಿಸ್ಥಿತಿಯಲ್ಲಿ ಸಹಕಾರಿ ಸಂಸ್ಥೆಗಳು ಸಾಲ ನೀಡಿ ಸಾಲ ವಸೂಲಾತಿ ಮಾಡುವುದು ಒಂದು ರೀತಿ ಸವಾಲು. ಆದರೂ ಸಹಕಾರಿ ಸಂಸ್ಥೆಗಳು ಅಂತಹ ಸವಾಲನ್ನು ಸರಿಯಾದ ರೀತಿಯಾದ ಎದುರಿಸುತ್ತಿದೆ ಎಂದು ತಿಳಿಸಿದರು. ಹಿರಿಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರ ಇವರು ಸ್ವಾಗತಿಸಿ, ಪ್ರಸಾವಣೆಗೈದರು. ಉಡುಪಿ ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್ ಇವರು ಕಾರ್ಯಕ್ರಮ ನಿರೂಪಿಸಿ, ವಂದನಾರ್ಪಣೆ ನೆರವೇರಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರದಲ್ಲಿ ಸೌಹಾರ್ದ ಸಹಕಾರಿಗಳ ಚುನಾವಣೆ ಕುರಿತಾದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀಮತಿ ತ್ರಿವೇಣಿ ರಾವ್, ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ, ಮಂಗಳೂರು. ಲೆಕ್ಕಪರಿಶೋಧನೆ ಕುರಿತಾದ ವಿಷಯದ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ಹೆನ್ರಿ ಡಿ'ಸೋಜಾ, ನಿವೃತ್ತ ಹಿರಿಯ ಲೆಕ್ಕಪರಿಶೋಧಕರು. ಸಾಲ ವಂಜೂರಾತಿಯ ಪೂರ್ವದಲ್ಲಿ ಗಮನಿಸಬೇಕಾದ ಕಾನೂನಾತ್ಮಕ ಅಂಶಗಳ ಕುರಿತು ಸಂಪನ್ಮೂಲ ವ್ಯಕ್ತಿಯಾದ ಶ್ರೀ ಸತೀಶ್‌ಕುಮಾರ್ ಭಟ್, ವಕೀಲರು ಇವರುಗಳು ತರಬೇತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಭೇಟಿ

**ಚಿತ್ರದುರ್ಗ :** ಶ್ರೀ ಕನ್ಯಕಾ ಪರಮೇಶ್ವರಿ ಸೌಹಾರ್ದ ಸಹಕಾರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡು, ವ್ಯವಹಾರ ಅಭಿವೃದ್ಧಿಗೆ ಅನೇಕ ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ಸ್ಟೇಟ್ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಸ್ ಅಸೋಸಿಯೇಷನ್, ಬೆಂಗಳೂರು. ಇದರ ರಾಜ್ಯಾಧ್ಯಕ್ಷರು ಹಾಗೂ ಕನ್ಯಕಾ ಸೌಹಾರ್ದ ಸಹಕಾರಿಯ ಅಧ್ಯಕ್ಷರಾಗಿರುವ ಶ್ರೀ ಪಿ. ಎಸ್. ನಾಗರಾಜ ಶೆಟ್ಟಿಯವರು, ವಿಜಯ ಬ್ಯಾಂಕಿನ ನಿವೃತ್ತ ಎ. ಜಿ.ಎಂ ಆದ ರಾಮದಾಸ್ ರವರು ಉಪಸ್ಥಿತರಿದ್ದರು.

ಪ್ರಗತಿ ದುರ್ಗ ಸೌಹಾರ್ದ ಪತ್ತಿನ ಸಹಕಾರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಭೇಟಿ ನೀಡಿ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದುಕೊಂಡು, ವ್ಯವಹಾರ ಅಭಿವೃದ್ಧಿಗೆ ಅನೇಕ ಸಲಹೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಪ್ರಗತಿ ದುರ್ಗ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ. ವೆಂಕಟೇಶ್ ರೆಡ್ಡಿಯವರು ಉಪಸ್ಥಿತರಿದ್ದರು.

ದಿನಾಂಕ 14.10.2019 ರಂದು ಚಿತ್ರದುರ್ಗ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಆರ್ಯ ವೈಶ್ಯ ಸಮಾಜದ ಮುಖಂಡರನ್ನು ಭೇಟಿಯಾಗಿ ಹೊಸ ಸೌಹಾರ್ದ ಸಹಕಾರಿಯ ಸ್ಥಾಪನೆ ಸಂಬಂಧ ಅಗತ್ಯ ಮಾಹಿತಿ ನೀಡಿದರು.

**ಯಾದಗಿರಿ:** ಮಾತೋಶ್ರೀ ಹೇಮರಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪೂರ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ, ಶ್ರೀ ವಾಯ್. ಟಿ. ಪಾಟೀಲ್, ಶ್ರೀ ಸಂಜಯ ಮಹಾಜನ ಇವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು. ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಚಂದ್ರಶೇಖರ ಲಿಂಗದಳ್ಳಿ. ನಿರ್ದೇಶಕರು, ಸಿಬ್ಬಂದಿಗಳು, ಉಪಸ್ಥಿತರಿದ್ದರು.

# ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಶೇರು ಸಂಗ್ರಹಣಾ ಸಭೆಗಳು



ವಿಜಯಪುರ : ಶ್ರೀ ವೀರಶೈವ ಲಿಂಗಾಯತ ಸೌಹಾರ್ದ ಸಹಕಾರಿ ನಿ, ವಿಜಯಪುರ ಸದರಿ ಸಹಕಾರಿಯಿಂದ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ. ಬೆಂಗಳೂರು ಇದರ ಅಧ್ಯಕ್ಷರಾದ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಗುರನಾಥ ಜಾಂತಿಕರ, ನಿರ್ದೇಶಕರಾದ ಎಸ್. ಎಸ್ ಪಾಟೀಲ, ಮತ್ತು ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಎಂ.ಜಿ. ಪಾಟೀಲ ಇವರನ್ನು ಸನ್ಮಾನಿಸಲಾಯಿತು.



ವಿಜಯಪುರ: ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ನಿ., ಬೆಂಗಳೂರು ಇದರ ಕುರಿತು ವಿಜಯಪುರದ ಸಿದ್ದೇಶ್ವರ ಸಂಸ್ಥೆಯಲ್ಲಿ ಕಾರ್ಯಕ್ರಮ ಹಮ್ಮಿಕೊಳಲಾಗಿದ್ದು ಸದರಿ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಗುರುನಾಥ ಜ್ಯಾಂತಿಕರ ರವರು ವಹಿಸಿದರು, ಮುಖ್ಯ ಅಥಿತಿಗಳಾಗಿ ಎಸ್ ಎಸ್ ಪಾಟೀಲ ಹಾಗೂ ಎಂ.ಜಿ. ಪಾಟೀಲ ಉಪಸ್ಥಿತರಿದ್ದರು. ಸದರಿ ಸಭೆಯಲ್ಲಿ 20 ಸೌಹಾರ್ದಗಳಿಂದ 30 ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಉದ್ಘಾಟನಾ ಕಾರ್ಯಕ್ರಮ




ಕೊಪ್ಪಳ : ದಿನಾಂಕ 3-11-2019 ರಂದು ಬೆಳಗ್ಗೆ 11:00 ಗಂಟೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಎಚ್. ಕೃಷ್ಣಾರೆಡ್ಡಿ ರವರು ಸೌಭಾಗ್ಯಲಕ್ಷ್ಮೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸದರಿ ಸಹಕಾರಿಯ ನೂತನ ಕಟ್ಟಡವಾದ " ಸೌಭಾಗ್ಯಲಕ್ಷ್ಮೀ ಸಂಕೀರ್ಣ "ವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಪರಮಪೂಜ್ಯ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು ದಿವ್ಯ ಸಾನಿಧ್ಯವನ್ನು ವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಪ್ರಾಣೇಶರಾವ್ ದೇಸಾಯಿರವರು ವಹಿಸಿದರು, ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ.ಶೀಧರ್ ರವರು ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಬಿ ಪತ್ತಾರ ಮತ್ತು ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಂಕರಗೌಡ ಎಲ್ ಹಿರೇಗೌಡರವರು ಮತ್ತು ಶ್ರೀಮತಿ ಹರಿಂದರ್ ಪಾಲ್ ಕೌರ್, ಪ್ರಾಂತೀಯ ನಿರ್ದೇಶಕರು, ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮ ಬೆಂಗಳೂರು ರವರು ಉಪಸ್ಥಿತರಿದ್ದರು.



ಸದರಿ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಗಣಕಯಂತ್ರದ ವಿಭಾಗವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ ಶ್ರೀಧರ್ ರವರು ಉದ್ಘಾಟಿಸಿದರು.

# ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರ ಹಾಗೂ ನಿರ್ದೇಶಕರುಗಳು ವಿವಿಧ ಸೌಹಾರ್ದ ಸಹಕಾರಿಗಳಿಗೆ ಭೇಟಿ



ಮೈಸೂರು: ದಿನಾಂಕ 12.10.2019 ರಂದು ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಮತ್ತು ನಿರ್ದೇಶಕರುಗಳಾದ ಶ್ರೀ ಗುರುನಾಥ ಜ್ಯಾಂತಕರ ಶ್ರೀ ಹೆಚ್.ವಿ.ರಾಜೀವ್, ಶ್ರೀ ಮಂಜುನಾಥ ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ ಇವರು ಭೇಟಿ ನೀಡಿ ಮಾರ್ಗದರ್ಶನ ನೀಡಿದರು.



ಕೊಪ್ಪಳ: ದಿನಾಂಕ 03.11.2019 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿ ಕೊಪ್ಪಳದ ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯನ್ನು ಭೇಟಿ ನೀಡಿ ಸಹಕಾರಿಯ ಆರ್ಥಿಕ ಚಟುವಟಿಕೆಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ನೀಡಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ್ ರವರು ಮತ್ತು ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮಾನ್ಯ ಅಧ್ಯಕ್ಷರಾದ ಶ್ರೀ ನಾಗಲಿಂಗಪ್ಪ ಜಿ. ಪತ್ತಾರ್, ಶುಕಪುರಿ ಪತ್ತಿನ ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭೂಮಿ ಪೂಜೆ



ಸಿಂಧನೂರು: ದಿನಾಂಕ 03.11.2019 ರಂದು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ. ಹೆಚ್. ಕೃಷ್ಣಾರೆಡ್ಡಿರವರು ಸಿಂಧನೂರಿನ ಸಪ್ತಗಿರಿ ಪತ್ತಿನ ಸೌಹಾರ್ದ ಸಹಕಾರಿಯ ನೂತನ ಕಟ್ಟಡದ ಭೂಮಿ ಪೂಜೆಯನ್ನು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಧರ್ ಮತ್ತು ಸೌಹಾರ್ದ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




ಹುಕ್ಕೇರಿ: ಶ್ರೀ ಶಿವಲಿಂಗೇಶ್ವರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಬಾಡ ಹುಕ್ಕೇರಿ ಸಹಕಾರಿಯ ಪ್ರಧಾನ ಕಛೇರಿಯ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ತ್ರಿವಿಧ ದಾಸೋಹಿ ಪ.ಪೂ ಶ್ರೀ ಮ ನಿ ಜ ಪಂಚಮ ಶ್ರೀ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ದುರದುಂಡೇಶ್ವರ ಸಿದ್ಧ ಸಂಸ್ಥಾನ ಮಠ ನಿಡಸೋಶಿ ರವರು ಉದ್ಘಾಟನೆ ಮಾಡಿದರು ಮ.ನಿ.ಪ್ರ. ಸಂಪಾದನ ಚರಮೂರ್ತಿಮಠ ಮಹಾಸ್ವಾಮಿಗಳು, ಚಿಕ್ಕೋಡಿ ಇವರು ದಿವ್ಯಸಾನಿಧ್ಯ ವಹಿಸಿದ್ದರು ಹಾಗೂ ಮುಖ್ಯ ಅತಿಥಿಗಳಾಗಿ ಶ್ರೀ ರಮೇಶಣ್ಣಾ ವಿ. ಕತ್ತಿ, ಮಾನ್ಯ ಅಧ್ಯಕ್ಷರು ಬಿಡಿಸಿಸಿ ಬ್ಯಾಂಕ್ ಬೆಳಗಾವಿ ಮತ್ತು ಸಂಯುಕ್ತ ಸಹಕಾರಿಯ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಬರುವೆ ಇವರು ಉಪಸ್ಥಿತರಿದ್ದರು.

## ತರಬೇತಿ ಕಾರ್ಯಕ್ರಮ

ಬಳ್ಳಾರಿ: ದಿನಾಂಕ 12-10-2019 ರಂದು ಹೊಸಪೇಟೆಯ ಆರ್.ಡಿ.ಸೋಲಿ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಸದರಿ ಸಹಕಾರಿಯ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗಿದ್ದು, ತರಬೇತುದಾರರಾಗಿ ವಿಕಾಸ ಸೌಹಾರ್ದ ಕೋ-ಆಪ್‌ರೇಟಿವ್ ಬ್ಯಾಂಕಿನ ಹಿರಿಯ ನಿರ್ದೇಶಕರಾದ ಶ್ರೀ ಅನಂತ್ ರಮೇಶ್ ಪುರೋಹಿತ ಇವರು ತರಬೇತಿಯನ್ನು ನೀಡಿದರು.

# "ಸಹಕಾರ ಹಾಗೂ ಬ್ಯಾಂಕಿಂಗ್ ಮೆನೇಜಮೆಂಟ ಡಿಪ್ಲೋಮಾ"
## 2ನೇ ತಂಡದ ಪ್ರವೇಶ ಅರ್ಜಿಗಳ ಆಹ್ವಾನ
## ಸೌಹಾರ್ದ ಸಹಕಾರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವಿದ್ಯಾರ್ಥಿಗಳಿಗೆ, ಸಹಕಾರಿಗಳಿಗೆ 6 ತಿಂಗಳ ದೂರ ಶಿಕ್ಷಣ ಕೋರ್ಸ"
## 1ನೇ ಜನವರಿ 2020 ರಿಂದ ಪ್ರಾರಂಭ

# Applications called for 2nd Batch of "Diploma in Cooperation and Banking Management"(DCBM) 6 Months Distance Education Course starts from 1st January 2020

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ವತಿಯಿಂದ 6 ತಿಂಗಳ ದೂರ ಶಿಕ್ಷಣ "ಡಿಪ್ಲೋಮಾ ಇನ್ ಕೋ-ಆಪರೇಶನ್ & ಬ್ಯಾಂಕಿಂಗ ಮೆನೇಜಮೆಂಟ"ನ 2ನೇ ತಂಡದ ಕೋರ್ಸ್‌ನ್ನು ಇದೇ ಜನವರಿ 2020 ರಿಂದ ಪ್ರಾರಂಭಿಸಲಾಗುತ್ತದೆ.

ಈ ಕೋರ್ಸ 6 ತಿಂಗಳು ಅವಧಿಯದ್ದಾಗಿದೆ. 6 ವಿಷಯಗಳಿರುತ್ತವೆ. ಒಂದು ಕೇಸ್‌ಸ್ಟಡಿ ಇರುತ್ತದೆ. ಪ್ರತಿ ವಿಷಯಕ್ಕೆ ತಲಾ 100 ಅಂಕಗಳು, ಕೇಸ್‌ಸ್ಟಡಿಗೆ 40 ಅಂಕಗಳು ಹಾಗೂ ಕಂಟ್ಯಾಕ್ಟ ಕ್ಲಾಸ್‌ಗಳಿಗೆ 60 ಅಂಕಗಳು (ಒಟ್ಟು 100 ಅಂಕಗಳು) ಒಟ್ಟು 700 ಅಂಕಗಳು. ಪ್ರತಿ 2 ತಿಂಗಳಿಗೆ ಒಂದು ಬಾರಿ 2 ದಿನಗಳ ಒಂದು ಕಂಟ್ಯಾಕ್ಟ ಕ್ಲಾಸ್ ನಡೆಸಲಾಗುವುದು. 6 ತಿಂಗಳ ಕೊನೆಯಲ್ಲಿ ಪರೀಕ್ಷೆ ನಡೆಸಲಾಗುವುದು. ನಂತರ ಫಲಿತಾಂಶ ಪ್ರಕಟಿಸಲಾಗುವುದು. ಅಂಕಪಟ್ಟಿ ಹಾಗೂ ಸರ್ಟಿಫಿಕೇಟ್ ನೀಡಲಾಗುವುದು.

ಈ ಕೋರ್ಸನ್ನು 1997 ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯವರು, ವಿದ್ಯಾರ್ಥಿಗಳು, ಸಹಕಾರಿಗಳು ಹಾಗೂ ಯುವಕ ಯುವತಿಯರು ಮಾಡಬಹುದಾಗಿದೆ.

**ಕನಿಷ್ಠ ವಿದ್ಯಾರ್ಹತೆ ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) ಪೂರ್ಣಗೊಂಡಿರಬೇಕು.**

ಕೋರ್ಸ ಫೀ : ರೂ. 5000/-(ಪ್ರವೇಶ ಹಾಗೂ ವ್ಯವಸ್ಥಾಪನಾ ಶುಲ್ಕ ರೂ 2000/- ಕೋರ್ಸ ಮೆಟಿರಿಯಲ್ ರೂ 2000/- ಪರೀಕ್ಷಾ ಫೀ 1000/-) ಅಧ್ಯಯನ ಸಾಹಿತ್ಯ ಕಲಿಕೆ ಹಾಗೂ ಪರೀಕ್ಷೆಗಳನ್ನು ಕನ್ನಡ ಅಥವಾ ಇಂಗ್ಲಿಷ್ ಭಾಷೆಯ ಆಯ್ಕೆಗೆ ಅವಕಾಶವಿರುತ್ತದೆ. ಅರ್ಜಿಯ ಜೊತೆಗೆ ಕೋರ್ಸ್ ಫೀರೂ 5,000/- (18% ಜಿಎಸ್‌ಟಿ ರೂ.1170/-) ಗಳು ಸೇರಿದಂತೆ ಒಟ್ಟು ರೂ. 6170/- ನ್ನು ಕಳುಹಿಸುವುದು.

2 ದಿನಗಳ 3 ಕಂಟ್ಯಾಕ್ಟ ತರಗತಿಗಳ ವೆಚ್ಚ ತಲಾ ರೂ 500 ಗಳಂತೆ ಒಟ್ಟು ರೂ 1500/- ಕಂಟ್ಯಾಕ್ಟ ತರಗತಿಗಳನ್ನು ಶಿಬಿರಾರ್ಥಿಗಳ ಸಂಖ್ಯೆಯ ಆಧಾರದ ಮೇಲೆ ಬೆಂಗಳೂರು, ಮೈಸೂರು, ಬೆಳಗಾವಿ ಹಾಗೂ ಕಲಬುರಗಿ ವಿಭಾಗೀಯ ಕೇಂದ್ರಗಳಲ್ಲಿ ಮತ್ತು ಸಂಯುಕ್ತ ಸಹಕಾರಿಯು ನಿಗದಿಪಡಿಸುವ ರಾಜ್ಯದ ಇತರೆ ಕೇಂದ್ರಗಳಲ್ಲಿಯೂ ಸಹ ನಡೆಸಲಾಗುವುದು. ಕಂಟ್ಯಾಕ್ಟ ತರಗತಿ ಸಮಯದಲ್ಲಿ ಅಭ್ಯರ್ಥಿಗಳ ಊಟ, ವಸತಿ ವ್ಯವಸ್ಥೆಯನ್ನು ಮಾಡಲಾಗುವುದು. 3 ಕಂಟ್ಯಾಕ್ಟ ತರಗತಿಗಳ ವೆಚ್ಚ ರೂ 1500/- ಪ್ರತೇಕ.

**ಡಿಸೆಂಬರ 31 ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ.**

ಅರ್ಜಿ ಫಾರ್ಮ ಹಾಗೂ ಕೋರ್ಸ ವಿವರಣಾ ಪತ್ರ ಪಡೆಯಲು ಸ್ವವಿವರ ಹಾಗೂ ರೂ. 100 ಗಳನ್ನು ಪೋಸ್ಟಲ್ ಆರ್ಡರ್‌ನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನಿ., ಬೆಂಗಳೂರು ಇವರ ಹೆಸರಿಗೆ ಪಡೆದು ಕೇಂದ್ರ ಕಛೇರಿಗೆ ಅಥವಾ ಪ್ರಾಂತೀಯ ಕಛೇರಿಗಳಿಗೆ ಕಳುಹಿಸುವುದು.

ಹೆಚ್ಚಿನ ವಿವರಗಳಿಗೆ ಜಿಲ್ಲಾ ಸಂಪರ್ಕ ವ್ಯಕ್ತಿಗಳ ಹೆಸರುಗಳ ನಂಬರ್‌ಗಳನ್ನು www.souharda.coop ಹಾಗೂ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಕೇಂದ್ರ ಕಛೇರಿ :080-23378375-80, 23474408, 23573291, ಬೆಂಗಳೂರು ಪ್ರಾಂತೀಯ ಕಛೇರಿ: 080-23525546, ಮೈಸೂರು ಪ್ರಾಂತೀಯ ಕಛೇರಿ: 0821-2332299, ಬೆಳಗಾವಿ ಪ್ರಾಂತೀಯ ಕಛೇರಿ: 0831-2401551, ಕಲಬುರಗಿ ಪ್ರಾಂತೀಯ ಕಛೇರಿ: 08472-270222.

ಸಹಿ/-
(ಶರಣಗೌಡ ಜಿ. ಪಾಟೀಲ)
**ವ್ಯವಸ್ಥಾಪಕ ನಿರ್ದೇಶಕರು**

# ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯ ಚುನಾವಣೆ ಹಾಗೂ ಆಕಸ್ಮಿಕ ತೆರವಾಗುವ ಸ್ಥಾನಗಳಿಗೆ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರದಿಂದ ಸುತ್ತೋಲೆ

ಕರ್ನಾಟಕ ಸರ್ಕಾರ

ಸಹಕಾರಚುನಾವಣಾ ಪ್ರಾಧಿಕಾರ

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್, ಶಾಂತಿನಗರ, ಬೆಂಗಳೂರು-560027

**ವಿಷಯ:** ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 26 ಎ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 ನಿಯಮ 2(ಜಿ-2) ರಂತೆ ದಿನಾಂಕ 01.01.2020ರಿಂದ 31.12.2020ರವರೆಗೆ ಪದಾವಧಿ ಮುಗಿಯಲಿರುವ/ ಆಕಸ್ಮಿಕವಾಗಿ ತೆರವಾಗುವ ಸ್ಥಾನಗಳಿಗೆ/ ಹೊಸದಾಗಿ ನೋಂದಣಿಯಾಗುವ ಎಲ್ಲಾ ರೀತಿಯ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡುವ ಬಗ್ಗೆ.

ಉಲ್ಲೇಖ:
(1) ಸಹಕಾರ ಚುನಾವಣಾ ಪ್ರಾಧಿಕಾರದ ಆದೇಶ ಸಂಖ್ಯೆ:ಸಚುಪ್ರಾ/ಆಡಳಿತ/ಪ್ರಾಸಂಚು/05/2019-20, ದಿನಾಂಕ:30/09/2019.
(2) ಸ.ಸಂ.ಜಂ.ನಿ., ಬೆಳಗಾವಿ ಪ್ರಾಂತ ರವರ ಪತ್ರ ಸಂಖ್ಯೆ:ಜೆಆರ್ ಎಲ್/ಎ/ಎಕ್ಸ್ಆರ್ಒ/ಸೌಸಚು/01/2019-20, ದಿನಾಂಕ:17/10/2019.
(3) ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ)(ಪ್ರಭಾರ) ಭದ್ರಾ ಕಾಡಾ, ಶಿವಮೊಗ್ಗ ರವರ ಪತ್ರ ಸಂಖ್ಯೆ:ಭಕಾಶಿ/ಸಹಕಾರ/ಚುನಾವಣೆ/2019-20, ದಿನಾಂಕ:31/10/2019.

★★★

**ಪ್ರಸ್ತಾವನೆ**

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 2(ಜಿ-2) ಪ್ರದತ್ತವಾದ ಅಧಿಕಾರದಂತೆ, 2020ನೇ ಸಾಲಿನಲ್ಲಿ ಅಂದರೆ ದಿನಾಂಕ: 01.01.2020 ರಿಂದ 31.12.2020 ರವರೆಗೆ ಸಹಕಾರಿಗಳ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆ, ಹೊಸದಾಗಿ ನೋಂದಣಿಯಾದ, ಆಕಸ್ಮಿಕವಾಗಿ ತೆರವಾದ ನಿರ್ದೇಶಕರ ಸ್ಥಾನಗಳಿಗೆ / ವಿಶೇಷಾಧಿಕಾರಿ ನೇಮಕಗೊಂಡ ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆ ತತ್ಪರಿಣಾಮ ಪದಾಧಿಕಾರಿಗಳ ಚುನಾವಣೆ ನಡೆಸಲು ಚುನಾವಣಾಧಿಕಾರಿಗಳನ್ನು ನೇಮಕಾತಿ ಮಾಡಿ ಈಗಾಗಲೇ ಉಲ್ಲೇಖ (1)ರಂತೆ ಆದೇಶ ಹೊರಡಿಸಿದೆ. ಆಡಳಿತಾತ್ಮಕ ಕಾರಣಗಳಿಂದ ಈ ಕೆಳಕಂಡಂತೆ ಕೆಲವು ಚುನಾವಣಾಧಿಕಾರಿಗಳನ್ನು ಮತ್ತು ಚುನಾವಣಾಧಿಕಾರಿಗಳ ಪದನಾಮಗಳನ್ನು ಬದಲಾವಣೆ ಮಾಡುವುದು ಸೂಕ್ತವೆಂದು ಪರಿಗಣಿಸಿ, ಈ ಕೆಳಕಂಡಂತೆ ಮಾರ್ಪಾಡು ಮಾಡಿ ಪರಿಷ್ಕೃತ ಆದೇಶ ಹೊರಡಿಸಿದೆ.

**ಮಾರ್ಪಾಡು ಆದೇಶ**

**ಸಂಖ್ಯೆ: ಸಚುಪ್ರಾ/ಆಡಳಿತ/ಪ್ರಾಸಚು/05/2019-20** **ದಿನಾಂಕ: 05.11.2019**

| ಕ್ರ.ಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| 1 | ಬೆಂಗಳೂರು ನಗರ ಮತ್ತು ಬೆಂಗಳೂರು(ಗ್ರಾ) ಜಿಲ್ಲೆಗಳು | ಸಹಕಾರ ಸಂಘಗಳ ಜಂಟಿ ನಿಬಂಧಕರು (ಪಟ್ಟಣ ಬ್ಯಾಂಕುಗಳ ವಿಭಾಗ) ಕೇಂದ್ರ ಕಛೇರಿ, ಬೆಂಗಳೂರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು |

| ಕ್ರಸಂ. | ಜಿಲ್ಲೆಯ ಹೆಸರು | ಚುನಾವಣಾಧಿಕಾರಿಯಾಗಿ ನೇಮಿಸಲ್ಪಟ್ಟ ಅಧಿಕಾರಿ |
|---|---|---|
| 2 | ರಾಮನಗರ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ರಾಮನಗರ ಜಿಲ್ಲೆ |
| 3 | ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ತುಮಕೂರು ಜಿಲ್ಲೆ |
| 4 | ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಚಿಕ್ಕಬಳ್ಳಾಪುರ ಜಿಲ್ಲೆ |
| 5 | ದಾವಣಗೆರೆ ಮತ್ತು ಹಾವೇರಿ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ದಾವಣಗೆರೆ ಜಿಲ್ಲೆ |
| 6 | ಶಿವಮೊಗ್ಗ, ಮಂಗಳೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಶಿವಮೊಗ್ಗ ಜಿಲ್ಲೆ |
| 7 | ಮಂಡ್ಯ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳು | ಸಹಕಾರ ಸಂಘಗಳ ಜಂಟಿ ನಿರ್ದೇಶಕರು, ಮೈಸೂರು ಜಿಲ್ಲೆ |
| 8 | ಕೊಡಗು ಮತ್ತು ಹಾಸನ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಕೊಡಗು ಜಿಲ್ಲೆ, ಮಡಿಕೇರಿ |
| 9 | ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಉಡುಪಿ ಜಿಲ್ಲೆ |
| 10 | ಬೆಳಗಾವಿ ಜಿಲ್ಲೆ | ಸಹಕಾರ ಸಂಘಗಳ ಅಪರ ನಿಬಂಧಕರು, ಕಾಡಾ, ಬೆಳಗಾವಿ<br>(ಪದನಾಮ ಸರಿಪಡಿಸಿದೆ) |
| 11 | ವಿಜಯಪುರ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಜಂಟಿ ನಿರ್ದೇಶಕರು, ವಿಜಯಪುರ ಜಿಲ್ಲೆ<br>(ಪದನಾಮ ಸರಿಪಡಿಸಿದೆ) |
| 12 | ಬಾಗಲಕೋಟೆ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬಾಗಲಕೋಟೆ ಜಿಲ್ಲೆ |
| 13 | ಧಾರವಾಡ ಮತ್ತು ಗದಗ ಜಿಲ್ಲೆಗಳು | ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು, ದಾರವಾಡ ಜಿಲ್ಲೆ<br>(ಪದನಾಮ ಸರಿಪಡಿಸಿದೆ) |
| 14 | ಕಲಬುರಗಿ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳು | ಸಹಕಾರ ಸಂಘಗಳ ಜಂಟಿ ನಿಬಂಧಕರು ಕಾಡಾ, ಭೀಮರಾಯನಗುಡಿ |
| 15 | ಬೀದರ್ ಜಿಲ್ಲೆ | ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪ ನಿರ್ದೇಶಕರು, ಬೀದರ್ ಜಿಲ್ಲೆ |
| 16 | ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳು | ಸಹಕಾರ ಸಂಘಗಳ ಜಂಟಿ ನಿಬಂಧಕರು, ಕಾಡಾ ಮುನಿರಾಬಾದ್ |

**ವಿಶೇಷ ಸೂಚನೆ:**– ಅಧಿಕಾರ ಪ್ರತ್ಯಾಯೋಜನೆಯಂತೆ ಮೇಲಿನ ಕೋಷ್ಟಕದಲ್ಲಿ ಹಂಚಿಕೆ ಮಾಡಲಾಗಿರುವ ಎಲ್ಲಾ ವಿಧದ ಸೌಹಾರ್ದ ಸಹಕಾರಿಗಳ ಚುನಾವಣೆ ಸಂಬಂಧಿಸಿದಂತೆ ಚುನಾವಣಾಧಿಕಾರಿಗಳನ್ನು ಸೂಚಿಸದೆ ಇದ್ದಲ್ಲಿ (ಅಂತಹ ಸಹಕಾರಿಗಳು ಕೈತಪ್ಪಿ ಹೋಗಿದ್ದರೆ) ಅಂತಹ ಸಹಕಾರಿಗಳ ಚುನಾವಣೆಯನ್ನು ಜರುಗಿಸುವ ಸಂಬಂಧ, ಸಂಬಂಧಪಟ್ಟ ಜಿಲ್ಲಾ ಉಪ ನಿಬಂಧಕರು ಕೂಡಲೇ ಪ್ರಾಧಿಕಾರದ ಗಮನಕ್ಕೆ ತರಲು ಸೂಚಿಸಿದೆ.

ಚುನಾವಣಾಧಿಕಾರಿಗಳು ಅವರ ಕಾರ್ಯವ್ಯಾಪ್ತಿಗೆ ಬರುವಂತಹ ಸಹಕಾರಿಗಳ ಚುನಾವಣೆಯನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ಹಾಗೂ ಪ್ರಾಧಿಕಾರದಿಂದ ಕಾಲಕಾಲಕ್ಕೆ ನೀಡಲಾದ ಸುತ್ತೋಲೆ, ಅಧಿಸೂಚನೆ ಆದೇಶ ಮತ್ತು ಮಾರ್ಗಸೂಚಿಗಳನ್ನು, (ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮಗಳು ಮತ್ತು ನಿಯಮಾನುಸಾರ) ಅನುಸರಿಸಿ ನಿಷ್ಪಕ್ಷಪಾತವಾಗಿ ಚುನಾವಣೆ ನಡೆಸಲು ಆದೇಶಿಸಿದೆ.

ಮೇಲೆ ತಿಳಿಸಿದಂತೆ ನೇಮಿಸಲ್ಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004 (2015ರ ತಿದ್ದುಪಡಿ)ರ ನಿಯಮ 5–ಎ ರಂತೆ ದಿನಾಂಕ:1–1–2020 ರಿಂದ 31–12–2020ರವರೆಗೆ ನಡೆಯಬೇಕಾಗಿರುವ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸೌಹಾರ್ದ ಸಹಕಾರಿಗಳ ಚುನಾವಣೆಯನ್ನು ಹಾಲಿ ಇರುವ ಆಡಳಿತ ಮಂಡಲಿ ಅವಧಿ ಮುಗಿಯುವ 15 ದಿನಗಳ ಮುಂಚಿತವಾಗಿ ಚುನಾವಣೆ ಪ್ರಕ್ರಿಯೆ ಮುಗಿಯುವಂತೆ ಕ್ರಮ ಕೈಗೊಳ್ಳತಕ್ಕದ್ದು.

(ಡಾ.ಎನ್.ಎಸ್. ಚನ್ನಪ್ಪಗೌಡ) 5/11
ಆಯುಕ್ತರು
ಸಹಕಾರಚುನಾವಣಾ ಪ್ರಾಧಿಕಾರ,
ಬೆಂಗಳೂರು.

## ಅಕ್ಟೋಬರ್ ಮಾಹೆಯ ಸಂಯುಕ್ತ ಸಹಕಾರಿಯ ಶಾಸನಬದ್ಧ ಕಾರ್ಯಗಳು.

**ಮುಖ್ಯ ಕಾರ್ಯನಿರ್ವಾಹಕರು,**
**ಶ್ರೀ ಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ.,**
**ಮಾಂಜರಿ, ಬೆಳಗಾವಿ ಜಿಲ್ಲೆ**

**ಪ್ರಶ್ನೆ : ಸಹಕಾರಿಯ ಕಾರ್ಯಕ್ಷೇತ್ರದ ಊರುಗಳಲ್ಲಿ ನೆರಹಾವಳಿ ಪೀಡಿತ ಸಹಕಾರಿಯ ಸದಸ್ಯರುಗಳಿಗೆ ಸಹಾಯ ಮಾಡುವ ಸಲುವಾಗಿ ಪ್ರತಿಶತ 50% ಲಾಭಾಂಶ ವಿತರಿಸುವ ಕುರಿತು**

**ಉತ್ತರ :** ಈ ಭಾರಿ ಕರ್ನಾಟಕದಲ್ಲಿ ನೆರೆ ಹಾವಳಿಯಿಂದ ಅನೇಕ ಗ್ರಾಮಗಳು ಜಲಾವೃತವಾಗಿರುತ್ತವೆ. ಈ ಪ್ರಕೃತಿ ವಿಕೋಪಕ್ಕೆ ಒಳಗಾದ ಸದಸ್ಯರಿಗೆ ಹೆಚ್ಚಿನ ಡಿವಿಡೆಂಡ್ ನೀಡಲು ಅನುಮತಿ ಕೋರಿರುತ್ತೀರಿ, ತಮ್ಮ ಸಮಾಜಮುಖಿ ಕಾಳಜಿಗೆ ಸಂಯುಕ್ತ ಸಹಕಾರಿಯು ಅಭಿನಂದಿಸುತ್ತದೆ ಆದರೆ ಸೌಹಾರ್ದ ಸಹಕಾರಿ ಅಧಿನಿಯಮ ಕಾಯ್ದೆ ಕಲಂ 10 (xxi) ರಲ್ಲಿ ತಿಳಿಸಿರುವಂತೆ ಎಲ್ಲ ರೀತಿಯ ಶಾಸನಬದ್ದ ವಿನಿಯೋಗಗಳನ್ನು ಮಾಡಬೇಕಾಗಿರುತ್ತದೆ ಆದ್ದರಿಂದ 25% ಕ್ಕಿಂತ ಹೆಚ್ಚಿಗೆ ಸಹಕಾರಿಯ ಸದಸ್ಯರಿಗೆ ಡಿವಿಡೆಂಟ್ ನೀಡುವುದು ಸೂಕ್ತವಲ್ಲ, ಆದರೆ ಪ್ರಕೃತಿ ವಿಕೋಪದಲ್ಲಿ ಹಾನಿಯಾದ ಸದಸ್ಯರಿಗೆ ವಿಶೇಷವಾಗಿ ಪ್ರತ್ಯೇಕ ಮೊತ್ತವನ್ನು ಸಹಕಾರಿಯಿಂದ ಪಾವತಿಸಲು ಆಡಳಿತ ಮಂಡಲಿ ಹಾಗೂ ವಾರ್ಷಿಕ ಸಾಮಾನ್ಯ ಸಭೆಯ ಅನುಮತಿ ಪಡೆದುಕೊಂಡು ನೀಡಬಹುದಾಗಿದೆ

**ಆದೇಶ**

**ಸಂ.ಸ/ಶಾ–113/ಎಮ್‌ವೈಎಸ್–0003/2019–20** **03 ಅಕ್ಟೋಬರ್ 2019**

ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ ಕಲಂ 25(1)(ಸಿ)ರ ಪ್ರಾವದಾನದಂತೆ ಹಾಗೂ ಸದರಿ ಅಧಿನಿಯಮದ ಕಲಂ 25(1)(ಎಫ್)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಟಿ. ಮಹೇಶ್ ಇವರನ್ನು ಶಾರದ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಆಡಳಿತ ಮಂಡಲಿಯ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ. ಸದರಿಯವರು ಈ ದಿನಾಂಕದಿಂದ ಮುಂದಿನ ಮೂರು ವರ್ಷಗಳ ಅವಧಿಯವರೆಗೆ ಸದರಿ ಸಹಕಾರಿಯ ನಿರ್ದೇಶಕರಾಗಿ ಚುನಾಯಿತರಾಗಲು ಅಥವಾ ಮುಂದುವರೆಯಲು ಅನರ್ಹರಾಗಿರುತ್ತಾರೆ.

ಈ ಆದೇಶವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಪರವಾಗಿ ನನ್ನ ಸಹಿ ಮತ್ತು ಮೊಹರಿನೊಂದಿಗೆ ಇಂದು ಅಂದರೆ 03 ಅಕ್ಟೋಬರ್ 2019 ರಂದು ಹೊರಡಿಸಲಾಗಿದೆ.

**ಶ್ರೀ ಟಿ. ಮಹೇಶ್ ಬಿನ್ ತಾಂಡವಮೂರ್ತಿ,**
**#311, 1ನೇ ಹಂತ, ಉರ್ದು ಶಾಲೆ ಎದುರಿಗೆ,**
**ವಿಶ್ವೇಶ್ವರ ನಗರ, ಮೈಸೂರು –570008,**

**ಸಹಿ/–**
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕರು**

# ಉದ್ಘಾಟನಾ ಕಾರ್ಯಕ್ರಮಗಳು



**ಮೈಸೂರು:** ಮೈಸೂರು ಜಿಲ್ಲಾ ಛಾಯಾ ಸ್ನೇಹ ಸೌಹಾರ್ದ ಸಹಕಾರಿ ನಿ., ಮೈಸೂರು ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 12.10.2019 ರಂದು ಶನಿವಾರ ಬೆಳಿಗ್ಗೆ 11.00 ಗಂಟೆಗೆ ಚಿಕ್ಕಮ್ಮಾನಿಕೇತನ ಕಮ್ಯೂನಿಟಿ ಹಾಲ್. ಕುವೆಂಪುನಗರ, ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ನೂತನ ಸಹಕಾರಿಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಹೆಚ್ ಕೃಷ್ಣಾರೆಡ್ಡಿ ಇವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಹೆಚ್.ವಿ. ರಾಜೀವ್‌ರವರು, ಶ್ರೀ ಮಂಜುನಾಥರವರು, ಮತ್ತು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಉಪಸ್ಥಿತರಿದ್ದರು.



**ಮೈಸೂರು:** ದಿನಾಂಕ 05.08.2019 ರಂದು ತುಳುಶಿವಳ್ಳಿ ಮಾಧ್ವಬ್ರಾಹ್ಮಣ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಪೇಜಾವರ ಮಠಾಧೀಶರಾದ ಶ್ರೀ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾಂಗಳವರು ದೀಪ ಬೆಳಗಿಸಿ ಉದ್ಘಾಟಿಸಿದರು.



**ಬೆಂಗಳೂರು:** ಶ್ರೀ ರಂಗನಾಥ ಸ್ವಾಮಿ ಸೌಹಾರ್ದ ಸಹಕಾರಿ ನಿಯಮಿತ, ದೇವನಹಳ್ಳಿ ಸದರಿ ಸಹಕಾರಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು ಉಪಸ್ಥಿತರಿದ್ದರು.



**ಕೋಲಾರ:** ದಿನಾಂಕ 03.10.2019 ರಂದು ಸ್ವರ್ಣ ವಿಲಾಸ್ ಸೌಹಾರ್ದ ಸಹಕಾರಿ ನಿ., ಕೆ.ಜಿ.ಎಫ್ ಇದರ ಬೇತಮಂಗಲ ಶಾಖೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ ಇವರು ಉದ್ಘಾಟಿಸಿದರು.



**ಬೀದರ:** ಆದ್ಯಶ್ರೀ ಪತ್ತಿನ ಸೌಹಾರ್ದ ಸಹಕಾರಿ ನಿ., ಬೀದರ ಸದರಿ ಸಹಕಾರಿಯ ಉದ್ಘಾಟನೆಯನ್ನು ಬೀದರ ಜಿಲ್ಲೆಯ ಸಂಸದರಾದ ಶ್ರೀ ಭಗವಂತ ಖೂಬಾ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ ಇವರು ಸಸಿಗೆ ನೀರು ಹಾಕುವ ಮೂಲಕ ನೇರವೇರಿಸಿದರು.



**ಬೆಂಗಳೂರು:** ಜನನಿಧಿ ಪತ್ತಿನ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಇದರ ಹಾಸನ ಶಾಖೆಯ ಇ–ಸ್ಟ್ಯಾಂಪಿಂಗ್ ಉದ್ಘಾಟನೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಮಂಜಪ್ಪ ಹೆಚ್. ಎಲ್ ಇವರು ನೇರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ನಾಗರಾಜು ಆರ್, ನಿರ್ದೇಶಕರಾದ ಶ್ರೀ ರಮೇಶ್ ಹೆಚ್.ವಿ, ಶ್ರೀ ಜಯಲಕ್ಷ್ಮೀ ಉಪಸ್ಥಿತರಿದ್ದರು.



## ಇ–ಸ್ಟ್ಯಾಂಪಿಂಗ್ ಉದ್ಘಾಟನೆ

**ಉತ್ತರ ಕನ್ನಡ :** ವೀ–ಕೇರ್ ಕ್ರೆಡಿಟ್ ಸೌಹಾರ್ದ ಸಹಕಾರಿಯ 3ನೇ ಶಾಖೆಯನ್ನು ದಾಂಡೇಲಿಯಲ್ಲಿ ಬೆಳಗಾವಿ ಧರ್ಮಪ್ರಾಂತ್ಯದ ಬಿಷಪ್ ಡಾ॥. ಡೆರೆಕ ಫರ್ನಾಂಡಿಸ್ ಇವರು ಉದ್ಘಾಟಿಸಿದರು. ಇ–ಸ್ಟ್ಯಾಂಪಿಂಗ್ ವಿಭಾಗದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರು ನೇರವೇರಿಸಿದರು.

## ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮತ್ತು ಸಾರಸ್ವತ ಲರ್ನಿಂಗ್ ಫೌಂಡೇಶನ್ ವತಿಯಿಂದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮ

### ಧನಾತ್ಮಕ ಚಿಂತನೆಗಳು ವ್ಯಕ್ತಿಯನ್ನು ಸಾಧನೆಯೆಡೆಗೆ ಕೊಂಡೊಯ್ಯುತ್ತದೆ - ಶ್ರೀ ಎಸ್ ಆರ್ ಸತೀಶ್ಚಂದ್ರ

**ಪುತ್ತೂರು:** ಸಾರಸ್ವತ ಲರ್ನಿಂಗ್ ಫೌಂಡೇಶನ್ ಮತ್ತು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ (ರಿ.) ಪುತ್ತೂರು ಇದರ ವತಿಯಿಂದ ಭಾಲಾವಲೀಕರ್ ಗೌಡ ಸಾರಸ್ವತ ಬ್ರಾಹ್ಮಣ ಸಮಾಜ ಸೇವಾ ಸಂಘ ಪುತ್ತೂರು ಇವರ ಸಹಕಾರದೊಂದಿಗೆ ಯುವ ಸಬಲೀಕರಣ ಮತ್ತು ವ್ಯಕ್ತಿತ್ವ ವಿಕಸನ ಯೋಜನೆಯಡಿ ಅಂತರಾಷ್ಟ್ರೀಯ ತರಬೇತುದಾರರಾದ ಶ್ರೀ ಸುಬ್ರಹ್ಮಣ್ಯ ಕುಳೇದು ಇವರಿಂದ 10ನೇ ತರಗತಿ ಮತ್ತು ಮೇಲ್ಪಟ್ಟ ವಿದ್ಯಾರ್ಥಿಗಳಿಗೆ "ಎಕ್ಸಾಮ್ ಸಕ್ಸಸ್ ಟ್ರೈನಿಂಗ್" ಎಂಬ ವಿಷಯದ ಕುರಿತು ತರಬೇತಿ ಕಾರ್ಯಕ್ರಮವು ದಿನಾಂಕ 06–10–2019ರಂದ ತೆಂಕಿಲದ ಚುಂಚಶ್ರೀ ಸಭಾಭವನದಲ್ಲಿ ನಡೆಯಿತು

ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿನ ಶ್ರೀ ಎಸ್ ಆರ್ ಸತೀಶ್ಚಂದ್ರ ನೆರವೇರಿಸಿ ನಾವು ಯಾವುದೇ ನಕಾರಾತ್ಮಕ ವಿಚಾರಗಳ ಗಮನಕೊಡದೆ ಸಕಾರಾತ್ಮಕವಾಗಿಯೇ ಯೋಚಿಸಬೇಕು, ಪ್ರಪಂಚವು ವಿಶಾಲವಾಗಿದೆ ಅವಕಾಶಗಳ ಆಗರವಾದ ಈ ವಿಶಾಲ ಪ್ರಪಂಚದಲ್ಲಿ ದೊಡ್ಡ ಗುರಿಯನ್ನಿಟ್ಟುಕೊಂಡು ಸಾಧನೆಯೆಡೆಗೆ ಅವಿರತವಾಗಿ ಶ್ರಮವಹಿಸಬೇಕು, ಎಲ್ಲಾ ರೀತಿಯ ಸೌಲಭ್ಯಗಳಿರುವ ಈ ಕಾಲದಲ್ಲಿ ನಾವು ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಯಶಸ್ವಿ ವ್ಯಕ್ತಿಗಳಾಗಬೇಕು ಎಂದು ಹೇಳಿದರು. ಸುಮಾರು 100 ಜನ ವಿದ್ಯಾರ್ಥಿಗಳು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯನ್ನು ಪಡೆದುಕೊಂಡರು.

## ಸಾಮಾಜಿಕ ಕಾರ್ಯಕ್ರಮ

**ಕೊಪ್ಪಳ:** ಶ್ರೀ ವಿನಾಯಕ ಮಿತ್ರ ಮಂಡಳಿಯವರು ನಡೆಸಿದ ಐದು ಜೋಡಿ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಗಂಗಾ ಯಮುನಾ ಪತ್ತಿನ ಸೌಹಾರ್ದ ಸಹಕಾರಿ ನಿ., ಕೊಪ್ಪಳ ಸಹಕಾರಿಯ ವತಿಯಿಂದ ಉಚಿತ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು.



**ವಿಜಯಪುರ:** ವರಮಹಾಲಕ್ಷ್ಮಿ ಮಹಿಳಾ ಸೌಹಾರ್ದ ಸಹಕಾರಿಯಿಂದ ದೀಪಾವಳಿ ಹಬ್ಬದ ಮಹಾಲಕ್ಷ್ಮೀ ಪೂಜಾ ಕಾರ್ಯಕ್ರಮ.

## ಉದ್ಘಾಟನಾ ಕಾರ್ಯಕ್ರಮ



ಮೈಸೂರು: ಪ್ರಗತಿ ಸೂರ್ಯ ಸೌಹಾರ್ದ ಕೋ–ಆಪರೇಟಿವ್ ಲಿಮಿಟೆಡ್ ಕೆ. ಆರ್. ನಗರ, ಮೈಸೂರು ಇದರ ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 26–10–2019ರಂದು ಶನಿವಾರ ಬೆಳಿಗ್ಗೆ 12.00 ಗಂಟೆಗೆ ಕೃಷ್ಣರಾಜನಗರ ಟೌನ್‌ನಲ್ಲಿ ಆಯೋಜಿಸಲಾಗಿತ್ತು. ಸದರಿ ಸಹಕಾರಿಯನ್ನು ಮಾಜಿ ಸಚಿವರು ಹಾಗೂ ಹಾಲಿ ಶಾಸಕರಾದ ಶ್ರೀ ಸಾ.ರಾ. ಮಹೇಶ್‌ರವರು ಉದ್ಘಾಟಿಸಿದರು. ಸದರಿ ಕಾರ್ಯಕ್ರಮದಲ್ಲಿ ಕಾನೂನು ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರವರು ಮತ್ತು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್.ಎಸ್ ರವರು ಉಪಸ್ಥಿತರಿದ್ದರು.

## ಸಾಮಾಜಿಕ ಕಳಕಳಿ



**ಗಂಗೊಳ್ಳಿ :** ಶತಮಾನದ ಹೊಸ್ತಿಲಿನಲ್ಲಿರುವ ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯು ಗಂಗೊಳ್ಳಿ ಗ್ರಾಮ ಪಂಚಾಯತ್‌ಗೆ ಅತ್ಯಗತ್ಯವಾದ ಬೀದಿ ದೀಪಗಳನ್ನು ಕೊಡುಗೆಯಾಗಿ ನೀಡಿದ್ದು, ಜೊತೆಗೆ ಸಹಕಾರಿಯ ವತಿಯಿಂದ ಅಳವಡಿಸಲಾದ ದಾರಿದೀಪದ ನಿರ್ವಹಣೆಯ ಜವಾಬ್ದಾರಿಯನ್ನು ಸಹಕಾರಿಯ ನೋಡಿಕೊಳ್ಳಲಿದ್ದು, ಸಹಕಾರಿಯ ಈ ಕಾರ್ಯ ಇತರ ಸಹಕಾರಿಗಳಿಗೆ ಮಾದರಿಯಾಗಿದೆ.

ಗಂಗೊಳ್ಳಿ ಗ್ರಾಮ ಪಂಚಾಯತ್ ಮನವಿಗೆ ಸ್ಪಂದಿಸಿದ ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯು ಗಂಗೊಳ್ಳಿ ಗ್ರಾಮ ಪಂಚಾಯತ್ ಬಳಿಯಿಂದ ರಥಬೀದಿ ತನಕ ಮುಖ್ಯರಸ್ತೆಯ ಸುಮಾರು 20 ವಿದ್ಯುತ್ ಕಂಬಗಳಿಗೆ ಹೊಸ ಎಲ್‌ಇಡಿ ದಾರಿದೀಪಗಳನ್ನು ಅಳವಡಿಸಿದೆ ಮತ್ತು ಸಹಕಾರಿಯ ವತಿಯಿಂದ ಅಳವಡಿಸಲಾಗಿರುವ ದಾರಿದೀಪದ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಈ ಮೂಲಕ ಸಹಕಾರಿಯು ಗಂಗೊಳ್ಳಿ ಗ್ರಾಮ ಪಂಚಾಯತ್‌ನ ಹೊರೆಯನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿರುವುದಲ್ಲದೆ, ಗ್ರಾಮ ಅಭಿವೃದ್ಧಿಗೆ ವಿಶಿಷ್ಟವಾದ ಕೊಡುಗೆಯನ್ನು ನೀಡುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಗಂಗೊಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯ ಸಮೀಪ 13.09.2019ರ ಶುಕ್ರವಾರ ಸಂಜೆ ನಡೆದ ಸರಳ ಸಮಾರಂಭದಲ್ಲಿ ಗಂಗೊಳ್ಳಿ ಟೌನ್ ಸೌಹಾರ್ದ ಸಹಕಾರಿಯ ವತಿಯಿಂದ ಅಳವಡಿಸಲಾದ ಹೊಸ ಬೀದಿ ದೀಪಗಳನ್ನು ಸಹಕಾರಿಯ ಅಧ್ಯಕ್ಷ ಎಚ್.ಗಣೇಶ ಕಾಮತ್ ಉದ್ಘಾಟಿಸಿ, ಹೊಸ ದಾರಿದೀಪಗಳನ್ನು ಗ್ರಾಮ ಪಂಚಾಯತ್ ಅಧ್ಯಕ್ಷ ಶ್ರೀನಿವಾಸ ಖಾರ್ವಿ ಮತ್ತು ಕಾರ್ಯದರ್ಶಿ ಬಿ.ಮಾಧವ ಅವರಿಗೆ ಹಸ್ತಾಂತರಿಸಿದರು.

ಸಹಕಾರಿಯ ಉಪಾಧ್ಯಕ್ಷ ಜಿ.ವಿಶ್ವನಾಥ ಆಚಾರ್ಯ, ನಿರ್ದೇಶಕರಾದ ಜಿ.ವೆಂಕಟೇಶ ನಾಯಕ್, ಜಿ.ವೆಂಕಟೇಶ ಶೆಣೈ, ಬಿ.ರಾಘವೇಂದ್ರ ಪೈ, ನಾರಾಯಣ ಪೂಜಾರಿ, ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕ ಗಣೇಶ ನಾಯಕ್, ಗ್ರಾಮ ಪಂಚಾಯತ್ ಸದಸ್ಯ ನಾಗರಾಜ ಖಾರ್ವಿ, ಬಿ.ಲಕ್ಷ್ಮೀಕಾಂತ ಮಡಿವಾಳ ಮತ್ತಿತರರು ಉಪಸ್ಥಿತರಿದ್ದರು. ಗ್ರಾಪಂ ಸಿಬ್ಬಂದಿ ನಾರಾಯಣ ಶ್ಯಾನುಭಾಗ್ ಸ್ವಾಗತಿಸಿ ವಂದಿಸಿದರು.

---



**ಬೀದರ:** ಮಹಾತ್ಮ ಗಾಂಧೀಜಿಯವರ 150ನೇ ಜನ್ಮದಿನಾಚರಣೆ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದಲ್ಲಿ ಗಾಂಧಿಜಯಂತಿ ಆಚರಣೆ ಬೀದರ್ ಭಾರತದ ಹೆಮ್ಮೆಯ ಪುತ್ರ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ 150 ಜನ್ಮದಿನಾಚರಣೆಯನ್ನು ಬೀದರ್ ನಗರದ ಸೌಹಾರ್ದ ಸಹಕಾರಿಗಳ ಜಿಲ್ಲಾ ಒಕ್ಕೂಟದ ಕಚೇರಿಯಲ್ಲಿ ಆಚರಿಸಲಾಯಿತು. ಗಾಂಧೀಜಿಯವರ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ್ ಜಾಂತಿಕರ ಇವರು ನೇರವೇರಿಸಿದರು. ನಂತರ ಮಾತನಾಡಿದ ಅವರು ಗಾಂಧೀಜಿಯವರ ತತ್ವ ಆದರ್ಶಗಳು ವಿಶ್ವಕ್ಕೆ ಮಾದರಿಯಾಗಿ ಶಾಂತಿ ಸಾರಿದ ಮಹಪುರುಷ ಎಂದು ನುಡಿದರು ಅವರ ತತ್ವ ಆದರ್ಶಗಳನ್ನು ಯುವ ಪೀಳಿಗೆ ಅಳವಡಿಸಿಕೊಳ್ಳುವ ಮೂಲಕ ಆದರ್ಶ ವ್ಯಕ್ತಿಗಳಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಒಕ್ಕೂಟ ಸಹಕಾರಿಯ ನಿರ್ದೇಶಕರಾದ ಶ್ರೀ ಜಗನ್ನಾಥ ಕರಂಜೆ, ಸಹಕಾರಿಯ ಸಿಇಓ ಅಮೃತ್ ಹೊಸಮನಿ, ವೀರೇಶ್, ರವಿಕುಮಾರ್ ಉಪಸ್ಥಿತರಿದ್ದರು.



**ಬೆಳಗಾವಿ:** ಓಂ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿ., ಹುಕ್ಕೇರಿ ಸಹಕಾರಿಯಲ್ಲಿ 150ನೇ ಮಹಾತ್ಮ ಗಾಂಧಿ ಜಯಂತಿ ಹಾಗೂ 115ನೇ ಲಾಲ್ ಬಹದ್ದೂರ ಶಾಸ್ತ್ರಿ ಜನ್ಮ ದಿನಾಚರಣೆ ನಿಮಿತ್ತ ಸಿ.ಇ.ಎಸ್ ಫ್ರೌಢ ಶಾಲೆಯಲ್ಲಿ ಸಹಕಾರಿಯ ವತಿಯಿಂದ ಕಳೆದ ಸಾಲಿನಲ್ಲಿ 8 ಹಾಗೂ 9ನೇ ತರಗತಿಯಲ್ಲಿ ಶೇ. 80ಕ್ಕಿಂತ ಹೆಚ್ಚಿನ ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯನ್ನು ಸುಮಾರು 50 ವಿದ್ಯಾರ್ಥಿಗಳಿಗೆ ಸಹಕಾರಿಯ ಅಧ್ಯಕ್ಷರಾದ ಶ್ರೀ ರಾಮಾ ಶಂಕರ ಶಿಂಧೆ ಮತ್ತು ಆಡಳಿತ ಮಂಡಲಿಯ ಸದಸ್ಯರು ವಿತರಿಸಿದರು. ಸದರಿ ಕಾರ್ಯಕ್ರಮದಲ್ಲಿ ನಮ್ಮ ಗ್ರಾಮೀಣ ಭಾಗದಲ್ಲಿಯ ಆರ್ಥಿಕವಾಗಿ ಹಿಂದುಳಿದ ಸ್ಪರ್ಧಾತ್ಮಕ ವಿದ್ಯಾರ್ಥಿಗಳ ಮುಂದಿನ ವ್ಯಾಸಂಗದ ಖರ್ಚುನ್ನು ಸಹಕಾರಿಯಿಂದ ಭರಿಸುವ ಮಹತ್ತರ ವಿಚಾರವನ್ನು ಸಹ ಸದರಿ ಕಾರ್ಯಕ್ರಮದಲ್ಲಿ ಪ್ರಕಟಿಸಲಾಯಿತು.

## ರಕ್ತದಾನ ಶಿಬಿರ




**ಬೆಂಗಳೂರು;** ದಿನಾಂಕ 19.01.2019 ರಂದು ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿ., ಯಲಹಂಕ ಉಪನಗರ, ಇದರ ಶ್ರೀ ಶ್ರೀ ಶ್ರೀ ಮಹಾಯೋಗಿ ವೇಮನರ 67ನೇ ಜಯಂತ್ಯೋತ್ಸವದ ಪ್ರಯುಕ್ತ ಸಹಕಾರಿಯಲ್ಲಿ ರಕ್ತದಾನ ಶಿಬಿರವನ್ನು ಏರ್ಪಡಿಸಲಾಯಿತು. ಈ ಮಹತ್ವದ ರಕ್ತದಾನ ಶಿಬಿರಕ್ಕೆ ಒಟ್ಟು 408 ರಕ್ತದಾನಿಗಳು ರಕ್ತದಾನ ಮಾಡಿರುತ್ತಾರೆ. ಈ ಮಹತ್ವದ ಕಾರ್ಯಕ್ರಮವೂ ಬಹಳ ಯಶಸ್ವಿಯಾಗಿ ಜರುಗಿದ್ದರಿಂದ ಆಕ್ಟೋಬರ್ 01 ರಂದು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ಇವರು ಉತ್ತಮ ರಕ್ತದಾನ ಶಿಬಿರವನ್ನು ಆಯೋಜಿಸಿರುವವರನ್ನು ಗುರುತಿಸಿ ಸನ್ಮಾನಿಸಿರುತ್ತಾರೆ. ಸದರಿ ಸಹಕಾರಿಯ ರಾಜ್ಯದಲ್ಲಿಯೇ 10ನೇ ಸ್ಥಾನ ಪಡೆದಿರುತ್ತದೆ.

## ಸೌಹಾರ್ದ ಸಹಕಾರಿಗಳ ಒಕ್ಕೂಟದ ಪ್ರವರ್ತಕರ ಸಭೆ



**ಹುಬ್ಬಳ್ಳಿ:** ದಿನಾಂಕ 17.10.2019 ರಂದು ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿ ನಿ., ನವನಗರ, ಹುಬ್ಬಳ್ಳಿ ಸಹಕಾರಿಯಲ್ಲಿ ನಡೆದ ಉದ್ದೇಶಿತ ಧಾರವಾಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಸಭೆಯಲ್ಲಿ ಮಾನ್ಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣವರ ಅಧ್ಯಕ್ಷತೆಯಲ್ಲಿ ಮುಖ್ಯ ಪ್ರವರ್ತಕರನ್ನಾಗಿ ಮಲ್ಲಿಕಾರ್ಜುನ ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಹೊರಕೇರಿ ಇವರನ್ನು ಆಯ್ಕೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಸಹಕಾರ ಭಾರತಿ ಕುರಿತು ಮಾನ್ಯ ಶ್ರೀ ಸತೀಶ್ಚಂದ್ರ ರವರು ಮಾತನಾಡಿದರು. ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಚಂದ್ರಕಾಂತ ಪಡಚಣ್ಣವರ ಇವರು ಸಹಕಾರ ಭಾರತಿಗೆ ವೈಯಕ್ತಿಕವಾಗಿ ರೂ. 5,000/–ಗಳ ಚೆಕ್ ನೀಡಿದರು.



**ಉತ್ತರ ಕನ್ನಡ:** ದಿನಾಂಕ 21.10.2019ರಂದು ಉದ್ದೇಶಿತ ಉತ್ತರಕನ್ನಡ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿಯಮಿತ ಉತ್ತರಕನ್ನಡ. ಇದರ ಶೇರು ಸಂಗ್ರಹಣೆ ಮತ್ತು ನೋಂದಣಿ ಕೆಲಸ ಕಾರ್ಯಗಳ ಕುರಿತು ಪ್ರವರ್ತಕರ ಸಭೆಯನ್ನು ಸ್ಟೂಡ್‌ವೆಸ್ ಮಹಿಳಾ ಸೌಹಾರ್ದ ಸಹಕಾರಿ ನಿ., ಶಿರಸಿಯಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಸರಸ್ವತಿ ಎನ್ ರವಿ ಇವರ ಮಾರ್ಗದರ್ಶನದಲ್ಲಿ ಮತ್ತು ಮುಖ್ಯ ಪ್ರವರ್ತಕರ ಅಧ್ಯಕ್ಷತೆಯಲ್ಲಿ ಜರುಗಿತು.

## ಅಧ್ಯಕ್ಷರು – ಉಪಾಧ್ಯಕ್ಷರ ಆಯ್ಕೆ

### ಕುಮಟಾ ಅಡಿಕೆ ಮಾರಾಟ ಸೌಹಾರ್ದ ಸಹಕಾರಿ ನಿ. ಕುಮಟಾ



ಶ್ರೀ ಮಂಜುನಾಥ ರಾಮಕೃಷ್ಣ ಹೆಗಡೆ
ಅಧ್ಯಕ್ಷರು



ಶ್ರೀ ಸುಬ್ರಾಯ ನಾರಾಯಣ ಭಟ್ಟ
ಉಪಾಧ್ಯಕ್ಷರು

### ನಾಯಕ್ ಸೌಹಾರ್ದ ಸಹಕಾರಿ ನಿ., ಸಾಗರ



ಶ್ರೀ ಮಂಜುನಾಥ. ಜಿ. ಶೆಟ್ಟಿ
ಅಧ್ಯಕ್ಷರು



ತಮ್ಮಣ್ಣ. ಬಿ
ಉಪಾಧ್ಯಕ್ಷರು

# ಸಹಕಾರ ಸಪ್ತಾಹದ ಆಚರಣೆ – ಧ್ಯೇಯ ಆಶಯಗಳ ಔಚಿತ್ಯ ಸಹಕಾರಿ ಚಳುವಳಿಯ ಬಲಸಂವರ್ಧನೆ ಹಾಗೂ ದೇಶದ ಆರ್ಥಿಕ ಸುಸ್ಥಿರ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ.

– ಶರಣಗೌಡ ಜಿ. ಪಾಟೀಲ

ವಿಶ್ವದ ಸಹಕಾರ ಚಳುವಳಿಗೆ 175 ವರ್ಷಗಳ ಇತಿಹಾಸ. ನಮ್ಮ ದೇಶದ ಸಹಕಾರ ಚಳುವಳಿಗೆ 105 ವರ್ಷಗಳ ಇತಿಹಾಸ. ಕಳೆದ 66 ವರ್ಷಗಳಿಂದ ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯವರ ಮಾರ್ಗದರ್ಶದಲ್ಲಿ ಸಹಕಾರ ಸಪ್ತಾಹವನ್ನು ಆಚರಿಸುತ್ತ, ಸಾರ್ವಜನಿಕರಿಗೆ, ಸಹಕಾರಿಗಳಿಗೆ ಮತ್ತು ಸರಕಾರಗಳಿಗೆ ಸಹಕಾರ ಕ್ಷೇತ್ರದ ಸಾಧನೆ, ಪ್ರಗತಿ, ಸವಾಲುಗಳು ಹಾಗೂ ಅವಕಾಶಗಳ ಬಗ್ಗೆ ತಿಳಿಯಪಡಿಸುವ ಕಾರ್ಯವನ್ನು ನಿರ್ವಹಿಸುತ್ತ ಬಂದಿದೆ. ಸಹಕಾರ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಸಾಮಾಜಿಕ ಹಾಗೂ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಪ್ರಚುರಗೊಳಿಸುವುದು ಈ ಸಪ್ತಾಹದ ಆಚರಣೆಯ ಮಹತ್ವದ ಧ್ಯೇಯ.

ಕಳೆದ ಹತ್ತು ವರ್ಷಗಳಲ್ಲಿ ಈ ಸಪ್ತಾಹ ಆಚರಣೆಯಲ್ಲಿ ಸಮಗ್ರ ಸಹಕಾರ ಕ್ಷೇತ್ರಕ್ಕೆ ಅನ್ವಯಿಸುವಂತೆ ಒಂದು ಧ್ಯೇಯವಾಕ್ಯವನ್ನಾಗಿ ಘೋಷಿಷಿ ತನ್ಮೂಲಕ ಸಹಕಾರಿ ಚಳುವಳಿಯ ಬಲಸಂವರ್ಧನೆ ಹಾಗೂ ದೇಶದ ಆರ್ಥಿಕ ಸುಸ್ಥಿರ ಅಭಿವೃದ್ಧಿಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಎಷ್ಟು ಮಹತ್ವವನ್ನು ಪಡೆಯುತ್ತದೆ ಎಂದು ವಿಶ್ಲೇಷಿಸಬಹುದಾಗಿದೆ. .

2010 – ಪ್ರಗತಿಪರ ರೈತ ಪ್ರಗತಿಪರ ದೇಶ **progressive farmer and prosperous Nation**

2011 – ಸಹಕಾರಿ ಕ್ಷೇತ್ರದ ಮೂಲಕ ಸಮಗ್ರ ಅಭಿವೃದ್ಧಿ **inclusive Development through cooperatives**

2012 – ಸಹಕಾರಿ ಉದ್ದಿಮೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಬಲ್ಲವು **Cooperative enterprises build better Nation.**

2013 – ಸಹಕಾರಿ ಕ್ಷೇತ್ರದ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಯ ಪ್ರಕ್ರೀಯೆಗಳು. **Socia economic resurgence through cooperatives in the changing time.**

2014 – ಆರ್ಥಿಕ ಸೇರ್ಪಡೆ ಹಾರು ಸುಸ್ಥಿರ ಅಭಿವೃದ್ಧಿ ಸಾಧನೆಗಾಗು ಸಹಕಾರಿ ಸಂಸ್ಥೆಗಳು ಮಾದರಿ **Cooperative model for sustainable and inclusive growth**

2015 – ಸಹಕಾರ ಕ್ಷೇತ್ರ ಮೂಲಕ ಮೇಕ ಇನ್ ಇಂಡಿಯ **Make in india through cooperatives**

2016 – ಸುಸ್ಥಿರ ಅಭಿವೃದ್ಧಿ ಹಾಗೂ ಬೆಳವಣಿಗೆಯಲ್ಲ ಸಹಕಾರ ಸಂಸ್ಥೆಗಳ ಪಾತ್ರ **Role of cooperatives in sustainable Development and growth**

2017 – ಸಹಕಾರ ಸಂಸ್ಥೆಗಳನ್ನು ಗಣಕೀಕರಣ ಹಾಗೂ ಡಿಜಿಟಲೈಜೇಶನ್ ಮಾಡುವ ಮೂಲಕ ಸಬಲೀಕರಣ ಮಾಡುವುದು. **Empowering people through Digitalization of cooperatives**

2018 – ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಆಡಳತ ಹಾಗೂ ಉತ್ತಮ ಬೆಳವಣಿಗೆಯ ಮೂಲಕ ಅಭಿವೃದ್ಧಿ ಗ್ರಾಮೀಣ ಅಭಿವೃದ್ಧಿ. **Inclusive Growth and good governance for rural economy**

2019 – ನವ ಭಾರತ ನಿರ್ಮಾಣದಲ್ಲಿ ಸಹಕಾರಿ ಸಂಸ್ಥೆಗಳ ಪಾತ್ರ **Role of Cooperatives in New India**

ಸಹಕಾರ ಸಪ್ತಾಹಗಳ ಆಚರಣೆಯಿಂದಾಗಿ ಸಹಕಾರ ಚಳುವಳಿ ತನ್ನ ಬಲಸಂವರ್ಧನೆಯತ್ತ ಸಾಗಿದೆ. ದೇಶದ ಹಾಗೂ ವಿಶ್ವದ ಸುಸ್ಥಿರ ಅಭಿವೃದ್ಧಿಗೆ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ ಎಂಬುದನ್ನು ಸಹಕಾರ ಚಳುವಳಿಯ ಸಾಧನೆ ಹಾಗೂ ಪ್ರಗತಿಯ ಅವಲೋಕನೆಯಿಂದ ತಿಳಿಯಬಹುದಾಗಿದೆ.

### –: ಸಹಕಾರ ಚಳುವಳಿ ಹುಟ್ಟು :–

ಆರ್ಥಿಕ ಸ್ವಾತಂತ್ರಕ್ಕೆ ಸಹಕಾರವೇ ಹೆಬ್ಬಾಗಿಲು ಎಂದರು ಮಹಾತ್ಮ ಗಾಂಧೀಜಿ. ಸಹಕಾರ ಬಡವರ ಶೋಷಿತ ವರ್ಗದವರ ಆರ್ಥಿಕ ಸಂಘಟನೆಯಾಗಿ ಸಹಕಾರ ಚಳುವಳಿಯಾಗಿ ಬೆಳೆದು ಬಂದಿರುವುದಕ್ಕೆ ರೋಚಕ ಇತಿಹಾಸವಿದೆ. 18ನೇ ಶತಮಾನದ ಕೊನೆಯ ಭಾಗದಲ್ಲಿ ಇಂಗ್ಲಾಂಡನಲ್ಲಿ ಔದ್ಯೋಗಿಕ ಕ್ರಾಂತಿಯಾಗಿ ನಿರುದ್ಯೋಗ ಹಾಗೂ ಬಡತನ ಹೆಚ್ಚಾಯಿತು. ಈ ಸಂದರ್ಭದಲ್ಲಿ ರಾಬರ್ಟ ಓವನ್ ಎಂಬ ಸಮಾಜ ಸುಧಾರಕನ ಪ್ರಯತ್ನದಿಂದಾಗಿ 1844 ರಲ್ಲಿ ಇಂಗ್ಲಾಂಡನ ರಾಕಡೇಲ್ ಎಂಬಲ್ಲಿ 28 ಜನ ಯುವ ನೇಕಾರರು ವೇಳೆಗೆ ಈ ಸಹಕಾರ ಸಂಘ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಳೆದು ವಿಶ್ವದ ಸಹಕಾರ ಚಳುವಳಿಯ ಬೆಳವಣಿಗೆಗೆ ನಾಂದಿಯಾಯಿತು. ಇವರುಗಳ ಅನುಭವವೇ ಸಹಕಾರ ತತ್ವಗಳಾಗಿವೆ. ವಿಶ್ವದ ಪ್ರತಿಯೊಂದು ಸಹಕಾರ ಸಂಘವು ಈ ತತ್ವಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿವೆ. ನಂತರ 1962ರಲ್ಲಿ ಜರ್ಮನಿಯಲ್ಲಿ ರೈಫಿಜನ್ ಮಾದರಿಯ ಕೃಷಿ ಪತ್ತಿನ ಸಹಕಾರ ಸಂಘಗಳು, ಯುರೋಪ್‌ನಲ್ಲಿ ಕೃಷಿ, ಗ್ರಾಹಕ ಹಾಗೂ ಕ್ರೆಡಿಟ್ ಮತ್ತು ಬ್ಯಾಂಕಿಂಗ್ ಸಹಕಾರ ಸಂಘಗಳು, ಅಮೇರಿಕಾದಲ್ಲಿ ಪ್ರಾರಂಭವಾದವು. ಸ್ವಿಜರ್ಲೆಂಡನಲ್ಲಿ ಹಾಗೂ ಹಾಲಂಡಗಳಲ್ಲಿ ಹೈನುಗಾರಿಕಾ ಸಹಕಾರ ಸಂಘಗಳು ಹಾಗೂ ಆಫ್ರಿಕಾದಲ್ಲಿ ಕೃಷಿ, ಗ್ರಾಹಕ, ಗೃಹನಿರ್ಮಾಣ ಹಾಗೂ ಕ್ರೆಡಿಟ್ ವಿಶ್ವದ ವಿವಿಧ ದೇಶಗಳಲ್ಲಿ ವಿವಿಧ ರೀತಿಯ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ.

**–: ವಿಶ್ವದಲ್ಲಿ ಸಹಕಾರ ಚಳುವಳಿ :–**

ವಿಶ್ವದಲ್ಲಿ 30 ಲಕ್ಷ ವಿವಿಧ ರೀತಿಯ ಸಹಕಾರ ಸಂಸ್ಥೆಗಳಿವೆ. ವಿಶ್ವದ ಜನಸಂಖ್ಯೆಯ ಶೇಕಡಾ 12% ಜನರು ಸದಸ್ಯತ್ವವನ್ನು ಹೊಂದಿದ್ದಾರೆ. ವಿಶ್ವ ಅತಿ ದೊಡ್ಡ 300 ಸಹಕಾರ ಸಂಸ್ಥೆಗಳು 2.1 ಟ್ರಿಲಿಯನ್ ವ್ಯವಹಾರ ನಡೆಸುತ್ತಿವೆ ಎಂಬುದು 2017ರ ವರ್ಡ ಕೋ–ಆಪರೇಟಿವ್ ಮಾನಿಟರ್ ವರದಿಯಾಗಿದೆ. ವಿಶ್ವದಲ್ಲಿ 28 ಕೋಟಿ ಜನರಿಗೆ ಉದ್ಯೋಗವನ್ನು ನೀಡಿದೆ. ಶೇಕಡಾ 10% ಜನ–ರಿಗೆ ಉದ್ಯೋಗ ನೀಡಿದೆ ಈ ಕ್ಷೇತ್ರ ಉತ್ತಮ ಆರ್ಥಿಕ ಸಂಘಟನೆಗಳಾಗಿ ಜನರ ಜೀವನ ಪದ್ಧತಿಯಾಗಿ ಈ ಕ್ಷೇತ್ರ ಕಾರ್ಯನಿರ್ವಹಿಸುತ್ತಿರುವ ಈ ಕ್ಷೇತ್ರದ ಸಾಧನೆಗಳನ್ನು ಗಮನಿಸಿದ ವಿಶ್ವ ಸಂಸ್ಥೆ ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬುದಾಗಿ ಹೇಳಿ 2012ನ್ನು ಸಹಕಾರಿ ವರ್ಷವನ್ನಾಗಿ ಆಚರಿಸಲು ಕರೆ ನೀಡಿತು. ಪರಿಣಾಮವಾಗಿ ಪ್ರಪಂಚದಲ್ಲಿ ಸಹಕಾರ ಕ್ಷೇತ್ರ ಇನ್ನಷ್ಟು ಬಲವಾಗಿ ಬೆಳೆಯಲು ಸಾಧ್ಯವಾಯಿತು. ಈ ಕ್ಷೇತ್ರದ ಸುಸ್ಥಿರತೆಯನ್ನು ಗಮನಿಸಿದ ಅಂತರ ರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆ "ಸಹಕಾರ ಸಂಸ್ಥೆಗಳು ದೇಶದ ಕಷ್ಟ ಕಾಲದಲ್ಲೂ ಆರ್ಥಿಕ ಸಂಕಷ್ಟದಲ್ಲೂ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು" ಎಂಬುದಾಗಿ ಹೇಳಿತು. ಇದರ ಜೊತೆಗೆ 2010 ರಿಂದ 2020ನ್ನು ವಿಶ್ವದ ಸಹಕಾರಿ ದಶಕವನ್ನಾಗಿ ಆಚರಿಸುವ ಮೂಲಕ ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಕರೆ ನೀಡಿತು. ಪ್ರತಿ ವರ್ಷ ಜುಲೈ ಒಂದನೇ ಶನಿವಾರವನ್ನು ಅಂತರರಾಷ್ಟ್ರೀಯ ಸಹಕಾರ ದಿನವನ್ನಾಗಿ ಆಚರಿಸಲಾಗುತ್ತದೆ.

**ಭಾರತದಲ್ಲಿ ಸಹಕಾರ ಚಳುವಳಿ, ಹುಟ್ಟು ಸಾಧನೆ ಹಾಗೂ ಅವಕಾಶಗಳು.**

ಭಾರತ ಕೃಷಿ ಪ್ರಧಾನ ದೇಶ. ಶೇಕಡಾ 75% ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. 19ನೇ ಶತಮಾನದ ಅಂತ್ಯದಲ್ಲಿ ರೈತರ ಬಡತನ ಹಾಗು ಸಂಕಷ್ಟಗಳ ಬಹಳವಾಗಿದ್ದುದರ ಪರಿಣಾಮವಾಗಿ ಅದರ ನಿವಾರಣೆಗಾಗಿ ಅಂದಿನ ಬ್ರಿಟೀಷ ಸರಕಾರ ಶ್ರೀ ಫ್ರೇಡ್ರಿಕ್ ನಿಕೋಲ್ಸನ್ ಎಂಬವರನ್ನು ಜರ್ಮನಿ ಕಳುಹಿಸಿ ಅಲ್ಲಿಯ ಸಹಕಾರ ಕ್ಷೇತ್ರವನ್ನು ಅಧ್ಯಯನ ಮಾಡಿ ಭಾರತ ದೇಶದಲ್ಲಿ ಸಹಕಾರ ಚಳುವಳಿಯ ಸ್ವರೂಪ ಹೇಗಿರಬೇಕು ಎಂಬ ಬಗ್ಗೆ ವರದಿ ನೀಡಲು ಸೂಚಿಸಿದರು.

ಫ್ರೇಡ್ರಿಕ್ ನಿಕೋಲ್ಸನ್‌ರವರ ವರದಿ ಆಧಾರದ ಮೇಲೆ 1904 ಜನವರಿ 25ರಂದು ಇಂಡಿಯನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟೀಸ್ ಕಾಯ್ದೆನ್ನು ಜಾರಿಗೊಳಿಸಲಾಯಿತು.

ಭಾರತದಲ್ಲಿ 2004ರಲ್ಲಿ ಸಹಕಾರ ಕಾಯ್ದೆಯನ್ನು ಜಾರಿಮಾಡುವುದರ ಮೂಲಕ ಸಹಕಾರ ಚಳುವಳಿ ಪ್ರಾರಂಭವಾಯಿತು. ಈ ಕಾಯ್ದೆಯನ್ನು 1912 ರಲ್ಲಿ ಮತ್ತೆ ತಿದ್ದುಪಡಿ ಮಾಡುವ ಮೂಲಕ ವಿವಿಧ ರೀತಿಯ ಸಹಕಾರ ಸಂಘಗಳು ಪ್ರಾರಂಭವಾಗಲಿಕ್ಕೆ ಅವಕಾಶವಾಯಿತು. 1920ರಲ್ಲಿ ಸಹಕಾರ ರಾಜ್ಯ ವಿಷಯವಾಯಿತು. ಪ್ರತಿಯೊಂದು ರಾಜ್ಯವೂ ತನ್ನದೇ ಆದ ಸಹಕಾರ ಕಾನೂನು ಹಾಗೂ ಅದಕ್ಕೆ ಸಂಬಂಧಿಸಿದ ನಿಯಮಗಳನ್ನು ರಚಿಸಿಕೊಳ್ಳಲು ಅವಕಾಶವಾಗಿದೆ..

ಸಹಕಾರ ಚಳುವಳಿಯು ದೇಶದ ಸಾಮಾನ್ಯ ಜನರ ವಿಶೇಷವಾಗಿ ರೈತರ ಆರ್ಥಿಕವಾಗಿ ಹಿಂದುಳಿದವರ ಅಭಿವೃದ್ಧಿಯನ್ನು ಸಾಧಿಸುವಲ್ಲಿ ನಿರ್ವಹಿಸಿದ ಪಾತ್ರದ ಬಗ್ಗೆ ಕೇಂದ್ರ ಸರಕಾರ ಆಗಿಂದ್ದಾಗ್ಗೆ ಹಲವು ಸಮಿತಿಗಳನ್ನು ರಚಿಸಿ ಈ ಕ್ಷೇತ್ರದ ಸಾಧನೆಯನ್ನು ಪರಿಶೀಲಿಸಿದೆ. ಅದರಲ್ಲಿ 1952ರಲ್ಲಿ ರಿಸರ್ವ ಬ್ಯಾಂಕನ ಡೆಪ್ಯೂಟಿ ಗವರ್ನರ ಶ್ರೀ ಎ.ಡಿ.ಗೋರವಾಲಾ ರವರ ನೇತೃತ್ವದಲ್ಲಿ ನೇಮಕವಾದ ಸಮಿತಿಯ ವರದಿ "ಭಾರತದಲ್ಲಿ ಸಹಕಾರ ಚಳುವಳಿ ವಿಫಲವಾಗಿದೆ ಆದರೆ ಅದು ಯಶಸ್ಸು ಆಗಲೇಬೇಕು ಎಂದು ತಿಳಿಸಿದರು. ನಂತರದಲ್ಲಿ ಭಾಷಾವಾರು ಪ್ರಾಂತಗಳ ವಿಂಗಡಣೆ ನಂತರ ಪ್ರತಿಯೊಂದು ರಾಜ್ಯವು ತನ್ನದೇ ಆದ ಸಹಕಾರ ಕಾಯ್ದೆ ಹಾಗೂ ನಿಯಮಗಳ ರಚನೆ ಸರಕಾರದ ಪಾಲುಗಾರಿಕೆ ಆದ್ಯತೆ ಪಂಚ ವಾರ್ಷಿಕ ಯೋಜನೆಗಳಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ಪರಿಣಾಮವಾಗಿ ದೇಶದ ಹಸಿರು ಕ್ರಾಂತಿ ಶ್ವೇತ ಕ್ರಾಂತಿಗಳ ಪರಿಣಾಮವಾಗಿ ದೇಶದ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗಿದೆ. ನಂತರ ಮತ್ತೆ 1969 ರಲ್ಲಿ ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ರಿಸರ್ವ ಬ್ಯಾಂಕಿನ ಹಿರಿಯ ಡಾ. ವೆಂಕಪ್ಪಯ್ಯ ಸಮಿತಿ ರಚನೆ ಅವರ ಶಿಫಾರಸ್ಸುಗಳ ಅನುಷ್ಠಾನ ಅನೇಕ ಸಮಿತಿಗಳು ಅವುಗಳ ಸಿಫಾರಸ್ಸುಗಳು ಸಹಕಾರ ಚಳುವಳಿಯ ಬೆಳವಣಿಗೆ ಇವೆಲ್ಲವುಗಳನ್ನು ಸಾರ್ವಜನಿಕರಿಗೆ ಸಹಕಾರಿಗಳಿಗೆ ತಿಳಿಯ ಪಡಿಸುವುದು ನಂತರ ದೇಶದ ಹಾಗೂ ವಿಶ್ವದ ವಿವಿಧ ಸಹಕಾರಿ ಸಂಸ್ಥೆಗಳ ಮೂಲಕ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನೆಯ ವಿಷಯಗಳನ್ನು ಸಪ್ತಾಹದ ಸಂದರ್ಭಗಳಲ್ಲಿ ಪ್ರಚುರ ಪಡಿಸುವುದು ಈ ಸಹಕಾರ ಸಪ್ತಾಹಗಳ ಆಚರಣೆಯ ಮೂಲ ಉದ್ದೇಶವಾಗಿದೆ.

1992ರಲ್ಲಿ ಬಹು ರಾಜ್ಯಗಳ ಸಹಕಾರ ಕಾಯ್ದೆಯನ್ನು ಜಾರಿಗೊಳಿಸಿ ಅಂತರರಾಜ್ಯಮಟ್ಟದ, ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶವಾಗಿದೆ.

2012ರಲ್ಲಿ ಭಾರತದ ಸಂವಿಧಾನಕ್ಕೆ 97ನೇ ತಿದ್ದುಪಡಿಯನ್ನು ಮಾಡಿ ಸಹಕಾರ ಸಂಸ್ಥೆಗಳನ್ನು ಪ್ರಾರಂಭಿಸಲು ಸಾಂವಿಧಾನಿಕ ಹಕ್ಕನ್ನು ನೀಡುವುದರ ಜೊತೆಗೆ ಹಲವಾರು ವ್ಯವಹಾರಿಕ ಸ್ವಾತಂತ್ರವನ್ನು ಮತ್ತು ಜವಾಬ್ದಾರಿಯನ್ನು ನೀಡಲಾಗಿದೆ

ಈ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಒಂದು ಧ್ಯೇಯವನ್ನು ಪ್ರಧಾನವಾಗಿಟ್ಟುಕೊಂಡು ಸಪ್ತಾಹದ 7 ದಿನಗಳಲ್ಲಿ ಸಹಕಾರ ಕ್ಷೇತ್ರದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ಸಂಕೀರ್ಣಗಳು ಸಭೆ ಸಮಾರಂಭಗಳು, ಯಶೋಗಾಥೆಗಳು ಸಹಕಾರಿ ಕ್ಷೇತ್ರದ ಹಿರಿಯರ ಸಾಧಕರ ಅವರುಗಳ ಆಶಯವನ್ನು ಜನಸಾಮಾನ್ಯರಿಗೆ ಪ್ರಚುರ ಪಡಿಸುವುದು ಅವರನ್ನು ಮತ್ತು ವಿಶೇಷವಾಗಿ ಯುವಕರನ್ನು ಸಹಕಾರ ಕ್ಷೇತ್ರಕ್ಕೆ ಹೆಚ್ಚು ಆಕರ್ಷಿತರನ್ನಾಗಿಸುವುದು ಈ ಸಹಕಾರ ಸಪ್ತಾಹಗಳ ಮುಖ್ಯ ಉದ್ದೇಶ.

**ದೇಶದ ಸಹಕಾರ ಚಳುವಳಿಯ ಸಾಧನೆ.**

ಭಾರತದಲ್ಲಿ 8,33,256 ವಿವಿಧ ರೀತಿಯ ಸಹಕಾರ ಸಂಸ್ಥೆಗಳಿವೆ. ಅದರಲ್ಲಿ 1255 ಮಲ್ಟಿಸ್ಟೇಟ್ ಸಹಕಾರ ಸಂಸ್ಥೆಗಳಿವೆ. 30 ಕೋಟಿ ಸದಸ್ಯರಿದ್ದಾರೆ. 3.83.285 ಮಿಲಿಯನ್ ಪಾಲು ಬಂಡವಾಳವಿದೆ. 72.95.766 ಮಿಲಿಯನ್ ದುಡಿಯುವ ಬಂಡವಾಳವಿದೆ. ಸಹಕಾರ ಕ್ಷೇತ್ರದ ವ್ಯಾಪ್ತಿ 6,29,778 ಹಳ್ಳಿಗಳಿಗೆ ಅಂದರೆ ಶೇಕಡಾ 95% ಇದೆ. ಶೇಕಡಾ 13.5% ಜನರಿಗೆ ಉದ್ಯೋಗ

ಒದಗಿಸಲಾಗಿದೆ. ಈ ಕ್ಷೇತ್ರದಲ್ಲಿ ಇಫ್ಕೋ ಇಡೀ ವಿಶ್ವದಲ್ಲಿ ಅತ್ಯಂತ ದೊಡ್ಡ ಸಹಕಾರಿ ಸಂಸ್ಥೆ. ಹೈನುಗಾರಿಕೆಯಲ್ಲಿ ಗುಜರಾತಿನ ಅಮೂಲ್ ನಮ್ಮ ಹೆಮ್ಮೆಯ ಸಾಧನೆ. ಅದರಂತೆ ಅನೇಕ ರಾಜ್ಯ ಹಾಗೂ ಬಹು ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳಾದ ಕ್ಯಾಂಪ್ಕೋ ಮಾಂಪ್ಕೋ, ಪಟ್ಟಣ ಸಹಕಾರ ಬ್ಯಾಂಕುಗಳ ಕ್ಷೇತ್ರದಲ್ಲಿ ಉತ್ತಮ ಸಾಧನೆಯಾಗಿ ಮಾಡಿವೆ. ಈ ದೇಶದಲ್ಲಿ ಹಸಿರು ಕ್ರಾಂತಿಯ. ಹಾಗು ಶ್ವೇತ ಕ್ರಾಂತಿಯ ಹರಿಕಾರ ನೆಂದು ಸಹಕಾರ ಕ್ಷೇತ್ರವನ್ನು ಗುರುತಿಸುತ್ತಾರೆ

**ಕರ್ನಾಟಕದಲ್ಲಿ ಸಹಕಾರ ಚಳುವಳಿ ಪ್ರಗತಿ :**

1904 ರಲ್ಲಿ ಸಹಕಾರ ಕಾಯ್ದೆಯ ಮೂಲಕ ದೇಶದಲ್ಲಿ ಸಹಕಾರ ಚಳುವಳಿ ಪ್ರಾರಂಭವಾದ ಮೇಲೆ ಕರ್ನಾಟಕದಲ್ಲಿ 1905 ಮೇ 8 ರಂದು ಅಂದಿನ ಅಖಂಡ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನಹಾಳದಲ್ಲಿ (ಇಂದಿನ ಗದಗ ಜಿಲ್ಲೆ) ದಿ. ಶಿದ್ದನಗೌಡ ಸಣ್ಣರಾಮನಗೌಡ ಪಾಟೀಲ್ ಎಂಬ ಗ್ರಾಮದ ಹಿರಿಯರು ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸಿದರು. ಇದು ದೇಶದ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘವೆಂದು ಪ್ರಸಿದ್ಧಿ ಪಡೆದಿದೆ.

ಕರ್ನಾಟಕದಲ್ಲಿ 46000ಕ್ಕೂ ಹೆಚ್ಚು ವಿವಿಧ ವರ್ಗದ 50 ವಿಧವಾದ ಸಹಕಾರ ಸಂಸ್ಥೆಗಳು, 2.18 ಕೋಟಿ ಸದಸ್ಯತ್ವ, ಶೇಕಡಾ % ರಷ್ಟು ಹಳ್ಳಿಗಳ ವ್ಯಾಪ್ತಿ, 28901 ಕೋಟಿ ಠೇವಣಿ, 28692 ಕೋಟಿ ರೂಗಳ ದುಡಿಯುವ ಬಂಡವಾಳ' ಕ್ಯಾಂಪ್ಕೋ ಮಾಂಪ್ಕೋ, ಬಮೂಲ್, ಅಪೇಕ್ಸ್ ಬ್ಯಾಂಕ, ಮಾರಾಟ ಮಹಾಮಂಡಳ, 265 ಪಟ್ಟಣ ಸಹಕಾರ ಬ್ಯಾಂಕುಗಳು, 4,993 ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, 12,990 ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಗೃಹ ನಿರ್ಮಾಣ ಸಹಕಾರ ಸಂಸ್ಥೆಗಳು, 4750 ಸೌಹಾರ್ದ ಸಹಕಾರಿಗಳು, ಹೀಗೆ ಇನ್ನೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಅನೇಕ ಉತ್ತಮ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳಲ್ಲಿ 21,017 ಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಲಾಭದಲ್ಲಿವೆ. 16,451 ಸಹಕಾರಸಂಸ್ಥೆಗಳು ನಷ್ಟದಲ್ಲಿವೆ.

ರಾಜ್ಯದ ರೈತರ ಅನೇಕ ಕಷ್ಟ ನಷ್ಟಗಳ ನಿವಾರಣೆಗಾಗಿ ಸರಕಾರಗಳು ಕಾಲಕಾಲಕ್ಕೆ ಬಡ್ಡಿ ಮನ್ನಾ, ಸಾಲ ಮನ್ನಾ, ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿಕೆ ಮುಂತಾದ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

**ಉಪಸಂಹಾರ :** ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸದಸ್ಯರ ಸಕ್ರೀಯ ಪಾಲುಗಾರಿಕೆ, ಕ್ರೀಯಾಶೀಲ ಆಡಳಿತ ಮಂಡಳಿ, ದಕ್ಷ ಸಿಬ್ಬಂದಿ ಇವು ತಳಹದಿ. ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡವರಿಗೆಲ್ಲ ಸಮಗ್ರ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮಾಹಿತಿ ನೀಡುವುದು ಅವಶ್ಯಕ. ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದ ಪೈಪೋಟಿ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಸಂಸ್ಥೆಗಳು ಸಾರ್ವಜನಿಕರ ಹಾಗೂ ಸರಕಾರಗಳ ವಿಶ್ವಾಸಾರ್ಹತೆಯನ್ನು ಗಳಿಸುವುದರ ಜೊತೆಗೆ ಯಶಸ್ವಿ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸುವುದು ಅವಶ್ಯಕ. ಅದಕ್ಕಾಗಿಯೇ ಸಪ್ತಾಹಗಳ ಆಚರಣೆ.

**ಜೈ ಸಹಕಾರ – ಜೈ ಹಿಂದ – ಜೈ ಕರ್ನಾಟಕ**

## ಜಾಗತಿಕ ಆರ್ಥಿಕ ಕುಸಿತಕ್ಕೆ ಭಾರತದ ಆಸರೆ
## ಮುಂದಿನ ವರ್ಷ ಭಾರತದ ಆರ್ಥಿಕ ಬೆಳವಣಿಗೆ ವೇಗದಲ್ಲಿ ಹೆಚ್ಚಳ

**– ಐ.ಎಂ.ಎಸ್. ವರದಿ**

ಜಾಗತಿಕ ಆರ್ಥಿಕ ಬಿಕ್ಕಟ್ಟು ವಿಶ್ವದ ಬಹುತೇಕ ಎಲ್ಲ ದೇಶಗಳನ್ನು ತೀವ್ರವಾಗಿ ಬಾಧಿಸುತ್ತಿದ್ದು, ಭಾರತದ ಮೇಲೂ ಪರಿಣಾಮ ಬೀರುವುದು ನಿಜವೇ, ಆದರೆ ಜಗತ್ತಿನ ಪಾಲಿಗೆ ಈ ಸವಾಲು ಮುಂದುವರಿಯಲಿದ್ದು, ಈ ಸಂದರ್ಭದಲ್ಲೇ ಭಾರತ ಬಿಕ್ಕಟ್ಟನ್ನು ಎದುರಿಸಿ ಜಿಡಿಪಿಯನ್ನು ಮೇಲೆತ್ತುವಲ್ಲಿ ಜಗತ್ತಿಗೆ ಭಾರತ ಹೆಗಲು ಕೊಡಲಿದೆ ಎಂಬುದಾಗಿ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ ಹೇಳಿದೆ.

ಈ ವರ್ಷ ಶೇ.3 ರಷ್ಟು ಕುಸಿತ ಕಂಡಿರುವ ವಿಶ್ವದ ಒಟ್ಟಾರೆ ಉತ್ಪನ್ನವು (ಜಿಪಿಡಿ), 2024ರ ಹೊತ್ತಿಗೆ ಮತ್ತಷ್ಟು ಕುಸಿತ ಕಾಣಲಿದೆ. ಈ ಹಿನ್ನೆಲೆಯಲ್ಲಿ ಜಾಗತಿಕ ಜಿಪಿಡಿಯನ್ನು ಮೇಲೆತ್ತುವಲ್ಲಿ ಭಾರತವು ಹೆಗಲು ಕೊಡಲಿದೆ ಎಂದು ಐಎಂಎಫ್ ತಿಳಿಸಿದೆ. 2024ರಲ್ಲಿ ಜಾಗತಿಕ ಜಿಪಿಡಿಯನ್ನು ಮೇಲೆತ್ತುವ ರಾಷ್ಟ್ರಗಳ ಪಟ್ಟಿಯನ್ನು ತಯಾರಿಸಲಾಗಿದ್ದು, ಅದರಲ್ಲಿ ಭಾರತ 2ನೇ ಸ್ಥಾನ ಪಡೆದಿದೆ.

**ಚೀನಾ ಕೊಡುಗೆ ಕುಸಿತ:** ವಿಶ್ವ ಜಿಪಿಡಿಗೆ ದೈತ್ಯ ಕಾಣಿಕೆ ನೀಡುವ ಚೀನ 2018–19ರಲ್ಲಿ ಶೇ.32.7 ರಷ್ಟು ಕೊಡುಗೆ ನೀಡಿದ್ದ ರೂ.2024ರಲ್ಲಿ ಅದು ಶೇ.28.3ಕ್ಕೆ ಕುಸಿಯಬಹುದೆಂದು ಅಂದಾಜಿಸಲಾಗಿದೆ. ಆದರೂ ವಿಶ್ವ ಜಿಪಿಡಿಗೆ ಕೊಡುಗೆ ನೀಡುವಲ್ಲಿ ತನ್ನ ಅಗ್ರ ಸ್ಥಾನವನ್ನು ಅದು ಕಾಪಾಡಿಕೊಳ್ಳಲಿದೆ.

ಆದರೆ ಈ ಪಟ್ಟಿಯಲ್ಲಿ ಈಗ 2ನೇ ಸ್ಥಾನದಲ್ಲಿರುವ ಅಮೆರಿಕದ ಕಾಣಿಕೆಯು 2024ರಲ್ಲಿ ಶೇ.9.2ಕ್ಕೆ ಕುಸಿಯಲಿದೆ. ಇದೇ ವೇಳೆ, ಭಾರತದ ಕೊಡುಗೆ ಶೇ.15.5ರಷ್ಟು ಹೆಚ್ಚಾಗಲಿರುವುದರಿಂದ ಭಾರತವು 2ನೇ ಸ್ಥಾನಕ್ಕೆ ಜಿಗಿಯಲಿದೆ. ಅಮೆರಿಕದ ಮೂರನೇ ಸ್ಥಾನಕ್ಕೆ ತಳ್ಳಲ್ಪಡಲಿದೆ ಎಂದು ಐಎಂಎಫ್ ಹೇಳಿದೆ.


ಈಗ ಭಾರತ ಒಂದಷ್ಟು ಆರ್ಥಿಕ ಹಿಂಜರಿಕೆ ಕಂಡರೂ ಅದು ಸ್ವರೂಪಾತ್ಮಕವಾಗಿರದೆ, ಕೆಲವು ಕ್ಷೇತ್ರಗಳಿಗೆ ಸೀಮಿತವಾಗಿದ್ದು, ಈ ಎಲ್ಲ ಸವಾಲುಗಳನ್ನು ಮೆಟ್ಟಿ ಭಾರತ ಮುಂದಿನ ವರ್ಷ ತನ್ನ ಆರ್ಥಿಕ ಬೆಳವಣಿಗೆಯ ವೇಗವನ್ನು ಇನ್ನಷ್ಟು ಹಿಚ್ಚಿಸಿಕೊಳ್ಳಲಿದೆ ಎಂದು ವಿವಿಧ ಆರ್ಥಿಕ ತಜ್ಞರು ಅಭಿಪ್ರಾಯಪಟ್ಟಿರುತ್ತಾರೆ.

# ನವಭಾರತದ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ

– ಶಂಕರ ಹೆಗಡೆ,

66ನೇ ಅಖಿಲ ಭಾರತ ಸಹಕಾರಿ ಸಪ್ತಾಹ 2019 ರ ಧ್ಯೇಯ ವಾಕ್ಯ. ರಾಷ್ಟ್ರೀಯ ಸಹಕಾರ ಯೂನಿಯನ್ ನವದೆಹಲಿಯವರು 66ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಆಚರಣೆಯ ವಿವರಗಳನ್ನು ಸಿದ್ಧಪಡಿಸಿದ್ದು ರಾಷ್ಟ್ರದ ಎಲ್ಲ ಸಹಕಾರ ಸಂಘ ಸಂಸ್ಥೆಗಳಿಗೆ 7 ದಿನಗಳ ಆಚರಣೆಯ ಶೀರ್ಷಿಕೆಗಳನ್ನು ನೀಡಿದ್ದಾರೆ. ಗ್ರಾಮೀಣ ಪ್ರದೇಶಗಳ ಸಹಕಾರ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ಅವಿಷ್ಕಾರ ಅಗತ್ಯವೆಂದು ಹಾಗೂ ಸಹಕಾರ ಸಂಸ್ಥೆಗಳಲ್ಲಿ ನೂತನ ತಂತ್ರಜ್ಞಾನ ಮತ್ತು ಡಿಜಿಟಲೈಸೇಷನ್ ಅಳವಡಿಸಿಕೊಳ್ಳುವ ಬಗ್ಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಸಹಕಾರಿ ಸಪ್ತಾಹವನ್ನು ದೇಶದ ಮೊದಲ ಪ್ರಧಾನಿ ಪಂಡಿತ್ ನೆಹರೂರವರ ಜನ್ಮದಿನದಂದು ಆಚರಿಸಲಾಗುತ್ತಿದ್ದು ನೆಹರೂರವರು ಈ ಕ್ಷೇತ್ರಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ ನೀಡಿರುತ್ತಾರೆ. ಈ ಬಗ್ಗೆ ಅವರ ಅನಿಸಿಕೆಗಳನ್ನು ಹಾಗೂ ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುವುದು ಈ ಲೇಖನದ ಉದ್ದೇಶ.

### ನೆಹರೂರವರ ದೃಷ್ಟಿಯಲ್ಲಿ ಸಹಕಾರ ಚಳುವಳಿ



ನವಂಬರ್ 14 ರ ಚಿರಸ್ಮರಣೀಯ ದಿನ. ಭಾರತದಲ್ಲಿ ಚಾಚಾ ನೆಹರೂ ಎಂಬುದಾಗಿ ಮಕ್ಕಳಿಗೆಲ್ಲಾ ಪ್ರಿಯರಾಗಿದ್ದ ಜವಾಹರಲಾಲ ನೆಹರೂರವರ ಹುಟ್ಟಿದ ದಿನ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಚಿಕ್ಕಂದಿನಿಂದಲೇ ಧುಮುಕಿ ರಾಷ್ಟ್ರೀಯ ನೇತಾರರೆಂದು ಮಹಾತ್ಮಾ ಗಾಂಧೀಜಿಯವರ ಆಶೀರ್ವಾದ ಪಡೆದು, ದೇಶದ ಸ್ವಾತಂತ್ರ್ಯದ ಪ್ರಥಮ ಎರಡು ದಶಕಗಳಲ್ಲಿ ಪ್ರಗತಿಪರ ಹೆಜ್ಜೆಗಳನ್ನಿಟ್ಟು ಮಹತ್ತರ ಸಾಧನೆಗೆ ಕಾರಣೀಭೂತರಾದ ಮಹಾನ್ ಚೇತನ ಜವಾಹರಲಾಲರು. ಅವರ ಜನ್ಮದಿನವನ್ನು ಮಕ್ಕಳ ದಿನವಾಗಿ ಆಚರಿಸುರುವುದರೊಂದಿಗೇನೇ ಸಹಕಾರ ಸಪ್ತಾಹದ ಪ್ರಾರಂಭದ ದಿನವಾಗಿಯೂ ದೇಶದಾದ್ಯಂತ ಆಚರಿಸಲಾಗುತ್ತಿದೆ.

ಬಡತನ ನಿರಕ್ಷರತೆ ಹಾಗೂ ಬಹುತೇಕ ಜನ ಗ್ರಾಮಾಂತರ ಪ್ರದೇಶಗಳಲ್ಲಿ ಕೃಷಿಕಾಮಗಾರಿಗಳನ್ನೇ ಹೊಂದಿಕೊಂಡಿರುವ ಕೃಷಿಪ್ರಧಾನವಾದ ನಮ್ಮ ಈ ದೇಶದಲ್ಲಿ ಸಹಕಾರ ಮಾರ್ಗದಿಂದಲೇ ಜನಜೀವನದ ಆರ್ಥಿಕ ಸಾಮಾಜಿಕ ಉನ್ನತಿ ಸಾಧ್ಯ ಎಂಬುದನ್ನು ಸಮಾಜವಾದೀ ತತ್ವದಲ್ಲಿ ಅನುರಾಗ ಹೊಂದಿದ್ದ ನೆಹರೂರವರು ತನ್ನ ಸಾರ್ವಜನಿಕ ಜೀವನದ ಹಾದಿಯಲ್ಲೇ ಕಂಡುಕೊಂಡಿದ್ದರು.

ಹೀಗಾಗಿ ಭಾರತದ ರಾಷ್ಟ್ರೀಯ ಸಹಕಾರಿ ಒಕ್ಕೂಟ (NCUI) ಅವರ ಹುಟ್ಟುಹಬ್ಬವನ್ನು ದೇಶದಾದ್ಯಂತ ಸಹಕಾರ ದಿನವಾಗಿ ಆಚರಿಸುತ್ತದೆ. ಇದು ಸಹಕಾರಿ ಸಪ್ತಾಹದ ಪ್ರಾರಂಭವೂ ಕೂಡಾ. ಅಂದಿನಿಂದ ಏಳು ದಿನಗಳ ತನಕ ದೇಶದ ಮೂಲೆ ಮೂಲೆಗಳಲ್ಲಿ ಸಹಕಾರದ ವಿವಿಧ ಮುಖಗಳ ಅರಿವನ್ನು ಜನತೆಗೆ ಮಾಡಿಕೊಡಲು ಪ್ರಯತ್ನ ನಡೆದಿದೆ. ಸಹಕಾರದ ಆದರ್ಶ, ಇದರ ಅನುಷ್ಠಾನದಿಂದಲೇ ಅಧಿಕ ಉತ್ಪಾದನೆ, ಕೃಷಿ ಕೈಗಾರಿಕೆಗಳಲ್ಲಿ ಪ್ರಗತಿ, ಬೆಲೆ ನಿಯಂತ್ರಣ ಇನ್ನಿತರ ಆರ್ಥಿಕ ರಂಗಗಳಲ್ಲಿ ಪ್ರಗತಿ ಸಾಧನೆಯ ವಿಧಾನವಿದೆಯೆಂಬುದನ್ನು ತಿಳಿಯಪಡಿಸಲು ಸಹಕಾರ ಕಾರ್ಯಕರ್ತರಲ್ಲಿ ಹೊಸ ಹುರುಪವನ್ನು ಹುರಿದುಂಬಿಸುವುದು ಸಹಕಾರ ಸಪ್ತಾಹದ ಉದ್ದೇಶವಾಗಿದೆ.

ಸಹಕಾರ ತತ್ವ ಎಂದೊಡನೆ ಅದೊಂದು ಸುವ್ಯವಸ್ಥಿತ ಆರ್ಥಿಕ ವ್ಯವಸ್ಥೆ ಎಂಬುದು ಸರ್ವೇ ಸಾಮಾನ್ಯಭಾವನೆ. ಆದರೆ ಈ ಪದ್ಧತಿ ಬರೇ ಆರ್ಥಿಕ ವ್ಯವಸ್ಥೆ ಮಾತ್ರವಲ್ಲ. ಜನಜೀವನದಲ್ಲಿ ವ್ಯಾವಹಾರಿಕವಾಗಿ ನಡೆದು ಬಂದ ಸಾಮಾಜಿಕ ವ್ಯವಸ್ಥೆಯೂ ಆಗಿದೆ. ಇದು ಬಂಡವಾಳದಾರರ ಸೊತ್ತಲ್ಲ. ಅದೇ ಹೊತ್ತಿಗೆ ಇದೊಂದು ಸಮಾಜವಾದೀ ಪದ್ಧತಿಯೆನ್ನಲೂ ಬರುವುದಿಲ್ಲ. ಬಂಡವಾಳಿಶಾಹೀ ಪದ್ಧತಿಗಿಂತ ಸಮಾಜವಾದೀ ಪದ್ಧತಿಗೆ ಹತ್ತಿರ ಸಂಬಂಧಿಯೆಂದರೆ ತಪ್ಪಾಗದು ಎಂದಿದ್ದಾರೆ ಜವಾಹರಲಾಲ ನೆಹರೂರವರು.

ಸಹಕಾರ ಎಂದರೆ ಪರಸ್ಪರತೆ, ಪರಸ್ಪರ ನೆರವಾಗುವ ವ್ಯವಸ್ಥೆ ಹಾಗೂ ಶಾಂತಿಯುತ ಪ್ರಗತಿ ಸಾಧನೆಯ ಮಾರ್ಗ, ಪರಸ್ಪರ ಸಹಕಾರದ ದೃಷ್ಟಿಕೋನವಿಟ್ಟುಕೊಂಡ ಜನ ಎಂದಿಗೂ ಘರ್ಷಣೆ, ಶಾಂತಿ ಭಂಗ, ಯುದ್ಧಗಳನ್ನು ಪ್ರೋತ್ಸಾಹಿಸುವ ಪ್ರವೃತ್ತಿಯವರಲ್ಲ. ಶಾಂತಿ ಪ್ರಿಯರು ಎಂಬುದು ಸುಸ್ಪಷ್ಟ ಎಂದವರು ನೆಹರೂ.

ಸ್ವಾಯತ್ತತೆ ಸಹಕಾರ ಪದ್ಧತಿಯ ಮುಖ್ಯ ಉದ್ದೇಶ. ಗ್ರಾಮಾಂತರ ಜನತೆಯ, ನಿಶ್ಚಿತ ಘಟಕಯಾ ಸಮೂಹ ಅಥವಾ ಸಮಾಜದ ಆರ್ಥಿಕ ಉನ್ನತಿ ಪರಸ್ಪರ ಸಹಕಾರ ಸಹಾಯ ಹಾಗೂ ಸಹಕಾರಿ ಮಾರ್ಗದರ್ಶನದಿಂದಲೇ ಸಾಧ್ಯ. ಸ್ವಯಂ ಪ್ರೇರಣೆಯಿಂದಲೇ ಸ್ವಯಂ ಶ್ರೇಯೋಭಿವೃದ್ಧಿಗಳಿಸುವ ಸಾಧನವಿದು. ಇಲ್ಲಿ ಪರಸ್ಪರ ಅರಿವು, ಪರಸ್ಪರ ನೆರವು ಇದೇ ಮುಖ್ಯ. ಈ ಕ್ಷೇತ್ರದಲ್ಲಿ ಸರಕಾರದ ನಿಯಂತ್ರಣಕ್ಕೆ ಅವಕಾಶವಿಲ್ಲ. ಒಳ್ಳೆಯದಕ್ಕೇ ಆಗಲಿ, ಕೆಡುಕಿಗೇ ಆಗಲಿ, ಸಹಕಾರ ಕ್ಷೇತ್ರದಲ್ಲಿ ಸರಕಾರ ಹಸ್ತಕ್ಷೇಪ ಪ್ರಯತ್ನಿಸಿದಲ್ಲಿ ಅದು ಸಹಕಾರವೇ ಅಲ್ಲ ಅದು ಇನ್ನೇನೋ ಎನ್ನಬೇಕಾಗುತ್ತದೆ ಎಂಬ ತಮ್ಮ ಮನಃ ಪೂರ್ವಕ ಹಾಗೂ ನಿಶ್ಚಿತ ಅಭಿಪ್ರಾಯ ನೆಹರೂರದ್ದು. ಸಹಕಾರ ವಿಚಾರ ಪ್ರಸ್ತಾಪಿತವಾದ ಪ್ರತಿಯೊಂದು ವೇದಿಕೆಯಲ್ಲೂ ದೇಶದ ಪ್ರಧಾನಿಯ ನೆಲೆಯಿಂದಲೂ, ವೈಯಕ್ತಿಕ ನೆಲೆಯಿಂದಲೂ, ಈ ತಮ್ಮ ಅಭಿಪ್ರಾಯವನ್ನು ಒತ್ತಿ ಒತ್ತಿ ಹೇಳಿದ್ದಾರೆ. ಸರಕಾರದ ಹಸ್ತಕ್ಷೇಪ ಸಹಕಾರ ರಂಗದಲ್ಲಿ ಹೆಚ್ಚುತ್ತಾ ಹೋದಂತೆ ಆ ಬಗ್ಗೆ ತನ್ನ ತೀವ್ರ ವೇದನೆಯನ್ನು ತೋಡಿಕೊಂಡಿದ್ದಾರೆ ಅವರು.

ಮಹಾತ್ಮಾ ಗಾಂಧೀಜಿಯವರಿಂದ ಸ್ಫೂರ್ತಿಹೊಂದಿ ಸ್ವಾಯತ್ತ ಸಹಕಾರೀ

ಪ್ರಜಾಪ್ರಭುತ್ವ ಪದ್ಧತಿಯನ್ನು ಈ ದೇಶದಲ್ಲಿ ಸ್ಥಾಪಿಸುವ ನಿರ್ಧಾರ ಸ್ವಾತಂತ್ರ್ಯಾನಂತರ ತಳೆಯಲಾಗಿತ್ತು. ಘಟನೆಯ ರಚನೆಯ ಕಾಲದಲ್ಲೂ ಪದ್ಧತಿಗೆ ಒಂದು ವಿಶಿಷ್ಟ ಸ್ಥಾನವನ್ನು ನೀಡಲಾಗಿತ್ತೆಂಬುದನ್ನೂ, 1958 ರಲ್ಲಿ ಭಾರತೀಯ ಸಹಕಾರೀ ಮಹಾ ಸಮ್ಮೇಳನವನ್ನುದ್ದೇಶಿಸಿ ಮಾಡಿದ ನೆಹರೂರವರ ಭಾಷಣದಲ್ಲಿ ಸ್ಪಷ್ಟವಾಗುತ್ತದೆ.

ಸಹಕಾರಿ ಪದ್ಧತಿ ನಮ್ಮ ದೇಶದಲ್ಲಿ ಬೆಳೆದು ಬಂದ ಬಗೆಗೆ ನೆಹರೂ ತಮ್ಮ ಅಸಮಾಧಾನವನ್ನು ಅಂದೇ ವ್ಯಕ್ತಪಡಿಸಿದ್ದಾರೆ. ಸಚೇತನ ಸಜೀವ ಸೇವಾಪರ ಚಳುವಳಿಯಾಗಿ ಬೆಳೆದುಬರಬೇಕಾಗಿದ್ದ ಸಹಕಾರ ಚಳುವಳಿ ತನ್ನೇ ಆದ ಸಮಸ್ಯೆಗಳನ್ನೂ ಹೊಂದಿದ್ದು, ಸ್ವಯಂಪೂರ್ಣ ಸ್ವಾಯತ್ತತೆಯನ್ನು ಬೆಳೆಸಿಕೊಳ್ಳುವಲ್ಲಿ ವಿಫಲತೆಯ ಹಾದಿಯನ್ನು ಅಂದೇ ಹಿಡಿದಿರುವುದನ್ನು ಕಂಡ ಅವರು ಈ ಬಗ್ಗೆ ಸದಾ ಚಿಂತನೆಯಾಗಬೇಕು. ಸೂಕ್ತ ಮಾರ್ಗದರ್ಶನ, ಮುಂದಾಳುತ್ವ ಹಾಗೂ ನಿಷ್ಠಾವಂತ ಸೇವಾನಿರತ ಕಾರ್ಯಕರ್ತರ ಅವಶ್ಯಕತೆ ಚಳುವಳಿ ಸುಸೂತ್ರವಾಗಿ ಕಾರ್ಯವೆಸಗಲು ಅವಶ್ಯವೆಂಬುದನ್ನು ಒತ್ತಿ ಹೇಳಿದ್ದರು.

ಗ್ರಾಮಾಂತರ ಸಾಲದ ವ್ಯವಸ್ಥೆಯ ಕುರಿತು ಪರಿಶೀಲನೆ ನಡೆಸಿದ ರೂರಲ್ ಕ್ರೆಡಿಟ್ ಸರ್ವೇ ಸಮಿತಿ (ಶ್ರೀ ಎ.ಡಿ. ಗೋರವಾಲ ಸಮಿತಿ) ಸಲಹೆಗಳನ್ನು ಸರಿಯಾದ ಚಿಂತನೆ ನಡೆಸದೆಯೇ ಅಂಗೀಕರಿಸಿ, ಸರಕಾರ ಚಳುವಳಿಯ ಬೆಳವಣಿಗೆಗೆ ಮಹದಪರಾಧವನ್ನೇ ಮಾಡಿದಂತಾಗಿದೆ. ಸಹಕಾರ ಚಳುವಳಿಗೆ ಸರಕಾರದ ಹೆಚ್ಚಿನ ಆರ್ಥಿಕ ನೆರವು ಹಾಗೂ ಇನ್ನಿತರ ಬೆಂಬಲ ಇದ್ದರೆ ಮಾತ್ರ ಈ ಚಳುವಳಿಯಿಂದ ಗ್ರಾಮಾಂತರ ಜನತೆಯ ಅಭಿವೃದ್ಧಿ ಸಾಧನವಾಗಬಲ್ಲದೆಂದು ಈ ಸಮಿತಿ ಸದುದ್ದೇಶದಿಂದಲೇ ಸಲಹೆ ನೀಡಿತ್ತು. ಈ ಸಲಹೆಯನ್ನು ಒಪ್ಪಿಕೊಂಡುದದರಿಂದ ಸತ್ಪರಿಣಾಮದ ಬದಲಾಗಿ ಚಳುವಳಿಗೆ ಧಕ್ಕೆ ತಂದೊಡ್ಡಿತೆಂಬುದು ಆ ಮೇಲೆ ಮನವರಿಕೆಯಾಗಿದೆ. ಇದರಿಂದಾಗಿ ತುಂಬಾ ನೊಂದಿದ್ದೇನೆ ಈ ಪರಿಸ್ಥಿತಿ ನಿರ್ಮಾಣದಲ್ಲಿ ತಾನೂ ಹೊಣೆಗಾರನಾಗಿದ್ದೇನೆ ಎಂದಿದ್ದಾರೆ. ಸಮಿತಿಯ ಈ ಸಲಹೆ ಸಹಕಾರ ಚಳುವಳಿಯನ್ನು ತಪ್ಪು ದಾರಿಯತ್ತ ದೂಡಿದೆಯೆಂದೇ ನೆಹರೂರವರ ಸ್ಪಷ್ಟ ಅಭಿಮತ.

ಜನತೆಯ ಸಾಮರ್ಥ್ಯದ ಅರಿವನ್ನು ಮಾಡಿಕೊಳ್ಳದೆ ನಮ್ಮ ಜನ ತಮ್ಮ ಕಾಲಮೇಲೆ ನಿಲ್ಲಬಲ್ಲರು. ತಮ್ಮ ಹಿತಸಾಧನೆಯ ಬಗ್ಗೆ ಚಿಂತಿಸಬಲ್ಲರು. ತಮ್ಮದೇ ಆದ ದಾರಿಯನ್ನು ಕಂಡುಕೊಳ್ಳಬಲ್ಲರು. ಎಂಬ ಬಗ್ಗೆ ಶಂಕಿಸಿ ರೂರಲ್ ಕ್ರೆಡಿಟ್ ಸರ್ವೇ ಸಮಿತಿಯು ಸರಕಾರ ಅವರ ಬೆಂಗಾವಲಾಗಿ ನಿಲ್ಲಬೇಕು ಎಂದು ಸೂಚಿಸಿತ್ತು. ತತ್ಪರಿಣಾಮವಾಗಿ ಚಳುವಳಿ ತಪ್ಪು ದಾರಿಯಲ್ಲಿ ಸಾಗಿತು. ಸರಕಾರದ ಆರ್ಥಿಕ ನೆರವಿನೊಂದಿಗೆ ಸರಕಾರಿ ಅಧಿಕಾರಿಗಳ ನೇಮಕಾತಿ ತತ್ವದ ಹಾಗೂ ಆಗು ಹೋಗುಗಳ ಅರಿವೇ ಇಲ್ಲದ ಜನ ಚಳುವಳಿಯ ಕಾರ್ಯನಿರ್ವಾಹಕರಾಗಿ ಬಂದುದು. ಸಹಕಾರಿ ಘಟಕಗಳು ಅಮಾಯಕವಾಗಿ ದೊಡ್ಡ ಘಟಕಗಳಾಗಿ ಪರಿವರ್ತಿತಗೊಂಡು, ಸದಸ್ಯರುಗಳಲ್ಲಿ ಪರಸ್ಪರರ ಗುರುತು ಪರಿಚಯವಿಲ್ಲದಂತಾದುದು, ದುರ್ಬಲ ಸದಸ್ಯರ ಮೇಲೆ ಸಬಲರ ಹಾಗೂ ಸರಕಾರಿ ಅಧಿಕಾರಿಗಳಿಂದ ದಬ್ಬಾಳಿಕೆ ಶೋಷಣೆ ಮುಂತಾದ ದುಷ್ಪ–ರಿಣಾಮಗಳಿಗೆ ಕಾರಣವಾಯಿತೇ ವಿನಃ ಸಂಘದಲ್ಲಿ ಪರಸ್ಪರ ಹೊಂದಾಣಿಕೆ ಸಹಜೀವನ ಸಹಬಾಳ್ವೆಯ ಭಾವನೆ ಹಾಗೂ ಸ್ವಯಂ ನಿರ್ಧಾರದ ಶಕ್ತಿ ಬೆಳೆದು ಬರುವ ಅವಕಾಶವೇ ಇಲ್ಲದಂತಹ ಪರಿಸ್ಥಿತಿ ಸಂಭವಿಸಿದೆ.

ನಮ್ಮ ದೇಶದ ಗ್ರಾಮಾಂತರ ಜನಜೀವನದ ಸಾಮಾಜಿಕ ಆರ್ಥಿಕ ಉನ್ನತಿಯಾಗಬೇಕಾದಲ್ಲಿ ಪ್ರತೀ ಗ್ರಾಮದಲ್ಲಿ ಒಂದು ಪಂಚಾಯಿತ, ಒಂದು ಸಹಕಾರ ಸಂಘ ಹಾಗೂ ಒಂದು ಪ್ರಾಥಮಿಕ ಶಾಲೆ ಈ ಮೂರು ಘಟಕಗಳಿಂದ ಮಾತ್ರ ಸಾಧ್ಯ. ಸ್ವಯಂ ಆಡಳಿತಕ್ಕಾಗಿ ಪಂಚಾಯತ ಆರ್ಥಿಕ ಉನ್ನತಿಗಾಗಿ ಸಹಕಾರ ಸಂಘ, ನಿರಕ್ಷರತೆ ನಿವಾರಣೆಗಾಗಿ ಶಾಲೆ ಅತ್ಯವಶ್ಯ ಈ ಧ್ಯೇಯವಿಟ್ಟುಕೊಂಡವರು ನೆಹರೂ. ಸಹಕಾರ ರಂಗದಲ್ಲಿ ಸರಕಾರದ ನೆರವು ಹೆಚ್ಚು ಹೆಚ್ಚಾದಂತೆ ಗ್ರಾಮದ ಆರ್ಥಿಕ ಘಟಕವಾದ ಸಹಕಾರ ಸಂಘ ಸ್ವಾಯತ್ತತೆಯ ಮಾರ್ಗದಿಂದ ಶಿಥಿಲಗೊಂಡು ಗ್ರಾಮದ ಹಿತಾಸಾಧನೆಗೆ ಕುತ್ತಾಗಿ ಪರಿಣಮಿಸಿತು. ಅದರ ಬೆನ್ನಲ್ಲೇ ಸಂಘದ ರೂಪ ಬದಲಾಗಿ ಒಂದು ಗ್ರಾಮಕ್ಕೇ ಸೀಮಿತವಿರಬೇಕಾದ ಸಹಕಾರ ಸಂಘ ಹಲವಾರು ಗ್ರಾಮಗಳನ್ನೊಳಗೊಂಡ ದೊಡ್ಡ ಪ್ರಮಾಣದ ಸಂಘವಾಗುವ ಸಂಭವ ಹೆಚ್ಚು. ಸ್ವಯಂಪೂರ್ಣತೆಯ ಉದ್ದೇಶದ ಬದಲಾಗಿ ಲಾಭಗಳಿಕೆಯೇ ಪ್ರಾಮುಖ್ಯವೆನಿಸಿ, ಅನಗತ್ಯ ಕಾರ್ಯವಿಸ್ತರಣೆಯಿಂದಾಗಿ ಸದಸ್ಯರ ಹೊಂದಾಣಿಕೆಗೆ ಧಕ್ಕೆ ಹೆಜ್ಜೆ ಹೆಜ್ಜೆಗೂಸರಕಾರದ ನೆರವು ಮಾರ್ಗದರ್ಶನದ ಹಾರೈಕೆ, ಪರಾವಲಂಬನೆ ಈ ಪರಿಸ್ಥಿತಿ ಸಹಕಾರದ ಮೂಲ ತತ್ವಕ್ಕೇ ತದ್ವಿರುದ್ಧವಾಗಿ ಪರಿಣಮಿಸಿದೆ ಎಂದಿದ್ದರವರು ಅಂದೇ.

ಸಹಕಾರ ಸಂಘಗಳು ಚಿಕ್ಕದಾಗಿರಬೇಕು. ಒಂದು ಅಥವಾ ಎರಡು ಗ್ರಾಮಗಳ ಸದಸ್ಯತನಕ್ಕೆ ಸೀಮಿತವಿರಬೇಕು. ತನ್ನತನವನ್ನುಳಿಸುವಂತಿರಬೇಕು ಚಿಕ್ಕ ಹಿಡುವಳಿದಾರರರು, ಕುಶಲಕರ್ಮಿಗಳು, ಗ್ರಾಮಕೈಗಾರಿಕೆಗಳು, ಉತ್ಪಾದಕ ಹಾಗೂ ಗ್ರಾಹಕರ ರಂಗಗಳ ಕಾರ್ಯವ್ಯಾಪ್ತಿಗೊಳಪಟ್ಟಿರುವುದು ಹಿತಕರವೆಂಬ ವಿಚಾರವನ್ನು ಮತ್ತೆ ಮತ್ತೆ ಒತ್ತಿ ಹೇಳಿದ ನೆಹರೂರವರು ಸಹಕಾರ ಮಾರ್ಗವನ್ನು ದೇಶದ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ಸೂಕ್ತಮಾರ್ಗವೆಂದು ಜನತೆಯ ಅಭಿಪ್ರಾಯ ಹಾಗೂ ಮನವೊಲಿಕೆಯಿಂದಲೇ ಈ ಚಳುವಳಿಯ ಮುನ್ನಡೆ ಸಾಧ್ಯ ಎಂದು ಪ್ರತಿಪಾದಿಸಿದ್ದಾರೆ.

ಬಡವರೇ ಹೆಚ್ಚಾಗಿರುವ ಈ ದೇಶದಲ್ಲಿ ಕೃಷಿ ಹಿಡುವಳಿ ಒಂದು ಎರಡು ಎಕರೆಗಳಷ್ಟೇ ಬಹು ಸಂಖ್ಯೆಯಲ್ಲಿರುವಾಗ ಸಹಕಾರಿ ಚಳುವಳಿ ಪ್ರಮುಖ ಪಾತ್ರವಹಿಸಬೇಕಾಗಿದೆ. ಸಹಕಾರಿ ಬೇಸಾಯ ಪದ್ಧತಿಯನ್ನು ಎತ್ತಿಹಿಡಿದ ನೆಹರೂರವರು ಇದು ಸಮತಾವಾದದತ್ತ ದೇಶವನ್ನು ಒಯ್ಯಲಾರದು ಎಂದು ಸ್ಪಷ್ಟ ಅಭಿಮತ ವ್ಯಕ್ತಪಡಿಸಿದ್ದರು. ಆಧುನಿಕ ಪದ್ಧತಿಯಲ್ಲಿ ಕೃಷಿ ವಿಧಾನವನ್ನು ಸಣ್ಣ ಹಿಡುವಳಿದಾರರು ಅಳವಡಿಸಿಕೊಳ್ಳಲು ಸಹಕಾರ ಬೇಸಾಯ ಪದ್ಧತಿಯಿಂದ ಮಾತ್ರ ಸಾಧ್ಯ ಹಿಡುವಳಿದಾರರರು ತಮ್ಮ ಹಿಡುವಳಿಯ ಹಕ್ಕನ್ನು ಕಳೆದುಕೊಳ್ಳದೆಯೇ ಸಹಕಾರಿ ವಿಧಾನದಿಂದ ಉತ್ಪಾದನೆ ಹೆಚ್ಚಿಸಿಕೊಳ್ಳಲು ಸಾಧ್ಯ

ಈ ಪ್ರಯೋಗವನ್ನು ಅನುಸರಿಸಿದ ಪ್ರಜಾಪ್ರಭುತ್ವವಾದೀ ಕೆನಡಾದಲ್ಲಿ ಉತ್ತಮ ಫಲಿತಾಂಶ ದೊರೆತಿದೆ. ಭೂ ಸುಧಾರಣೆಯ ಬಳಿಕ ಇನ್ನಷ್ಟು ಹೆಚ್ಚು ಸಂಖ್ಯೆಯಲ್ಲಿ ಸಂಭವಿಸಬಹುದಾದ ಚಿಕ್ಕ ಹಿಡುವಳಿದಾರರು ಈ ಪದ್ಧತಿಗೇ ಶರಣುಹೋಗಬೇಕಾದೀತು ಎಂದು ಪ್ರತಿಪಾದಿಸಿದ ನೆಹರೂ ಲೋಕಸಭೆ ರಾಜ್ಯಸಭೆ ಮುಂತಾದ ಹಲವು ವೇದಿಕೆಗಳಲ್ಲಿ ತೀವ್ರವಾದ ಟೀಕೆಗಳನ್ನು ಎದುರಿಸುತ್ತಾ ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ. 'ಜಂಟಿ ಕೃಷಿ ಪದ್ಧತಿ' ರಶ್ಯಾ ಚೀನಾದಂತಹ ಸಮತಾವಾದಿ ರಾಷ್ಟ್ರ ನಿರ್ಮಾಣಕ್ಕೆ ನಾಂದಿಯಾಗದೆಂದು ತನ್ನ ದೃಡ ನಂಬಿಕೆ ವ್ಯಕ್ತಪಡಿಸಿದರು. ಅದೇ ವೇಳೆಯಲ್ಲಿ ಈ ಪದ್ಧತಿ ಅನುಸರಿಸಿದ ರಾಜಸ್ಥಾನ ಪಂಜಾಬ್ ರಾಜ್ಯಗಳಲ್ಲಿ ಹಲವೆಡೆಗಳಲ್ಲಿ ಪರಿಣಾಮಕಾರೀ ಯಶಸ್ಸು ಹೊಂದಿಲ್ಲವೆಂಬುದನ್ನೂ ಅವರು ಮರೆತಿರಲಿಲ್ಲ.

ಸಹಕಾರ ಕ್ಷೇತ್ರ ಬೆಳೆಯಬೇಕಾದರೆ ಈ ಚಳುವಳಿಯ ಬಗ್ಗೆ ಹಳ್ಳಿಯ ಜನಕ್ಕೆ ಬಡಜನಕ್ಕೆ ಯುವ ಜನರಿಗೆ, ಯಾವ ವರ್ಗದ ಜನರ ಸಾಮಾಜಿಕ ಆರ್ಥಿಕ ಉದ್ಧಾರಕ್ಕಾಗಿ ಚಳುವಳಿ ಕಾರ್ಯವೆಸಗುತ್ತದೋ ಆ ಜನರಿಗೆ ಸೂಕ್ತ ಮಾರ್ಗದರ್ಶನ ತರಬೇತಿ ತೀರಾ ಅವಶ್ಯವೆಂಬುದು ಅವರ ಕಳಕಳಿಯಾಗಿತ್ತು. ಚಳುವಳಿಯ ಬಗ್ಗೆ ಸಾಕಷ್ಟು ತಿಳುವಳಿಕೆ ಎಲ್ಲೆಡೆಯಲ್ಲೂ ಒದಗಿಸಬೇಕು. ಅದಕ್ಕಾಗಿ ಯುವಕರಿಗೆ ಗ್ರಾಮಾಂತರ ಜನರಿಗೆ ತರಬೇತಿ ವ್ಯವಸ್ಥೆಯನ್ನು ಕೈಗೊಳ್ಳಬೇಕು ಗ್ರಾಮದ ಕಾರ್ಯಕರ್ತರಿಗೆ ಸಂಸ್ಥೆಯನ್ನು ನಡೆಸುವ ಜವಾಬ್ದಾರಿಯ ಕುರಿತಾಗಿ ಲೆಕ್ಕಪತ್ರಗಳನ್ನಿಡುವ ವಿಷಯ ಹಾಗೂ ಸಂಘಗಳು ತಮ್ಮ ವ್ಯವಹಾರಗಳನ್ನು ಸುವ್ಯವಸ್ಥಿತವಾಗಿ ಕೈಗೊಳ್ಳುವಂತೆ ತರಬೇತಿ ದೇಶದಾದ್ಯಂತ ಆಗಬೇಕೆಂದೂ ಅವರು ಸೂಚಿಸಿದ್ದರು.

ನೆಹರೂರವರ ಆದರ್ಶಗಳನ್ನು ಪರಿಪಾಲಿಸುವಲ್ಲಿ ಸಹಕಾರ ಚಳುವಳಿ ಎಷ್ಟು ಯಶಸ್ವಿಯಾಗಿದೆ ಎಂದು ನಾವು ಸಿಂಹಾವಲೋಕನಗೈಯುವುದೂ ಇಲ್ಲಿ ಸೂಕ್ತ ಚಳುವಳಿಯ ಉದ್ದೇಶ ಒಳ್ಳೆಯದು. ಚಳುವಳಿಯ ಬೆಳವಣಿಗೆಯ ದಾರಿ ಮಾತ್ರ ನೆಹರೂರವರಂದಂತೆ ತೀರಾ ತಪ್ಪು ಮಾರ್ಗದಲ್ಲೇ ಸಾಗಿದೆಯೆನ್ನಲು ವಿಷಾದವೆನಿಸುತ್ತದೆ.

ಸ್ವಾಯತ್ತ ಸ್ವಯಂಪೂರ್ಣತೆ ಮಾರ್ಗದಿಂದ ಬಹುದೂರ ಸಾಗುತ್ತಿದೆ. ಸಹಕಾರ ಕ್ಷೇತ್ರ ಭಾರತದಲ್ಲಿ ಸರಕಾರದ ಹಸ್ತವನ್ನೇ ನಂಬಿಕೊಂಡು ಸರಕಾರದ ಅಂಗಸಂಸ್ಥೆಯಾಗಿಯೇ ಸಾಗುತ್ತಿದೆ. ಅಲ್ಲೊಂದು ಇಲ್ಲೊಂದು ಎಂಬಂತೆ ಬೆರಳೆಣಿಕೆಗಷ್ಟೇ ಕೆಲವು ಸಂಘಗಳು ಮಾತ್ರ ತಾವೇ ತಾವಾಗಿ ಸ್ವಯಂ ಕಾಲಮೇಲೆ ನಿಂತಿರುವ ಪರಿಸ್ಥಿತಿ ಇದೀಗ ಸಹಕಾರ ಕ್ಷೇತ್ರದಲ್ಲಿ ಗ್ರಾಮಾಂತರದ ಹೆಚ್ಚಿನ ಸಂಘಗಳು ಸರಕಾರದ ಸಾಲ ಹಾಗೂ ಸಬ್ಸಿಡಿಯನ್ನೇ ನಂಬಿಕೊಂಡಿವೆ. ತತ್ಪರಿಣಾಮವಾಗಿ ಹೆಚ್ಚು ಹೆಚ್ಚು ಸಂಘಗಳು ಸರಕಾರಿ ಅಧಿಕಾರಿಗಳ ಆಡಳಿತಗೊಳಪಟ್ಟಿವೆ. ನೆರವು ಸಬ್ಸಿಡಿ ಸರಕಾರದಿಂದ ದೊರಕದಿದ್ದಾಗ ಇವು ನಿಷ್ಕ್ರಿಯವಾಗುತ್ತಿವೆ. ಸ್ಥಳೀಯ ಮುಂದಾಳತನ ಬರೇ ನಾಮಮಾತ್ರವಾಗಿ ಉಳಿದಿವೆ. ಯಶಸ್ವಿಯಾಗಿ ಕಾರ್ಯವೆಸಗುವ ಕೆಲವು ಸಂಸ್ಥೆ ಕೆಲವೊಂದು ಹಿತಾಸಕ್ತಿಗಳ ಕೈಗೊಂಬೆಗಳಾಗಿ ಉಳಿದರೆ ಪರಸ್ಪರ ಸಹಕಾರ ತತ್ವ ಎಲ್ಲಿದೆ ಎಂಬ ಸಂದೇಹವೂ ಉಂಟಾಗುತ್ತದೆ.

ಪ್ರವಾಹದೋಪಾದಿಯಲ್ಲಿ ಕಾಯಿದೆಗಳಿಗೆ ತಿದ್ದುಪಡಿ ಮಾಡಲಾಗುತ್ತಿದ್ದು, ಸಹಕಾರ ಕಾಯಿದೆಯೇ ವಿಕೃತಗೊಂಡಿದ್ದು, ಚಳುವಳಿಯ ಸ್ವತಂತ್ರ ಆರ್ಥಿಕ ವ್ಯವಸ್ಥೆಯಾಗಿ ಗ್ರಾಮಾಂತರ ಜನತೆಯ ಹಿತಸಾಧಿಸುವ ಚಳುವಳಿಯಾಗಿ ಮುನ್ನಡೆಯಲು ಅಸಾಧ್ಯವೆಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಎಂದರೂ ತಪ್ಪಾಗದು. ಸರಕಾರದ ಹಿಡಿತದಿಂದ ಸಹಕಾರ ಕ್ಷೇತ್ರವನ್ನು ಹೊರತಾಗಿಸುವ ಬದಲಾಗಿ ಸರಕಾರದ ಬಿಗಿಮುಷ್ಠಿ ಇನ್ನಷ್ಟು ಹೆಚ್ಚುವಂತಹ ಸ್ಥಿತಿ ನಿರ್ಮಾಣವಾಗಿದೆ, ಆಗುತ್ತಿದೆ.

ಗ್ರಾಹಕರ ಅವಶ್ಯಕತೆಗಳನ್ನು ಪೂರೈಸಲು ನಿರ್ಮಾಣವಾದ ಗ್ರಾಹಕರ ಸಹಕಾರ ಸಂಘಗಳಂತೂ ದುರ್ಬಲವಾಗಿದ್ದು ಸರಕಾರದ ಸಾರ್ವಜನಿಕ ಅವಶ್ಯಕತೆಗಳ ವಿತರಣಾ ವ್ಯವಸ್ಥೆಯ ಅಂಗಸಂಸ್ಥೆಗಳಷ್ಟೇ ಆಗಿ ಉಳಿದಿವೆ. ಅವಶ್ಯಕ ವಸ್ತುಗಳ ನಿಯಂತ್ರಣ ವ್ಯವಸ್ಥೆ ಮುರಿದಿಬಿದ್ದಾಗ ಈ ಸಂಘಗಳೂ ನಿಷ್ಕ್ರಿಯವಾಗಿಯೇ ಉಳಿಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ರಾಜಕೀಯಕ್ಕೆ ಸಹಕಾರ ಕ್ಷೇತ್ರದಲ್ಲಿ ಎಳ್ಳಷ್ಟೂ ಅವಕಾಶ ನೀಡಲಾಗದೆಂಬ ನೆಹರೂರವರ ಆಸೆ/ಬಯಕೆ ಬರೇ ಹಾರೈಕೆಯಾಗಿಯೇ ಉಳಿದಿದೆ.

ಸಹಕಾರ ಸಂಘ ಆರ್ಥಿಕ ಪರಿವರ್ತನೆಯ ಘಟಕವಾಗಿ ಉಳಿಯದೆ, ಈಗಿನ ಪರಿಸ್ಥಿತಿಯಲ್ಲಿ ರಾಜಕೀಯ ಕೇಂದ್ರವಾಗಿದೆ. ರಾಜಕೀಯ ಶಕ್ತಿವರ್ಧನೆ, ಗುಂಪುಗಾರಿಕೆ, ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಅಧಿಕಾರ ಸ್ಥಾನ ಗಳಿಕೆಯ ಮೆಟ್ಟಿಲುಗಳಾಗಿವೆ. ಈ ಸಂಘಗಳ ವಾರ್ಷಿಕ ಮಹಾಸಭೆಗಳ ಸಂದರ್ಭದಲ್ಲಿ ಗದ್ದಲ, ಕೋಲಾಹಲ, ಮತಸಂಗ್ರಹದ ವೈಖರಿಯೇ ಇದಕ್ಕೊಂದು ಸಾಕ್ಷಿ. 1997 ನೇ ಸಂವಿಧಾನ ತಿದ್ದುಪಡಿ ಹಾಗೂ ತದನಂತರದ ಸಹಕಾರ ಸಂಘಗಳ ಅಧಿನಿಯಮಗಳ ತಿದ್ದುಪಡಿಗಳು ಸಹಕಾರ ಚಳುವಳಿಗೆ ಹೆಚ್ಚಿನ ಸ್ವಾತಂತ್ರ್ಯ ಸ್ವಾಯತ್ತತೆ ನೀಡಿರುವುದು ನಿಜವಾಗಿಯೂ ಸ್ವಾಗತಾರ್ಹ.

ಚಳುವಳಿಯ ಸ್ವರೂಪ ನೆಹರೂರವರು ನಮ್ಮ ಮುಂದಿಟ್ಟ ಸ್ವಯಂಪೂರ್ಣ ಸ್ವಾಯತ್ತ ಆರ್ಥಿಕ ಉನ್ನತಿ ಸಾಧನೆಯ ಘಟಕವಾಗುವಂತೆ ಅನುಕೂಲಕರ ವಾತಾವರಣ ನಿರ್ಮಾಣವಾಗಬೇಕು. ಈ ದಿಸೆಯಲ್ಲಿ ಸಂಘಟನೆಗಳು, ಚಳುವಳಿಯಲ್ಲಿ ಆಸಕ್ತಿಯುಳ್ಳವರು, ನಿಷ್ಠಾವಂತ ಕಾರ್ಯಕರ್ತರು ಹಾಗೂ ಸರಕಾರ ಹೊಸಚಿಂತನೆ ಮಾಡುವುದು ತೀರಾ ಅವಶ್ಯ. ಶೇಕಡಾ 70 ಕ್ಕೂ ಮಿಕ್ಕಿದ ಗ್ರಾಮಾಂತರ ಜನಸ್ತೋಮದ ಸರ್ವತೋಮುಖ ಅಭಿವೃದ್ಧಿ ಸಾಧನೆಯ ಮೂಲ ಸ್ಥಂಭಗಳಾಗಿ ಗ್ರಾಮಕ್ಕೊಂದು ಪಂಚಾಯತ್ ಸಹಕಾರ ಸಂಘ ಹಾಗೂ ಪ್ರಾಥಮಿಕ ಶಾಲೆ ಸ್ಥಾಪನೆಯಾಗಬೇಕೆಂಬ ನೆಹರೂ ಆಶಯ ಫಲಿಸುವ ದಿನ ಬೇಗನೆ ಬರಲಿ ಎಂದು ಹಾರೈಸೋಣ. ಈ ದಿಸೆಯಲ್ಲಿ ಭದ್ರತೆಯುಳ್ಳ ಸಹಕಾರಿ ಧುರೀಣರು ಸಹಕಾರಿ ಕಾರ್ಯಕರ್ತರು ಹಾಗೂ ಶಾಸಕರು ಚಿಂತನೆ ಮಾಡುವುದು ಅತ್ಯವಶ್ಯ. ಅದೇ ನಾವು ರಾಷ್ಟ್ರದ ಸಹಕಾರಿ ನೇತಾರರಾಗಿರುವ ಪಂಡಿತ್ ನೆಹರೂರವರಿಗೆ ನೀಡಬಹುದಾದ ದೊಡ್ಡ ಕಾಣಿಕೆ ಹಾಗೂ ಗೌರವ.

**ಜೈ ಹಿಂದ್ – ಜೈ ಸಹಕಾರ**

# ಬೆಳಕಿನ ಹಬ್ಬ ದೀಪಾವಳಿಯ ಆಚರಣೆ ಮತ್ತು ಮಹತ್ವ

– ಕವಿತ ಆರ್.

ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಪ್ರಭು ಶ್ರೀರಾಮಚಂದ್ರನು ಅಯೋಧ್ಯೆಗೆ ಹಿಂದಿರುಗಿದಾಗ ಪ್ರಜೆಗಳು ಬಂಗಾರದ ಕಲಶವನ್ನು ಮಣಿ–ರತ್ನಗಳಿಂದ ಅಲಂಕರಿಸಿ ಮನೆಯೆದುರು ಹೊಸ್ತಿಲಿನ ಮೇಲಿಟ್ಟರು, ಊರಿನ ಬೀದಿಗಳನ್ನು ಸುಗಂಧಿತದ್ರವ್ಯಗಳಿಂದ ಯುಕ್ತವನ್ನಾಗಿಸಿ ದೀಪೋತ್ಸವನ್ನು ಆಚರಿಸಿದರು. ಅಂದಿನಿಂದ ದೀಪಾವಳಿ ಉತ್ಸವನ್ನು ಆಚರಿಸಲಾಗುತ್ತಿದೆ.

ದೀಪಾವಳಿ ಎನ್ನುವ ಶಬ್ದವು ದೀಪ ಮತ್ತು ಅವಳಿ ಹೀಗೆ ರೂಪುಗೊಂಡಿದೆ. ಇದರ ಅರ್ಥ ದೀಪಗಳ ಸಾಲು ಎಂದಾಗಿದೆ. ದೀಪಾವಳಿಯಂದು ಎಲ್ಲೆಡೆಯೂ ಹಚ್ಚುತ್ತಾರೆ. ಆಶ್ವಯುಜ ಕೃಷ್ಣ ತ್ರಯೋದಶಿ(ಧನತ್ರಯೋದಶಿ), ಆಶ್ವಯುಜ ಕೃಷ್ಣ ಚತುರ್ದಶಿ (ನರಕಚತುರ್ದಶಿ), ಅಮಾವಾಸ್ಯೆ (ಲಕ್ಷ್ಮೀಪೂಜೆ), ಮತ್ತು ಆಶ್ವಯುಜ ಶುಕ್ಲ ಪಾಡ್ಯ (ಬಲಿಪಾಡ್ಯ) ಈ ನಾಲ್ಕು ದಿನಗಳ ಕಾಲ ದೀಪಾವಳಿಯನ್ನು ಆಚರಿಸಲಾಗುತ್ತದೆ. ಕೆಲವರು ತ್ರಯೋದಶಿಯನ್ನು ದೀಪಾವಳಿಯಲ್ಲಿ ಸೇರಿಸದೇ ಉಳಿದ 3 ದಿನಗಳನ್ನು ದೀಪಾವಳಿಯೆಂದು ಆಚರಿಸುತ್ತಾರೆ. ಗೋವತ್ಸದ್ವಾದಶಿ ಮತ್ತು ಸಹೋದರ ಬಿದಿಗೆಯು ದೀಪಾವಳಿಯ ಸಮಯದಲ್ಲಿಯೇ ಬರುತ್ತದೆ. ಆದುದರಿಂದ ಇದನ್ನು ದೀಪಾವಳಿಯೆಂದೇ ಪರಿಗಣಿಸಲಾಗುತ್ತದೆ. ಆದರೆ ವಾಸ್ತವದಲ್ಲಿ ಈ ಉತ್ಸವಗಳು ವಿಭಿನ್ನವಾಗಿವೆ.

ಭಗವಾನ ಶ್ರೀ ಕೃಷ್ಣನು ಅಸುರಿವೃತ್ತಿಯ ನರಕಾಸುರನನ್ನು ವಧಿಸಿ ಜನರನ್ನು ಭೋಗವಾದ ಲಾಭ, ಅನಾಚಾರ ಹಾಗೂ ದುಷ್ಟ ಪ್ರವೃತ್ತಿಯಿಂದ ಮುಕ್ತಗೊಳಿಸಿದನು ಮತ್ತು ಪ್ರಭು ವಿಚಾರವನ್ನು ನೀಡಿ ಸುಖವನ್ನು ನೀಡಿದನು. ಇದುವೇ ದೀಪಾವಳಿಯಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಆಕಳಿಗೆ ತುಂಬಾ ಮಹತ್ವವಿದೆ. ಆಕಳನ್ನು ಮಾತೆಯೆಂದು ಸಹ ಸಂಬೋಧಿಸಲಾಗುತ್ತದೆ. ಆಕಳು ಸಾತ್ವಿಕಳಾಗಿರುವುದ–ರಿಂದ ಅವಳ ಪೂಜೆಯನ್ನು ಮಾಡಿ ಎಲ್ಲರೂ ಅವಳ ಸಾತ್ವಿಕ ಗುಣಗಳನ್ನು ಸ್ವೀಕರಿಸುವುದಿರುತ್ತದೆ. ಎಲ್ಲಿ ಗೋಮಾತೆಯ ಸಂರಕ್ಷಣೆ ಮತ್ತು ಸಂವರ್ಧನೆಯಾಗುತ್ತದೆಯೋ ಹಾಗೂ ಪೂಜ್ಯಭಾವದಿಂದ ಪೂಜಿಸಲಾಗುತ್ತದೆಯೋ, ಅಲ್ಲಿನ ವ್ಯಕ್ತಿಗಳು, ಆ ಸಮಾಜ ಮತ್ತು ಆ ರಾಷ್ಟ್ರದ ಸಮೃದ್ಧಿಯು ನಿಶ್ಚಿತವಾಗಿ ಆಗುತ್ತದೆ. ಇಂತಹ ಗೋಮಾತೆಯನ್ನು ಪೂಜೆಮಾಡಿ ದೀಪಾವಳಿ ಹಬ್ಬವನ್ನು ಆಚರಿಸಲಾಗುತ್ತದೆ.

ಧನತ್ರಯೋದಶಿಯಂದು ಹೊಸ ಬಂಗಾರವನ್ನು ಖರೀದಿಸುವ ರೂಢಿಯು ಪುರಾತನ ಕಾಲದಿಂದ ನಡೆದು ಬಂದಿದೆ. ಧನತ್ರಯೋದಶಿಯಂದು ಹೊಸ ಬಂಗಾರವನ್ನು ಖರೀದಿ ಮಾಡುವುದರಿಂದ ಮನೆಯಲ್ಲಿ ವರ್ಷವಿಡೀ ಧನಲಕ್ಷ್ಮೀಯು ವಾಸಿಸುತ್ತಾಳೆ ಎಂಬ ನಂಬಿಕೆ ಇದೆ. ಧನತ್ರಯೋದಶಿಯ ವರೆಗೆ ಲೆಕ್ಕಾಚಾರವನ್ನು ನೋಡಿ ಉಳಿದಿರುವ ಸಂಪತ್ತನ್ನು ಭಗವಂತನ ಕಾರ್ಯಕ್ಕಾಗಿ ಉಪಯೋಗಿಸಿದರೆ, ಸತ್‌ಕಾರ್ಯಕ್ಕಾಗಿ ಹಣವು ಖರ್ಚಾಗುವುದರಿಂದ ಧನಲಕ್ಷ್ಮೀಯ ರೂಪದಲ್ಲಿ ಮನೆಯಲ್ಲಿ ವಾಸಿಸುತ್ತಾಳೆ ಎಂಬ ನಂಬಿಕೆ ಇದೆ.

ವರ್ಷವಿಡೀ ಕಷ್ಟಪಟ್ಟು ಬೆವರು ಸುರಿಸಿ ಒಟ್ಟುಗೂಡಿಸಿದ, ಹಣದಲ್ಲಿನ 6ನೇ ಪಾಲನ್ನು ಭಗವಂತನ ಕಾರ್ಯಕ್ಕಾಗಿ ಖರ್ಚುಮಾಡಬೇಕೆಂದು ಧರ್ಮಶಾಸ್ತ್ರವು ಹೇಳುತ್ತದೆ. ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ವರ್ಷದ ಕೊನೆಯಲ್ಲಿ ತಮ್ಮ ಸಂಪೂರ್ಣ ಖಜಾನೆಯನ್ನು ಸತ್ಪಾತ್ರರಿಗೆ ದಾನ ಮಾಡಿ ಖಾಲಿ ಮಾಡುತ್ತಿದ್ದರು. ಆಗ ಅವರಿಗೆ ನಾವು ಧನ್ಯರಾದೆವೆಂದು ಅನಿಸುತ್ತಿತ್ತು. ಅದರಿಂದಾಗಿ ಜನತೆ ಹಾಗೂ ರಾಜನ ನಡುವಿನ ಸಂಬಂಧವು ಕೌಟುಂಬಿಕ ಸ್ವರೂಪದ್ದಾಗಿತ್ತು. ರಾಜನ ಖಜಾನೆಯು ನಿಜತೆಯದ್ದಾಗಿದ್ದು, ರಾಜನು ಕೇವಲ ಆ ಖಜಾನೆಯ ಸಂರಕ್ಷನಾಗಿರುತ್ತಿದ್ದನು. ಇದರಿಂದ ಜನರು ಸಹ ಯಾವುದೇ ಪ್ರತಿಬಂಧವಿಲ್ಲದೇ ತೆರಿಗೆಯನ್ನು ನೀಡುತ್ತಿದ್ದರು. ಸಹಜವಾಗಿಯೇ ಖಜಾನೆಯು ಪುನಃ ತುಂಬುತ್ತಿತ್ತು. ಧನವನ್ನು ಸತ್‌ಕಾರ್ಯಕ್ಕಾಗಿ ಉಪಯೋಗಿಸುವುದರಿಂದ ಆತ್ಮಫಲವು ಹೆಚ್ಚಾಗುತ್ತದೆ. ಹಣವೆಂದರೆ ಕೇವಲ ಧನವಾಗಿಲ್ಲ ಪಂಚಮಹಾಭೂತಗಳೇ ನಿಜವಾಗ ಧನಗಳಾಗಿವೆ. ಯಾವುದರಿಂದ ನಮ್ಮ ಜೀವನದ ಪೋಷಣೆಯು ಸುವ್ಯವಸ್ಥಿತವಾಗಿ ನಡೆಯುತ್ತದೆಯೋ ಅಂತಹ ಧನವನ್ನು ಪೂಜಿಸುತ್ತಾರೆ. ಶ್ರೀ ಸೂಕ್ತದಲ್ಲಿ ಭೂಮಿ, ಜಲ, ವಾಯು, ಅಗ್ನಿ, ಸೂರ್ಯ ಇವುಗಳನ್ನು ಧನವೆಂದೇ ಕರೆಯಲಾಗಿದೆ. ಯಾವ ಧನಕ್ಕೆ ನಿಜವಾದ ಅರ್ಥವಿದೆಯೋ ಅದುವೇ ನಿಜವಾದ ಲಕ್ಷ್ಮೀ.

ಕಾರಹುಣ್ಣಿಮೆ ಮತ್ತು ಆಶ್ವಯುಜ ಅಮಾವಾಸ್ಯೆಯಂದು ಲಕ್ಷ್ಮೀಯ ಪೂಜೆಯನ್ನು ಮಾಡುತ್ತಾರೆ. ಹುಣ್ಣಿಮೆ ಹಾಗೂ ಅಮಾವಾಸ್ಯೆ ಇವೆರಡೂ ಶುಭವೇ ಆಗಿವೆ ಎಂಬುದು ಹಿಂದಿನ ರಹಸ್ಯವಾಗಿದೆ. ಹಿರಣ್ಮಯಿ, ತೇಜಸ್ವಿ, ಜೀವನಪೋಷಕ ಹಾಗೂ ಚೈತನ್ಯಮಯಿಯಾದಂತಹ ಲಕ್ಷ್ಮೀಯನ್ನು ವಾದ್ಯಘೋಷಗಳ ಸಹಿತ ಪ್ರವೇಶದ್ವಾರದಿಂದ ಮನೆಯೊಳಗೆ ಅವಳ ವಾಸ್ತವ್ಯಕ್ಕೆ ಸ್ಥಾನ ಮಾಡಿ ಪೂಜೆ ಮಾಡುವುದೆಂದರೆ ಲಕ್ಷ್ಮೀಪೂಜೆ.

ದೀಪಾವಳಿಯಲ್ಲಿನ ಕಾರ್ತಿಕ ಮಾಸದ ಪಾಡ್ಯ ಅಂದರೆ, ಬಲಿಪಾಡ್ಯ ಈ ದಿನದಂದು ಭಗವಂತನು ವಾಮನ ರೂಪದಲ್ಲಿ ಅವತರಿಸಿ ಅರ್ವಸ್ವವನ್ನು ಅರ್ಪಿಸಿ ದಾಸನಾಗುವ ಸಿದ್ದತೆಯನ್ನೂ ತೋರಿಸಿದ್ದಾನೆ. ವಾಸ್ತವದಲ್ಲಿ ಬಲಿಯು ಒಬ್ಬ ಅಸುರ ಕುಲದವನಾಗಿದ್ದಾನೆ. ಆದರೆ ಅವನು ಉದಾರ ಮನಸ್ಸಿನಿಂದ ಭಗವಂತನಿಗೆ ಶರಣಾಗಿ ತನ್ನ ಸರ್ವಸ್ವವನ್ನು ಅರ್ಪಿಸಿದ್ದರಿಂದ ಭಗವಂತನು ಅವನಿಗೆ ಯೋಗ್ಯ ಮಾರ್ಗದರ್ಶನವನ್ನು ಮಾಡಿ ಅವನ ಜೀವನಕ್ಕೆ ಹೊಸ ಸ್ವರೂಪವನ್ನು ನೀಡಿ ಅವನನ್ನು ಉದ್ದರಿಸಿದನು. ಅವನ ರಾಜ್ಯದಲ್ಲಿ ಅಸುರೀ ವೃತ್ತಿಗೆ ಪೂರಕವಾದಂತಹ ಭೋಗಮಯ ವಿಚಾರಗಳನ್ನು ತೊಲಗಿಸಿ ಆ ಸ್ಥಾನದಲ್ಲಿ ತ್ಯಾಗದ ಭಾವನೆಯನ್ನು ಮೂಡಿಸಿ ಜನತೆಗೆ ದೈವೀವಿಚಾರಗಳನ್ನು ನೀಡಿ ಸುಖ ಹಾಗೂ ಸಮೃದ್ಧಿಯ ಜೀವನವನ್ನು ಪ್ರಾಧಾನಿಸಿದನು. ಈ ದಿನದಂದು ಈಶ್ವರೀ ಕಾರ್ಯವೆಂದು ಜನತೆಯ ಸೇವೆಯನ್ನು ಮಾಡುತ್ತಾ ದೇವತ್ವವನ್ನು ತಲುಪಿಸಿದ ಬಲಿಯ ಸ್ಮರಣೆಯನ್ನು ಮಾಡಬೇಕು. ಬಲಿಪಾಡ್ಯದಂದು ಬಲಿಯ ಪೂಜೆಯನ್ನು ಮಾಡುತ್ತಾರೆ. ಬಲಿಯು ರಾಕ್ಷಸ ಕುಲದಲ್ಲಿ ಜನ್ಮವೆತ್ತಿದರೂ ಅವನ ಪುಣ್ಯದಿಂದಾಗಿ ವಾಮನ ರೂಪದಲ್ಲಿ ಅವತರಿಸಿದ ಭಗವಂತನ ಕೃಪೆಯು ಅವನ ಮೇಲಾಯಿತು. ಅವನು ಸಾತ್ವಿಕ ಪ್ರವೃತ್ತಿಯುಳ್ಳ ದಾನಿರಾಜನಾದನು. ಪ್ರತಿಯೊಬ್ಬ ಮನುಷ್ಯನು ಪ್ರಾರಂಭದಲ್ಲಿ ಅಜ್ಞಾನಿಯಾಗಿರುವುದರಿಂದ ಅವನಿಗೆ ಕುಕರ್ಮಗಳು ಘಟಿಸುತ್ತಿರುತ್ತವೆ. ಆದರೆ ಜ್ಞಾನ ಹಾಗೂ ಈಶ್ವರೀ ಕೃಪೆಯಿಂದ ದೇವತ್ವವನ್ನು ತಲುಪಬಹುದು ಎಂಬುದು ಈ ಉದಾಹರಣೆಯಿಂದ ಕಂಡುಬರುತ್ತದೆ. ಈ ರೀತಿ ನಿರ್ಭಯತೆಯಿಂದ ಸತ್ಯರ್ಮವನ್ನು ಪಾಲಿಸಿದರೆ ಅವನಿಗೆ ಮೃತ್ಯು ಭಯವು ಇರುವುದಿಲ್ಲ

ಕೊನೆಯಲ್ಲಿ ಮನಸ್ಸಿನಲ್ಲಿರುವ ಮಾಲಿನ್ಯ ದೂರವಾಗಿ ಚಿತ್ತ ಶುದ್ಧಿಯಾಯಿತೆಂದು ಕೆಲವು ಕಡೆ ಪಂಚಮಿಯೆಂದು ಈ ದೀಪಾವಳಿಯನ್ನು ಸಮಾಪ್ತಿ ಮಾಡಲು ಪಂಚಮಿ ಪೂಜೆಯನ್ನು ಆಚರಿಸುತ್ತಾರೆ.

# ಸಹಕಾರಿ ಸಂಘಗಳು ಗ್ರಾಮೀಣ ಭಾರತದ ಹೃದಯದ ಮಿಡಿತವಾಗಿವೆ

– ಅರವಿಂದ ಕುಮಾರ ಸಿಂಗ್

– ಮೂಲ ಅನುವಾದ : ಶ್ರೀಮತಿ ಮಾಧುರಿ ದೇಶಪಾಂಡೆ

ಹಿಂದಿನ ಸಂಚಿಕೆಯಿಂದ ಮುಂದುವರೆದಿದೆ.

ಭಾರತದ ಸಹಕಾರಿ ಆಂದೋಲನದ ಒಂದು ಎತ್ತರವಾದ, ವಿಸ್ತೃತವಾದ ಗೌರವಶಾಲಿಯಾದ ಇತಿಹಾಸವಿದೆ. ಕಳೆದ ನೂರು ವರ್ಷಕ್ಕಿಂತಲೂ ಹೆಚ್ಚಿನ ಯಾತ್ರೆಯಲ್ಲಿ ಈ ಆಂದೋಲನವು ಬಹಳಷ್ಟು ಕ್ಷೇತ್ರಗಳಲ್ಲಿ ಹರಡಿದೆ ಮತ್ತು ಸಾಮಾಜಿಕ ಆರ್ಥಿಕ ಬದಲಾವಣೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ನಿರ್ವಹಿಸಿ ಕೊಡುಗೆಯನ್ನು ನೀಡಿದೆ. ಭಾರತೀಯ ಸಹಕಾರಿ ಕ್ಷೇತ್ರದಲ್ಲಿ ಪ್ರಪ್ರಥಮವಾಗಿ ನಿಲ್ಲುವ ಹೆಸರು ಅಮುಲ್ ದೇಶದ ಅತೀ ಪ್ರಮುಖ ಖಾದ್ಯೋತ್ಪನ್ನಗಳ ಬ್ರಾಂಡ್ ಆಗಿ ನಿಲ್ಲುತ್ತದೆ ಮತ್ತು ನಿರಂತರವಾಗಿ ಈ ಸಂಸ್ಥೆಯ ವಿಸ್ತರಣೆಯು ನಡೆಯುತ್ತಲೇ ಇದೆ. ಅಮುಲ್ ಸಂಸ್ಥೆಯಿಂದ ಮಧ್ಯಸ್ತಿಕೆದಾರರನ್ನು ನಿಲ್ಲಿಸಿ ಉತ್ಪಾದಕರು ಮತ್ತು ಗಾಹಕರ ನಡುವೆ ನೇರವಾದ ಸಂಪರ್ಕವನ್ನು ಉಂಟು ಮಾಲಾಯಿತು. ಖರೀದಿ, ಸಂಸ್ಕರಣ ಮತ್ತು ವಿತರಣೆ ಮಾರಾಟ ಇವಗಳೆಲ್ಲವು ಹಾಲು ಉತ್ಪಾದಕರ ಅಂದರೆ ರೈತರ ಮೂಲಕವೇ ಆಗುತ್ತದೆ. ಇದರ ದೃಢವಾದ ಅಡಿಪಾಯವನ್ನು ಸಂಸ್ಥಾಪಕ ಅಧ್ಯಕ್ಷರಾದ ತ್ರಿಭುವನ ದಾಸ ಪಟೇಲರು ಮಾಡಿದರು ಮತ್ತು ಮಹಾನ್ ನಾಯಕರಾದ ಶ್ರೀ ವರ್ಗೀಸ್ ಕುರಿಯನ್‌ರವರು ವಿಸ್ತರಿಸಿದರು. ಇಂದು ಭಾರತವು ಹಾಲು ಉತ್ಪಾದಕರ ಗಣತಿಯಲ್ಲಿ ಮೊದಲನೆ ಸ್ಥಾನದಲ್ಲಿದೆ, ಇದಕ್ಕೆ ಹೆಚ್ಚಿನ ಪ್ರಮಾಣದ ಕೊಡುಗೆ ಮುಟ್ಟಿದೆ. 2018–19ನೇ ಸಾಲಿನಲ್ಲಿ ಹಾಲು ಉತ್ಪಾದಕರ ಖರೀದಿಯು ಅಂದಾಜು 507.5 ಲಕ್ಷ ಕಿಲೋಗ್ರಾಮ್‌ನವರೆಗೂ ಮುಟ್ಟಿದೆ. 2014–15ನೇ ಸಾಲಿನಲ್ಲಿ 378.3 ಲಕ್ಷ ಕಿಲೋಗ್ರಾಮ್ ಇತ್ತು. ಈ ಸಂಖ್ಯೆಗಳು ಸಹಕಾರಿ ಕ್ಷೇತ್ರದ ಶಕ್ತಿಯನ್ನು ತೋರಿಸುತ್ತದೆ.

ಭಾರತದಲ್ಲಿ ಸಹಕಾರಿ ಕ್ಷೇತ್ರದ ಸಫಲತೆಯ ಕತೆಗಳ ಬಗೆಗೆ ಚರ್ಚೆಗಳು ನಡೆಯುತ್ತಿರುತ್ತವೆ. ಈ ರೀತಿಯ ಚರ್ಚೆಗಳು ನಡೆದಾಗ ಇಫ್ಕೋದ ಮಾತು ಬಂದೇ ಬರುತ್ತದೆ. ಇದನ್ನು ಮಾಜಿ ರಾಷ್ಟ್ರಪತಿ ಮತ್ತು ಭಾರತರತ್ನ ಎಪಿಜೆ ಅಬ್ದುಲ್ ಕಲಾಂ ಅವರು ಭಾರತೀಯ ಸಹಕಾರ ಕ್ಷೇತ್ರದಲ್ಲಿ ಒಂದು ಮಾದರಿ ಎಂದು ತಿಳಿದಿದ್ದರು. ಇಫ್ಕೋ ಇಂದು ಭಾರತದ 500 ದೊಡ್ಡ ಫಾರ್ಚ್ಯುನ್ ಕಂಪನಿಗಳ ಪಟ್ಟಿಯಲ್ಲಿ 37ನೇ ಸ್ಥಾನದಲ್ಲಿದೆ. ಇದು 36,000 ಸದಸ್ಯ ಸಹಕಾರಿ ಸಮಿತಿಗಳ ಸಹಾಯದೊಂದಿಗೆ ನೇರವಾಗಿ ಐದು ಕೋಟಿ ರೈತರೊಂದಿಗೆ ಸಂಪರ್ಕವನ್ನು ಹೊಂದಿದೆ. 2012ರಲ್ಲಿ ಇದು ಪ್ರಪಂಚದ ನೂರು ಉನ್ನತ ಸಹಕಾರಿ ಸಮಿತಿಗಳಲ್ಲಿ ಒಂದಾಗಿತ್ತು. ಅಲ್ಲಿ ಸಂಯುಕ್ತ ರಾಷ್ಟ್ರಗಳ ಇಂಟರ್ ನ್ಯಾಷನಲ್ ಕೋ ಆಪರೇಟಿವ್ ಅಲಯನ್ಸ್ ವತಿಯಿಂದ ಜಾರಿಗೊಳಿಸಿದ ವರದಿಯ ಪ್ರಕಾರ ಇದು 95ನೇ ಸ್ಥಾನದಲ್ಲಿತ್ತು. ಖಾದ್ಯವಸ್ತುಗಳ ಸಂಸ್ಕರಣೆಯ ಉದ್ಯೋಗದಲ್ಲಿ ಇದು ಪ್ರಪಂಚದ 25 ಅತ್ಯುನ್ನತ ಸಹಕಾರಿ ಸಮಿತಿಗಳಲ್ಲಿ 20ನೇ ಸ್ಥಾನ ದೊರೆತಿತು.

ಇಫ್ಕೋ ವಿಶ್ವದಲ್ಲಿ ಬಹಳದೊಡ್ಡ ಸಹಕಾರಿ ರಸಗೊಬ್ಬರದ ಎಂಟ–ರ್‌ಪ್ರೈಸಸ್ ಆಗಿದೆ. ಇಫ್ಕೋ ರೈತರ ಆದಾಯವನ್ನು ಹೆಚ್ಚಿಸಲು ಪ್ರೋ॥ ಎಮ್ ಎಸ್ ಸ್ವಾಮಿನಾಥನ್ ಅವರ ಸಲಹೆಯಂತೆ ಪ್ರತಿಯೊಂದು ಹನಿ ಹೆಚ್ಚಿನ ಬೆಳೆಗೆ, ಕೃಷಿ ವೆಚ್ಚದಲ್ಲಿ ಕಡಿಮೆ, ಬೆಳೆಗಳ ಗೋದಾಮು, ಖಾದ್ಯಸಂಸ್ಕರಣೆ, ಈ ಕೃಷಿ ಮಾರುಕಟ್ಟೆ, ಫಸಲು ಭೀಮಾ ಯೋಜನೆ ಮತ್ತು ತೋಟಗಾರಿಕೆ, ಏಕೀಕೃತ ಕೃಷಿ, ಪಶುಪಾಲನೆ, ಮೀನು ಸಕಾಗಣೆ, ಮತ್ತು ಕೋಳಿ ಸಾಕಣೆ ಇಂತಹ ವಿಷಯಗಳ ಬಗೆಗೆ ಗಮನ ಹರಿಸಿ ರೈತರ ಕಲ್ಯಾಣದ ಹಾದಿಯಲ್ಲಿ ಕ್ರಮವನ್ನು ಕೈಗೊಳ್ಳಲಾಗಿದೆ. ಇದಕ್ಕಾಗಿ 24ತಾಸುಗಳ ಕಾಲ್ ಸೆಂಟರ್‌ನ್ನು ಪ್ರಾರಂಭಿಸಲಾಗಿದೆ ಇದರ ಮೂಲಕ 12 ಭಾಷೆಗಳಲ್ಲಿ ಯಾವುದೇ ರೈತರು ತಮ್ಮ ಸಮಸ್ಯೆಗಳನ್ನು ಹೇಳಿ ಪರಿಹಾರವನ್ನು ಪಡೆದುಕೊಳ್ಳಬಹುದಾಗಿದೆ. ಕೌಶಲ್ಯಾಭಿವೃದ್ಧಿಗಾಗಿ ಇಫ್ಕೋ ದಿಂದ ಇಫಕೋ ಯುವ ವೇದಿಕೆಯನ್ನು ಪ್ರಾರಂಭಿಸಿತು. ಎರಡು ದೊಡ್ಡ ಸಂಸ್ಥೆಗಳು ರೈತರ ಮತ್ತು ಪಶುಸಂಗೋಪನೆಯ ಸಲುವಾಗಿ ಸಾಧ್ಯವಾದಷ್ಟು ಎಲ್ಲ ಕೆಲಸಗಳನ್ನು ಮಾಡುತ್ತಲಿದೆ.

ಪ್ರಪಂಚದ ಸಹಕಾರಿ ಸಂಸ್ಥೆಗಳ ಅಭಿವೃದ್ಧಿಯ ಇತಿಹಾಸವು ಎರಡು ಶತಕಗಳಷ್ಟು ಹಳೆಯದಾಗಿದೆ. ಪ್ರಪಂಚದ ಎಲ್ಲ ಸಹಕಾರಿ ಸಂಸ್ಥೆಗಳಿಂದ ಸಣ್ಣ ಹಿಡುವಳಿದಾರರು ಮತ್ತು ಬಡವರಿಗೆ ಬಹಳ ಸಹಾಯವು ದೊರೆತಿದೆ. ಭಾರತದಲ್ಲೂ ಕೂಡ ಸಹಕಾರಿ ಆಂದೋಲನದ ಪ್ರಾರಂಭವು ರೈತರ ಮೇಲೆ ಸಾಹುಕಾರರ ದಬ್ಬಾಳಿಕೆಯನ್ನು ತಡೆಯಲು ಆರಂಭಿಸಿದ ಆಂದೋಲನವಾಗಿದೆ. ಸ್ವತಂತ್ರ್ಯದ ನಂತರ ಆರ್ಥಿಕ ವಿಕಾಸದ ಸಲುವಾಗಿ ಸಹಕಾರಿ ಕ್ಷೇತ್ರದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಕೇತ್ರಗಳಲ್ಲಿ ಶೀಘ್ರವಾಗಿ ಬೆಳೆಯುತ್ತಲಿದೆ. ಸರಕಾರವು ಸಹಕಾರಿ ಸಂಸ್ಥೆಗಳ ..ಷೇರುಗಳಲ್ಲಿ ಬಂಡವಾಳದಲ್ಲಿ ಭಾಗೀದಾರಿಕೆಯನ್ನು ಮಾಡುತ್ತದೆ. ಕೇಂದ್ರ ಸರಕಾರವು ಸಹಕಾರಿ ಕ್ಷೇತ್ರದ ವಿಕಾಸಕ್ಕೆ 1956, 1977 ಮತ್ತು 2000ದಲ್ಲಿ ಸಹಕಾರಿ ನೀತಿಗಳನ್ನು ಘೋಷಣೆ ಮಾಡಲಾಗಿದೆ. ಕೇಂದ್ರ ಸರಕಾರವು ಬಹುರಾಜ್ಯ ಸಹಕಾರಿ ಸಮಿತಿ ಅಧಿನಿಯಮ 2002ರ ಅಡಿಯಲ್ಲಿ ಸ್ವಾಯತ್ತತೆ ಮತ್ತು ಲೋಕ ತಾಂತ್ರಿಕತೆ ನಿರ್ವಹಣೆಯ ಕೊಡುಗೆಯನ್ನು ಕೊಡುವ ನಿಟ್ಟಿನಲ್ಲಿ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಭಾರತ ಸರಕಾರ ಕೇಂದ್ರೀಯ ಯೋಜನೆಯ ಮಾಧ್ಯಮದಿಂದ ಸಹಕಾರಿ ಸಮಿತಿಗಳ ಪಾತ್ರಕ್ಕೆ ಮಹತ್ವವು ಸಿಗುತ್ತಿದೆ. ವಿಭಿನ್ನ ಸಹಕಾರಿ ಸಮಿತಿಗಳ ಸದಸ್ಯರುಗಳು ಮತ್ತು ಕೆಲಸಗಾರರಿಗೆ ತರಬೇತಿಯ ಜೊತೆಗೆ ಬೇರೆ ಬೇರೆ ಕಾರ್ಯಗಳನ್ನು ನಡೆಸಲಾಗುತ್ತದೆ. ರಾಷ್ಟ್ರೀಯ ಸಹಕಾರಿ ವಿಕಾಸ ನಿಗಮ ಅಂದರೆ ಎನ್‌ಎಸ್‌ಡಿಸಿ ಕೃಷಿ ಕ್ಷೇತ್ರದಲ್ಲಿ ಸಹಕಾರಿ ಸಮಿತಿಗಳ ಮೂಲಕ ಸುಗ್ಗಿಯ ನಂತರ ನಡೆಯುವ

ಕಾರ್ಯಗಳನ್ನು ಹೆಚ್ಚಿಸಲು ಸಹಾಯತೆಯನ್ನು ನೀಡುತ್ತದೆ. ಇದರಲ್ಲಿ ಕೃಷಿ ಉತ್ಪನ್ನಗಳ ಪೂರೈಕೆಯಲ್ಲದೇ ಕೃಷಿ ಉತ್ಪನ್ನಗಳ ಮಾರುಕಟ್ಟೆ, ಶೇಖರಣೆ, ಸಂಸ್ಕರಣೆಗಳೂ ಕೂಡಿವೆ. ಆವರ್ತಕ ಸಾಲಗಳಲ್ಲದೇ ರಾಜ್ಯಗಳ ಶ್ರೇಣಿಯ ಆಧಾರದ ಮೇಲೆ ಸಹಕಾರಿ ಸಮಿತಿಗಳಿಗೆ 15ರಿಂದ 25 ಶೇಕಡಾ ಸಬ್ಸಿಡಿಗಳನ್ನು ಕೂಡ ಕೊಡಲಾಗುತ್ತದೆ. ಸರಕಾರವು ನೆಫೆಡ್‌ನ ಖರೀದಿಯ ಕೆಲಸದಲ್ಲಿ ಖಾತರಿಯನ್ನು ಕೊಡುತ್ತದೆ.

ಆದರೆ ಸಹಕಾರಿ ಕ್ಷೇತ್ರದ ವಿಚಾರದಲ್ಲಿ ಹಳ್ಳಿಗಳು ಮತ್ತು ರೈತರಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು 1967ರವರೆಗೂ ಇದನ್ನು ಯೋಜನೆ ಪ್ರಕ್ರಿಯೆಗಳಲ್ಲಿ ಸಂಪೂರ್ಣ ಮಹತ್ವವನ್ನು ನೀಡಲಾಗುತ್ತಿತ್ತು. ನಂತರ ಪ್ರಾಥಮಿಕತೆಗಳು ಬದಲಾಗುತ್ತಾ ಹೋದವು ಸಹಕಾರಿ ಕ್ಷೇತ್ರದಲ್ಲಿ ಸವಾಲುಗಳು ಹೆಚ್ಚುತ್ತಾ ಹೋದವು. ಸಹಕಾರಿ ಕ್ಷೇತ್ರದ ಎಲ್ಲ ದಿಗ್ಗಜರ ದೃಷ್ಟಿಯಲ್ಲಿ ರಾಜಕೀಯ ಪಕ್ಷಗಳು ಸಹಕಾರಿ ಕ್ಷೇತ್ರವನ್ನು ತಮ್ಮ ಹಿಡಿತದಲ್ಲಿ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತಲಿದ್ದಾರೆ ಎಂದು ಅಭಿಪ್ರಾಯವನ್ನು ಪಡುತ್ತಾರೆ. ಕೆಲವು ಸ್ಥಳಗಳಲ್ಲಿ ಮಂತ್ರಿಗಳು ಯಾರ ಸರಕಾರವಿದೆಯೋ ಅವರಿಗೇ ಸಹಕಾರ ಎಂಬ ಮಾತನ್ನು ಹೇಳಿದುದನ್ನು ಕೇಳಬಹುದಾಗಿದೆ. ಸಹಕಾರಿ ರೆಜಿಸ್ಟ್ರಾರ್‌ರವರು ಮೊದಲು ಮಾರ್ಗದರ್ಶಕರ ಪಾತ್ರವನ್ನು ನಿರ್ವಹಿಸುತ್ತಿದ್ದರು ಆದರೆ ಈಗ ನಿಯಂತ್ರಕರ ಕೆಲಸವನ್ನು ಮಾಡುತ್ತಲಿದೆ. ಇದರಿಂದ ಸಹಕಾರಿ ಸಂಸ್ಥೆಗಳ ಸ್ವಾಯತ್ತತೆ ಮತ್ತು ಸ್ವರೂಪಗಳ ಮೇಲೆ ಪರಿಣಾಮ ಬೀರಿದೆ. ಕೆಲವು ದಿಗ್ಗಜರು ಯೋಜನಾಕಾರರು ಮತ್ತು ಮಾಧ್ಯಮದ ಮಿತ್ರರಿಗೆ ಸಹಕಾರಿ ಕ್ಷೇತ್ರದ ಶಕ್ತಿ ಮತ್ತು ಯೋಗ್ಯತೆಯ ಬಗೆಗೆ ತಿಳುವಳಿಕೆ ಇಲ್ಲ. 55 ಪ್ರಕಾರದ ಸಹಕಾರಿ ಸಮಿತಿಗಳು ಹಲವು ಮಟ್ಟದ ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದೆ ಮತ್ತು ಇವುಗಳ ಮಾಧ್ಯಮದಿಂದ ಹೆಚ್ಚಿನ ಸಾಮಾಜಿಕ ಬಂಡವಾಳದ ಸೃಜನವಾಗಿವೆ. 97ನೇ ಸಂವಿಧಾನದ ಸಂಶೋಧನೆಯ ನಂತರ ಪರಿಸ್ಥಿತಿಯು ಬದಲಾಗಿದೆ. ಆದರೂ ಕೂಡ ಸಹಕಾರಿ ಮಟ್ಟದಲ್ಲಿ ಸಂಪೂರ್ಣ ದೇಶದಲ್ಲಿ ಸಹಕಾರಿ ಕಾನೂನು ಮತ್ತು ನಿರ್ದೇಶನಗಳ ಅಧ್ಯಯನವನ್ನು ಮಾಡಲಾಗುತ್ತಿದೆ. ಮತ್ತು ಮುಂಬರುವ ದಿನಗಳಲ್ಲಿ ಇವುಗಳ ವಿಕಾಸದ ಹಾದಿಯಲ್ಲಿ ಬರುವ ಕಂಟಕಗಳನ್ನು ದೂರ ಮಾಡುವ ವಿಚಾರಗಳ ಬಗೆಗೆ ಚಿಂತನೆಯನ್ನು ನಡೆಸಲಾಗುತ್ತಿದೆ.

ಆದರೆ ಈ ಚಿತ್ರಣಕ್ಕೆ ಇನ್ನೊಂದು ಮುಖವೂ ಇದೆ, ಹಲವು ರಾಜ್ಯಗಳಲ್ಲಿ ಸಹಕಾರಿ ವಲಯದ ನಾಯಕತ್ವವು ಸದೃಢವಾಗಿಲ್ಲ ಮತ್ತು ಅನಿಯಮಿತತೆ ಮತ್ತು ಹಗರಣಗಳಿಂದ ಇವುಗಳ ಸ್ವರೂಪಕ್ಕೆ ಧಕ್ಕೆಯುಂಟಾಗಿದೆ. ಇನ್ನೂ ಹಲವು ರಾಜ್ಯಗಳಲ್ಲಿ ಸಹಕಾರಿ ಕ್ಷೇತ್ರದ ಬೆಳವಣಿಗೆಯ ಬಗೆಗೆ ಸಕಾರಾತ್ಮಕ ನಿಲುವನ್ನು ತೆಗೆದುಕೊಳ್ಳದೇ ಇರುವುದಾಗಿದೆ ಮತ್ತು ಈ ಕಾರಣದಿಂದ ಸಹಕಾರಿ ಕ್ಷೇತ್ರವು ತುಳಿತಕ್ಕೆ ಒಳಗಾಗಿದೆ. ಹಲವು ರಾಜ್ಯಗಳಲ್ಲಿ ಖಾಸಗಿ ಕ್ಷೇತ್ರದಲ್ಲಿ ಸಹಕಾರಿ ವಲಯದಲ್ಲಿ ದರಗಳು ಏರುತ್ತ ಹೆಚ್ಚಾಗುತ್ತಿದೆ. ಮತ್ತು ಅಧಿಕಾರಿಗಳ ಪ್ರಾಬಲ್ಯದ ನಡವಳಿಕೆಯೂ ಕೂಡ ಸರಿಯಾದುದಲ್ಲ. ಖಾಸಗಿ ಮತ್ತು ಸಂಸ್ಥೆಗಳಾಗಿ ಮಾರ್ಪಡಾಗಿರುವ ಎಲ್ಲ ನೀತಿಗಳನ್ನು ಉಪಯೋಗಿಸಿ ಸ್ಥಾಪಿತವಾಗಿರುವ ಸಹಕಾರ ಸಂಸ್ಥೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸಲಾಗುತ್ತಿದೆ. ಆದರೂ ಕೂಡ ಎಲ್ಲ ಹೊಸ ಕ್ಷೇತ್ರಗಳಲ್ಲಿ ಸಹಕಾರಿ ಆಂದೋಲನ ಹೊಸ ಹುಮ್ಮಸ್ಸಿನೊಂದಿಗೆ ನಿಲ್ಲತ್ತಲಿದೆ. ಮೀನು ಸಾಕಣೆ, ಪಶುಸಂಗೋಪನೆ, ಜೇನು ಸಾಕಣೆ, ಪ್ರವಾಸೋದ್ಯಮ, ಮತ್ತು ಜಲಶಕ್ತಿ ಉತ್ಪಾದನೆ ಇಂತಹ ಚಟುವಟಿಕೆಗಳಲ್ಲಿ ಇವರುಗಳು ತಮ್ಮ ಇರುವಿಕೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಲಿದ್ದಾರೆ, ಇವುಗಳಲ್ಲಿ ಬೆಳೆಯುವ ವ್ಯಾಪಕ ಸಂಭಾವನೆಯನ್ನು ಕಾಣಬಹುದಾಗಿದೆ. ಹಲವು ಸಹಕಾರ ಸಂಸ್ಥೆಗಳು ಸಂಚಾರ ಮತ್ತು ಸೂಚನಾ ಮಾಧ್ಯಮದಲ್ಲಿ ಉಂಟಾಗಿರುವ ಕ್ರಾಂತಿಯ ಸಂಪೂರ್ಣ ಲಾಭವನ್ನು ಪಡೆಯುತ್ತಲಿದ್ದಾರೆ, ವಿವಿಧ ಮೊಬೈಲ್ ಅಪ್ಲಿಕೇಷನ್‌ಗಳನ್ನು ತಮ್ಮ ಸಂಸ್ಥೆಯ ಸದಸ್ಯರುಗಳ ಉಪಯೋಗಕ್ಕೆ ಬಳಸಲಾಗುತ್ತಿದೆ. ಇದರಿಂದ ಪಾರದರ್ಶಕತೆ ಮತ್ತು ಸದೃಢತೆಯನ್ನು ಮತ್ತು ವಿಶ್ವಾಸವನ್ನು ಪಡೆಯಬಹುದಾಗಿದೆ. ಜೈವಿಕ ಕೃಷಿಯ ಕೆಲವು ಕ್ಷೇತ್ರಗಳಲ್ಲೂ ಸಹಕಾರಿ ಕ್ಷೇತ್ರವನ್ನು ಮುಂದುವರೆಸುವ ಪ್ರಯತ್ನವನ್ನು ಮಾಡಬಹುದಾಗಿದೆ.

ಸಹಕಾರಿ ಸಂಸ್ಥೆಗಳು ಸಮಾಜದ ಬಹಳ ದುರ್ಬಲ ವರ್ಗದ ಜೀವನ ಮಟ್ಟವನ್ನು ಉನ್ನತ ಮಟ್ಟಕ್ಕೆ ಏರಿಸುವುದರ ಜೊತೆಗೆ ಅವರ ಮೇಲೆ ಆಗುತ್ತಿರುವ ದಬ್ಬಾಳಿಕೆಯನ್ನು ತಡೆಯುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಲಿದೆ. ಡೈರಿ ಸಹಕಾರಿ ಸಂಸ್ಥೆಗಳಿಂದ ಸಾವಿರಾರು ಮಹಿಳೆಯರ ಜೀವನ ಶೈಲಿಯನ್ನು ಬದಲಾಯಿಸಿದೆ, ಈ ಕ್ಷೇತ್ರದಲ್ಲಿ ದುರ್ಬಲ ಮಹಿಳೆಯರನ್ನು ಸಬಲರನ್ನಾಗಿ ಮಾಡಿದ ಅಸಂಖ್ಯ ಕತೆಗಳಿವೆ. ಸಣ್ಣ ಹಿಡುವಳಿದಾರ ರೈತರನ್ನು ಅಲ್ಪಾವಧಿ ಕೃಷಿಗೆ ಸಂಬಂಧಿಸಿದ ಅವಶ್ಯಕತೆಗಳ ಪೂರೈಕೆಗೆ ಕಡಿಮೆದರದಲ್ಲಿ ಸಾಲವನ್ನು ನೀಡಿ ಸಾಹುಕಾರರ ಶ್ರೀಮಂತರ ಹಿಡಿತದಿಂದ ಬಿಡಿಸುವಲ್ಲಿ ಸಹಾಯಕವಾಗಿವೆ. ಅದೇ ಆದಿವಾಸಿ ಜನರ ಬುಡಕಟ್ಟು ಜನಾಂಗಲ್ಲೂ ಕೂಡ ಸಹಕಾರಿ ಸಂಸ್ಥೆಗಳ ಸ್ವರೂಪವು ಚಿತ್ರಣವನ್ನು ಬದಲಿಸಿದೆ.

ಬುಡಕಟ್ಟು ಜನರಿಗೆ ಸಣ್ಣ ಅರಣ್ಯೋತ್ಪಾದಕಗಳೇ ಬಹಳ ದೊಡ್ಡ ಆಧಾರವಾಗಿದೆ. ಇವರುಗಳು ತಮ್ಮ ಪರಿವಾರದೊಂದಿಗೆ ಹೋಗಿ ಕಾಡಿನಲ್ಲಿ ಸಿಗುವ ಈ ಉತ್ಪನ್ನಗಳನ್ನು ಕೂಡಿಸಿಕೊಂಡು ಆಯ್ದುಕೊಂಡು ಓಣಿಗಳಲ್ಲಿ ಮಾರುಕಟ್ಟೆಗಳಲ್ಲಿ ಮಾಡಿ ಕಾಸು ಬೀಡಿಗಾಸಿಗೆ ಮಾರುತ್ತಾರೆ ಮತ್ತು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಾರೆ. ಭಾರತದಲ್ಲಿ ಅಂದಾಜು ಒಂದು ಲಕ್ಷ ಕೋಟಿ ರೂಪಾಯಿಯಷ್ಟು ಅರಣ್ಯೋತ್ಪಾದಕಗಳು ಸಿಗುತ್ತವೆ. ಐದು ಸಾವಿರಕ್ಕೂ ಹೆಚ್ಚು ಆದಿವಾಸಿ ಮಾರುಕಟ್ಟೆಗಳಲ್ಲಿ ಮಧ್ಯಸ್ಥಗಾರರ ಮೂಲಕ ಮತ್ತು ಭ್ರಷ್ಟ ವ್ಯಾಪಾರಿಗಳಿಂದ ಈ ವ್ಯಾಪಾರಿಗಳ ಶೋಷಣೆಯನ್ನು ಮಾಡಲಾಗುತ್ತದೆ. ಆದರೆ ಭಾರತೀಯ ಬುಡಕಟ್ಟು ಜನಾಂಗದ ಸಹಕಾರಿ ಮಾರುಕಟ್ಟೆ ವಿಕಾಸ ಸಂಘ ಅಂದರೆ ಟ್ರಾಡ್‌ಫೆಡ್‌ದ ಸಮರ್ಥನೆಯನ್ನು ಮಾಡುವುದರಿಂದ ಅವರ ಪ್ರಪಂಚದಲ್ಲಿ ಅನೇಕ ಬದಲಾವಣೆಯನ್ನು ತಂದಿದೆ. ಅರಣ್ಯದ ಜೇನುತುಪ್ಪ,ಚಿರೋಂಜಿ, ಮಹುವಾದ ಹೂವು ಮತ್ತು ಬೀಜ, ಹರಡ, ಹುಣಸೆ

ಹಣ್ಣು, ಮರಗೆಣಸು, ಗುಗ್ಗಲ ಮತ್ತು ಅಂಟು ಮೊದಲಾದ 24 ಪದಾರ್ಥಗಳ ಉತ್ಪಾದನೆಗೆ ಸಮರ್ಥನೆಯ ಮೌಲ್ಯವನ್ನು ನೀಡುವ ಯೋಜನೆಯನ್ನು ಅಳವಡಿಸಲು ಜೊತೆಗೆ ಸಂಸ್ಕರಣದ ಸಲುವಾಗಿ ಕ್ರಮವನ್ನು ಕೈಗೊಳಗಳಲಾಗುತ್ತಿದೆ

ಇಂದು ಸರಕಾರದ ದೃಷ್ಟಿ 2022ರವರಗೆ ರೈತರ ಆದಾಯವನ್ನು ದುಪ್ಪಟ್ಟು ಮಾಡುವುದಾಗಿದೆ. ಇದಕ್ಕಾಗಿ ಎಲ್ಲರೀತಿಯ ಪ್ರಯಾಸವನ್ನು ಮಾಡಲಾಗುತ್ತಿದೆ. ಆದರೆ ಸಹಕಾರಿ ಕ್ಷೇತ್ರವು ಈ ಕನಸಿಗೆ ರೆಕ್ಕೆಗಳನ್ನು ನೀಡಬಲ್ಲದಾಗಿದೆ. ನಗರಗಳಲ್ಲಿ ಯಾವ ಪ್ರಮಾಣದಲ್ಲಿ ವಿಕಾಸವಾಗುತ್ತಿದೆಯೋ, ಹಾಗೇ ಗ್ರಾಮೀಣ ಪ್ರದೇಶದಲ್ಲಿ ಅದೇ ರೀತಿಯಾಗಿ ಅಸಮಾನತೆಯ ಪ್ರಮಾಣವು ಹೆಚ್ಚುತ್ತಲಿದೆ. ಸ್ವಾತಂತ್ರ್ಯವು ದೊರೆತಾಗ ಭಾರತದ ಜನಸಂಖ್ಯೆ 30 ಕೋಟಿ ಇತ್ತು ಮತ್ತು 82 ಶೇಕಡಾ ಜನರು ಹಳ್ಳಿಗಳಲ್ಲಿ ವಾಸವಾಗಿದ್ದರು ಭಾರತವು ಆಗ ವಾಸ್ತವವಾಗಿ ಕೃಷಿ ಪ್ರಧಾನ ದೇಶವಾಗಿತ್ತು. ಅದರ ಆರ್ಥಿಕ ವ್ಯವಸ್ಥೆಯು ಕೃಷಿಯ ಉತ್ಪಾದನೆಗಳ ಮೇಲೆ ಆಧಾರಿತವಾಗಿತ್ತು. ನಮ್ಮ ಜೆಡಿಪಿ ಯ 50 ಶೇಕಡಾ ಕೊಡುಗೆಯು ಕೃಷಿ ಉತ್ಪನ್ನಗಳಿಂದಲೇ ಆಗಿತ್ತು. ಆಗ ದೇಶದ ಕಾರ್ಯಶಕ್ತಿ 72 ಶೇಕಡಾಕ್ಕಿಂತ ಹೆಚ್ಚಿನ ಭಾಗವು ಕೃಷಿಯಲ್ಲೇ ತೊಡಗಿರುತ್ತಿತ್ತು, ಆದರ ಕಾಟೇಜ್ ಕೈಗಾರಿಕೆಗಳಿಂದ ಶೇಕಡಾ 11 ಮತ್ತು ದೊಡ್ಡ ಕೈಗಾರಿಕೆಗಳಿಂದ 20 ಶೇಕಡಾ ಕಾರ್ಮಿಕರು ತೊಡಗಿಕೊಂಡಿದ್ದಾರೆ.

ಇಂದು ನಮ್ಮ ಜನಸಂಖ್ಯೆ ಸುಮಾರು 132 ಕೋಟಿಗೆ ತಲುಪಿದೆ. ಇದೇ ವೇಗದಲ್ಲಿ ಹೋಗುತ್ತಿದೆ ಚೀನವನ್ನು ಹಿಂದಿಕ್ಕುವುದರಲ್ಲಿ ಸಂಶಯವೇ ಇಲ್ಲ. ಈಗಲೂ ಎಲ್ಲರೀತಿಯ ಪ್ರಯತ್ನಗಳ ನಂತರವೂ ನಮ್ಮ ಶೇಕಡಾ 58 ಜನರು ಕೃಷಿಯನ್ನೇ ತಮ್ಮ ಆದಾಯದ ಮಾರ್ಗವನ್ನಾಗಿ ಹೊಂದಿದ್ದಾರೆ. ಆದರೆ ಜೆಡಿಪಿಯಲ್ಲಿ ಕೃಷಿಯ ಕೊಡುಗೆ ಇಳಿಮುಖವಾಗಿ 16 ಶೇಕಡಾ ಆಗಿದೆ. ಸ್ವಾತಂತ್ರ್ಯದ ನಂತರ ಬಹಳ ವರ್ಷಗಳವರೆಗೂ ಕೃಷಿ, ಬೇಸಾಯವೇ ಪ್ರಮುಖ ವೃತ್ತಿ ಮತ್ತು ಆದಾಯದ ಮಾಧ್ಯಮವಾಗಿತ್ತು ಮತ್ತು ಗೌರವಪೂರ್ಣವಾದ ಉದ್ಯೋಗವಾಗಿತ್ತ. ಆದರೆ ಇಂದಿನ ದಿನಗಳಲ್ಲಿ ಕೃಷಿಯಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ರೈತರು ಮತ್ತು ಇತರ ಸಂಗಠಿತ ವರ್ಗದ ಕೆಲಸಗಳ ನಡುವಿನ ಅಂತರವು 1970ರ ದಶಕದಲ್ಲಿ 1:2 ಇತ್ತು ಈಗ ಅದು ಹೆಚ್ಚಾಗಿ 1:8 ಆಗಿದೆ. ಸರ್ವ ಯುವಜನತೆಯು ಕೃಷಿಯಿಂದ ದೂರ ಓಡುತ್ತಿದೆ ಮತ್ತು ನಗರದ ಪಾಲಾಗುತ್ತಿದ್ದಾರೆ. ಕೃಷಿ ಕ್ಷೇತ್ರದ ಅಪಾಯವು ಮೊದಲಿಗಿಂತ ಹೆಚ್ಚಾಗಿದೆ. ಆದ್ದರಿಂದಲೇ ಬೇಕಾದಷ್ಟು ಪ್ರಗತಿಯ ನಂತರವೂ ಕೃಷಿ ಕ್ಷೇತ್ರವು ಅನೇಕ ಸವಾಲುಗಳಿಂದ ಆವರಿಸಲ್ಪಟ್ಟಿದೆ. ಕೃಷಿ ಜಮೀನು ಸರಾಸರಿ 14 ಹೆಕ್ಟೇರ್‌ವರೆಗೂ ಸ್ಥಿರವಾಗಿದೆ, ಆದರೆ ಹಲವು ಪ್ರದೇಶಗಳಲ್ಲಿ ನೀರಿನ ಅಭಾವವು ಹೆಚ್ಚುತ್ತಿದೆ. ಹಸಿರು ಕ್ರಾಂತಿಯನ್ನು ಹೊಂದಿದ ಪ್ರದೇಶಗಳು ಸಮೃದ್ಧವೆನಿಸಿಕೊಳ್ಳುತ್ತಿದ್ದ ಪ್ರದೇಶಗಳಲ್ಲಿಯೇ ರೈತರು ಅಸಂತುಷ್ಟರಾದಾಗ ಮಿಕ್ಕ ಪ್ರದೇಶಗಳ ಬಗೆಗೆ ಮಾತನಾಡುವುದರಲ್ಲಿ ಅರ್ಥವಿಲ್ಲ ಅಲ್ಲಿಯ ಪರಿಸ್ಥಿತಿಯ ಚಿತ್ರಣವನ್ನು ನಾವುಗಳೇ ಮಾಡಿಕೊಳ್ಳಬೇಕಾಗುತ್ತದೆ.

ಕೃಷಿಯಲ್ಲಿ ಕೂಲಿ ಕೆಲಸದವರ ಸಮಸ್ಯೆ, ಮಾರುಕಟ್ಟೆಯ ಅನಿಶ್ಚಿತತೆ, ಭೋಜನದ ಖರ್ಚಿಗಿಂತ ಹೆಚ್ಚು ಪ್ರವಾಸಕ್ಕೆ ಖರ್ಚು ಮಾಡಲಾಗುತ್ತಿದೆ ಮತ್ತು ವರಮಾನದಲ್ಲಿ ಬಹಳಷ್ಟು ಅಸಮಾನತೆಯು ದೊಡ್ಡ ಚಿಂತೆಯ ಅಂಶವಾಗಿದೆ ಮತ್ತು ಯೋಚನೆಯ ಕಾರಣವಾಗಿದೆ. ಮೂಲಭೂತ ಸಮಸ್ಯೆಯು ಯಥಾವತ್ತಾದೆ. ಮಳೆಯ ಮೇಲೆ ನಿರ್ಭರವಾಗಿರುವೆ ನೀರಾವರಿಯ ಸೌಲಭ್ಯ ಇಲ್ಲದ ಪ್ರದೇಶಗಳು ಬಹಳಷ್ಟು ಪ್ರದೇಶಗಳಲ್ಲಿ ಪರಿಸ್ಥಿತಿ ಚಿಂತಾ ಜನಕವಾಗಿದೆ. ಈಗಲೂ ಸಹ ಅರ್ಥ ಭಾಗದಷ್ಟು ಜನ ರೈತರು ಪಶುಗಳ ಸಹಾಯದಿಂದಲೇ ಹೊಲವನ್ನು ಉಳುತ್ತಾರೆ ಮತ್ತು 47 ಶೇಕಡಾ ರೈತರು ಉಳಿಸಿದ ಬೀಜವನ್ನು ಬಿತ್ತುತ್ತಾರೆ. ಆದರೆ ಇದೆಲ್ಲದಕ್ಕಿಂತ ಭಯಂಕರವಾದ ವಿಷಯವೆಂದರೆ ಬೇರೆ ಯಾವುದೇ ಬದಲಿ ಮಾರ್ಗವು ಅಥವಾ ಬೆಳೆ ದೊರೆಯದಿದ್ದಾಗ ಬೇಸಾಯವನ್ನೇ ಬಿಟ್ಟು ಬಿಡುತ್ತಾರೆ

ನಮ್ಮ ಹತ್ತಿರ ಪ್ರಪಂಚದ ಕೇವಲ 2.4 ಶೇಕಡಾ ಪ್ರದೇಶ ಮತ್ತು 4ಶೇಕಡಾ ನೀರು ಸಂಪನ್ಮೂಲಗಳಿವೆ. ಆದರೆ ಪ್ರಪಂಚದ 17 ಶೇಕಡಾ ಜನಸಂಖ್ಯೆ ಮತ್ತು 15 ಶೇಕಡಾ ಪಶು ಧನವು ಇರುವ ಕಾರಣದಿಂದ ನಮ್ಮ ಜಮೀನಿನ ಮೇಲೆ ದಬ್ಬಾಳಿಕೆ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂದರೆ ಉಳಿವುದು ಕಡಿಮೆ ಯಾಗುತ್ತಿದೆ ಮತ್ತು ಅನುತ್ಪಾದಕ ಭೂಮಿಗಳಾಗುತ್ತಿವೆ. ಹಸಿರು ಕ್ರಾಂತಿಯ ನಂತರವೂ ಕೂಡ ದೇಶದ ಅನೇಕ ಭಾಗಗಳಲ್ಲಿ ಬಹಳಷ್ಟು ಅಸಮತೋಲನತೆಯನ್ನು ಕಾಣಬಹುದಾಗಿದೆ. ಪಂಜಾಬ್, ಹರಿಯಾಣ ಮತ್ತು ಪಶ್ಚಿಮೋತ್ತರ ಪ್ರದೇಶವು ಬೇಸಾಯದಲ್ಲಿ ಮೊದಲ ಸ್ಥಾನದಲ್ಲಿದೆ ಮತ್ತು ದೇಶದಲ್ಲಿ ಉತ್ಪಾದನೆಯ ಒಟ್ಟು ಗೋಧಿಯಲ್ಲಿ 70 ಶೇಕಡಾ ಗೋದಿಯ ಉತ್ಪಾದನೆಯು ಇದೇ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಆದರೆ ಹಸಿರು ಕ್ರಾಂತಿಯ ನಂತರ ದೇಶದಲ್ಲಿ ರಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಹೇರಳ ಮತ್ತು ಅಸಂತುಲಿತ ಪ್ರಯೋಗದಿಂದ ಕೆಟ್ಟ ಪರಿಣಾಮವು ಒಂಟಾಗತೊಡಗಿತು. ಭಾರತ, ಚೀನ ಮತ್ತು ಅಮೇರಿಕಾ ನಂತರ ಬಹಳಷ್ಟು ರಸಗೊಬ್ಬರಗಳನ್ನು ಬಳಸುವ ರಾಷ್ಟ್ರವಾಗಿ ಹೊರಹೊಮ್ಮಿದೆ. 1951– 52ರಲ್ಲಿ ಪ್ರತಿ ಹೆಕ್ಟೇರ್ ರಾಸಾಯನಿಕಗೊಬ್ಬರದ ಖರ್ಚು ಒಂದು ಕಿಲೋ/ ಹೆಕ್ಟೇರು ಆಗಿದ್ದಿತು ಆದರೆ ಈಗ ಅದು 145 ಕಿ.ಗ್ರಾಂವರೆಗೂ ಮುಟ್ಟಿದೆ. ಉನ್ನತವಾದ ಬೀಜಗಳ ಕ್ಷೇತ್ರದಲ್ಲೂ ಬಹಳಷ್ಟು ಪ್ರಗತಿಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಪಶ್ಚಿಮ ಬಂಗಾಳ, ಕೇರಳ, ಅರ್ಶಶಮ, ಒಡಿಶಾ ಮತ್ತು ಆಂಧ್ರ ಪ್ರದೇಶಗಳಲ್ಲಿ ಉತ್ತಮವಾದ ನೀರಾವರಿ ಸೌಲಭ್ಯಗಳನ್ನು ವಿಕಾಸಿತಗೊಳಿಸಿದ ಮೇಲೆ ಪ್ರಗತಿಯು ತೀವ್ರಗತಿಯಿಂದ ಆಗುತ್ತಲಿದೆ. ಬೆಳೆಗಳ ಉತ್ಪಾದನೆಯು ಅತಿಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದೆ. ಆದರೆ ಇದೂ ಕೂಡ ನಮ್ಮ ಶೇಕಡಾ 60ರಷ್ಟು ಜಮೀನು ಮುಂಗಾರು ಮಳೆಯ ಮೇಲೆ ಆಧಾರಿತವಾಗಿದ್ದಾಗಿದೆ, ಯಾವುದರ ಒಟ್ಟಾರೆ ಉತ್ಪಾದನೆ 40 ಶೇಕಡಾ ಉತ್ಪಾದನೆ ಮಾಡುವುದರ ಜೊತೆಗೆ 60 ಶೇಕಡಾ ಪಶುಪಾಲನೆಯ ಆಧಾರವನ್ನಾಗಿಟ್ಟುಕೊಂಡಿರುತ್ತಾರೆ. ಎಲ್ಲರನ್ನೂ ಪೋಷಿಸುವ ದೊಡ್ಡ ಕಾಳುಗಳ ಬೆಳೆ ಮತ್ತು ಬೇಳಗಳು ಈ ಪ್ರದೇಶದಲ್ಲಿ ಅತ್ಯಧಿಕವಾಗಿ ಬೆಳೆಯಲಾಗುತ್ತದೆ. ಆದರೆ ಇಲ್ಲಿ ಕೃಷಿಯು ಬಹಳ ಸಂಕಟದಲ್ಲಿದೆ. ಹಸಿರು ಕ್ರಾಂತಿಯಲ್ಲಿ ಮುಂಚೂಣಿಯಲ್ಲಿದ್ದ

36ನೇ ಪುಟಕ್ಕೆ.......

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2017-19 RNI NO. KARBIL-2004/18001/Pages 36

## ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸಮಾಚಾರ

ಭಾರತ ಹಣಕಾಸು ವ್ಯವಸ್ಥೆ ಸುಭದ್ರ ಹಾಗೂ ಸುಸ್ಥಿರ ದೇಶದ ಹಣಕಾಸು ವ್ಯವಸ್ಥೆ ಸುಭದ್ರ ಹಾಗೂ ಸುಸ್ಥಿರವಾಗಿದೆಯೆಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ. ಅನೇಕರು ಸುಳ್ಳು ವದಂತಿಗಳನ್ನು ಹರಡಿಸಿ ಬ್ಯಾಂಕ್‌ಗಳಲ್ಲಿ ಠೇವಣಿದಾರರಲ್ಲಿ ಒತ್ತಡವಾಗುವಂತೆ ಮಾಡುತ್ತಿದೆ. ಈ ಸುದ್ದಿಗಳಿಗೆ ಕಿವಿಗೇಡಬೇಡಿ ವಾಸ್ತವ ವಿಷಯಗಳನ್ನು ತಿಳಿದುಕೊಂಡು ನಿರ್ಧಾರ ಬರಬೇಕು ಎಂದು ತಿಳಿಸಿದೆ.



## ಮುಂದಿನ 5 ವರ್ಷಗಳಲ್ಲಿ 1.4 ಟ್ರಿಲಿಯನ್ ಡಾಲರ್ ಸಾರ್ವಜನಿಕ ಸುವಿಧಾಗಳಿಗಾಗಿ (infrastructure) ಗಳಿಗೆ ವೆಚ್ಚ – ನಿರ್ಮಲಾ ಸೀತಾರಾಮನ್

ಭಾರತವು ಮುಂದಿನ 5 ವರ್ಷಗಳಲ್ಲಿ ದೇಶದ ಸಾರ್ವಜನಿಕ ಸುವಿಧಾಗಳ ಅಭಿವೃದ್ಧಿಯಲ್ಲಿ 1.4 ಟ್ರಿಲಿಯನ್ ಡಾಲರ್ ಹಣವನ್ನು ವೆಚ್ಚ ಮಾಡಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ಶ್ರೀಮತಿ ನಿರ್ಮಲಾ ಸೀತಾರಾಮನ್ ಇವರು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಸಭೆಯಲ್ಲಿ ತಿಳಿಸಿದ್ದಾರೆ.

....೩೧ನೇ ಪುಟದಿಂದ

ಪಂಜಾಬ್ ಗ್ರಾಮೀಣ ಸಾಲ ನೀಡುವಿಕೆ ಆಂಧ್ರಪ್ರದೇಶಕ್ಕಿಂತಲೂ ಹೆಚ್ಚಾಗಿದೆ.

ನಮ್ಮಲ್ಲಿ ಕೃಷಿ ಭೂಮಿಯ ದೃಷ್ಟಿಯಿಂದ ನೋಡಿದಾಗ 14 ಬೇಸಾಯ ಮತ್ತು ಜಲವಾಯು ಕ್ಷೇತ್ರಗಳಿವೆ, ಇಲ್ಲಿ ಎಲ್ಲ ತರಹದ ಬೆಳೆಗಳನ್ನು ಮತ್ತು ತರಕಾರಿಗಳನ್ನು ಬೆಳೆಯಲಾಗುತ್ತದೆ. ಆದರೆ ನಮ್ಮ ಪ್ರತಿ ಹೆಕ್ಟೇರಿನ ಉತ್ಪಾದನೆಯು ಬೇರೆ ದೇಶಗಳಿಗೆ ಹೋಲಿಸಿದಾಗ ನಮ್ಮ ಉತ್ಪಾದನೆಯು ಕಡಿಮೆ ಪ್ರಮಾಣದಲ್ಲಿದೆ. ಆದರೂ ಕೂಡ ನಾವು ವಿಶ್ವದಲ್ಲಿ ಎಲ್ಲರೊಂದಿಗೆ ಪ್ರತಿ ಸ್ಪರ್ಧೆ ಮಾಡುವಷ್ಟು ಸಶಕ್ತರಾಗಿದ್ದೇವೆ. ವಿಶ್ವದ 11 ಶೇಕಡಾ ತರಕಾರಿ ಮತ್ತು 15ಶೇಕಡಾ ಹಣ್ಣುಗಳು ಉತ್ಪಾದಿಸಿದ ನಂತರವೂ ನಮ್ಮ ಆಧಾರಭೂತವಾದ ವ್ಯವಸ್ಥೆಯು ಕಡಿಮೆ ಇರುವುದರಿಂದ ನಾವು ರಫ್ತಿನಲ್ಲಿ ಬಹಳ ಹಿಂದುಳಿದಿದ್ದೇವೆ ಇಂತಹ ದೇಶದಲ್ಲಿ ರೈತರ ಪರಿಸ್ಥಿತಿಯನ್ನು ಸುಧಾರಿಸುವ ಸಲುವಾಗಿ ಅವರ ಉತ್ಪಾದನೆಗೆ ಕನಿಷ್ಠ ಬೆಲೆಯನ್ನು ಏರಿಸುವುದರ ಮೂಲಕ ಅದರೊಂದಿಗೆ ಸಂಸ್ಕರಣದ ವ್ಯವಸ್ಥೆಯನ್ನು ಹೆಚ್ಚು ಗಮನವಿಟ್ಟು ಸುಧಾರಿಸುವುದರಿಂದ ರೈತರಿಗೆ ಅನುಕೂಲತೆಯನ್ನು ಮಾಡ ಬಹುದಾಗಿದೆ. ಈ ಕೆಲಸವನ್ನು ಕಾರ್ಯಗತಗೊಳಿಸುವಲ್ಲಿ ಸಹಕಾರಿ ಸಂಘ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸಬಲ್ಲುದಾಗಿದೆ. ಈಗ ಇನ್ನೂ ನಾವು ಕೃಷಿ ಉತ್ಪಾದನೆಗಳ ಶೇಕಡಾ 20 ಸಂಸ್ಕರಣೆಯನ್ನೂ ಮಾಡುತ್ತಲಿಲ್ಲ ಹಾಗೆ ನೋಡಿದಾಗ ಬೇರಲ್ಲ ದೇಶಗಳು ಸಂಸ್ಕರಣೆಯ ಶೇಕಡಾ 80ಕ್ಕೂ ಹೆಚ್ಚು ಆಗುತ್ತದೆ.

ಸರಕಾರವು 2024–25ನೇ ಸಾಲಿನವರೆಗೆ ಕೃಷಿ ಪದಾರ್ಥಗಳ ರಫ್ತಿನ ಪ್ರಮಾಣವನ್ನು 2.75 ಕೋಟಿ ಗಳಿಂದ ಏಳು ಲಕ್ಷ ಕೋಟಿ ರೂಪಾಯಿಯನ್ನು ತಲುಪುವ ಭಾರಿ ಲಕ್ಷ್ಯವನ್ನು ಇಟ್ಟುಕೊಂಡು ಮುನ್ನಡೆಯುತ್ತಿದ್ದಾರೆ, ಆದರೆ ಈ ಗುರಿಯನ್ನು ತಲುಪಲು ಸಹಕಾರಿ ಸಂಸ್ಥೆಗಳ ಸಹಾಯವಿಲ್ಲದೇ ಗುರಿ ತಲುಪುವುದು ಅಸಾಧ್ಯದ ಮಾತಾಗಿದೆ. ಹಾಗೇನಾದರು ರೈತರು ಸಂಗಠಿತ ಸಹಕಾರಿ ಕ್ರಯ–ವಿಕ್ರಮ ಸಮಿತಿಗಳಿದ್ದರೆ ಮತ್ತು ಹಳ್ಳಿ–ಹಳ್ಳಿಗಳಲ್ಲಿ ಅವರ ಗೋದಾಮುಗಳು ಇದ್ದರೆ ಇಂತಹ ಶೋಷಣೆಯಿಂದ ತಪ್ಪಿಸಿಕೊಳ್ಳಬಹುದಾಗಿದೆ. ತಮ್ಮ ಗೋದಾಮುಗಳಲ್ಲಿಟ್ಟ ಬೆಳೆಗಳ ಆಧಾರದ ಮೇಲೆ ಬ್ಯಾಂಕುಗಳಲ್ಲಿ ಮುಂಗಡ ಹಣವನ್ನು ತೆಗೆದುಕೊಳ್ಳಬಹುದಾಗಿದೆ ಮತ್ತು ಸರಿಯಾದ ಬೆಲೆಯು ಬಂದಾಗ ಮಾರುಕಟ್ಟೆಯಲ್ಲಿ ತಮ್ಮ ಬೆಳೆಗಳನ್ನು ಸೂಕ್ತ ಬೆಲೆಗೆ ಮಾರಾಟ ಮಾಡಬಹುದಾಗಿದೆ. ನಾವು ಸಹಕಾರಿ ವಲಯದಲ್ಲಿ ಬರುವ ಎಲ್ಲ ಸಮಸ್ಯೆಗಳನ್ನು ಪರಿಹರಿಸುತ್ತೇವೆ. ಭಾರತದಲ್ಲಿ 11 ರಿಂದ 13ನೇ ಅಕ್ಟೋಬರ್ 2019ರವರೆಗೆ ನವದೆಹಲಿಯ ಪ್ರಗತಿ ಮೈದಾನದಲ್ಲಿ ಮೊಟ್ಟ ಮೊದಲ ಮತ್ತು ಬಹು ದೊಡ್ಡ ಅಂತಾರಾಷ್ಟ್ರೀಯ ಸಹಕಾರಿ ವ್ಯಾಪಾರ ಮೇಳವನ್ನು ಆಯೋಜಿಸಲಾಗುತ್ತಿದೆ. ಇದರಲ್ಲಿ ದೇಶ ವಿದೇಶಗಳ ದೊಡ್ಡ ದೊಡ್ಡ ಸಹಕಾರಿ ಸಮಿತಿಗಳು ತಮ್ಮ ಉತ್ಪಾದನೆಯ ಪ್ರದರ್ಶನವನ್ನು ಮಾಡಲಿವೆ. ಇದರ ದೃಷ್ಟಿಯು ಕೃಷಿ ಮತ್ತು ಅದರ ಸಹಯೋಗಿ ಕ್ಷೇತ್ರವಾಗಿದೆ. ಈ ಕಾರ್ಯಕ್ರಮದಲ್ಲಿ ಭಾರತವು ತನ್ನ ಸಹಕಾರಿ ಕ್ಷೇತ್ರದ ಶಕ್ತಿಯನ್ನು ಪ್ರಪಂಚಕ್ಕೆ ತೋರಿಸಲಿದೆ.

ಕೇಂದ್ರ ಕಛೇರಿ: ದೂರವಾಣಿ ಸಂಖ್ಯೆಗಳು : 080–23378375–80, 23474408, 23573291

ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ: ನಂ. 62, 2ನೇ ಮಹಡಿ, 18ನೇ ಕ್ರಾಸ್, 3ನೇ ಮುಖ್ಯ ರಸ್ತೆ (ಮಾರ್ಗೋಸಾ ರಸ್ತೆ), ಪೈಪ್‌ಲೈನ್ ರಸ್ತೆ ಮಲ್ಲೇಶ್ವರಂ, ಬೆಂಗಳೂರು–560010 ದೂ: 080 23449933/34

ಬೆಂಗಳೂರು ಪ್ರಾಂತೀಯ ಕಛೇರಿ: ನಂ 141, 1ನೇ ಮೇನ್, 11ನೇ ಕ್ರಾಸ್, ಡಾ. ರಾಜ್‌ಕುಮಾರ ರಸ್ತೆ, 1–ಕೆ–ಬ್ಲಾಕ್, ರಾಜಾಜಿನಗರ, ಬೆಂಗಳೂರು–560010 ದೂ: 080 23525546.

ಮೈಸೂರು ಪ್ರಾಂತೀಯ ಕಛೇರಿ: ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821 2332299

ಬೆಳಗಾವಿ ಪ್ರಾಂತೀಯ ಕಛೇರಿ: ಸಂಜೋಗ ಬಿಲ್ಡಿಂಗ್, ಪಿ ಅಂಡ್ ಟಿ ಕ್ವಾಟರ್ಸ್ ಹತ್ತಿರ, ಡಬ್ಬಲ್ ರೋಡ್, ಮಹಾಂತೇಶನಗರ, ಬೆಳಗಾವಿ. ದೂರವಾಣಿ: 0831 – 2401551.

ಕಲಬುರಗಿ ಪಾಂತೀಯ ಕಛೇರಿ: ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ, ಗಾರ್ಡನ್ ರಸ್ತೆ, ಕಲಬುರಗಿ–585102 ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., Nirman Bhavan complex, Dr. Rajkumar Road, 1st Black, Rajajinagar, Bengaluru-560 010